ಜುಲೈ : ೧೯೭೯ | ಸಂಪುಟ : ೫
ಬಸವ ಶಕೆ : ೮೭೩ | ಸಂಚಿಕೆ : ೩

ಕಲ್ಯಾಣ ಕಿರಣ



ಕಲ್ಯಾಣ ಕಿರಣ

ಮಾಸಪತ್ರಿಕೆ

ವಾರ್ಷಿಕ ಚಂದಾ : ೧೨ ರೂ.
ಆಜೀವ ಸದಸ್ಯತ್ವ : ೧೫೧ ರೂ.

ಈ ಬೆಳಕಿನಲ್ಲಿ ಏನಿದೆ ?

ಮುಖಚಿತ್ರ : ಧ್ಯಾನಮಗ್ನಳಾಗಿರುವ ಕುಮಾರಿ ಲಕ್ಷ್ಮೀ ರಾಮದಾಸ ಶೆಣೈ, ಮಂಗಳೂರು
ಹಿಂಬದಿ ಚಿತ್ರ : ತುಂಬಿ ಹರಿಯುತ್ತಿರುವ ಹೇಮಾವತಿ ಅಣೆಕಟ್ಟು

ಕಲ್ಯಾಣ ಕಿರಣ


ಸಂಪುಟ ೫ ಜುಲೈ ೧೯೭೯ ಸಂಚಿಕೆ : ೩

ನುಡಿನೈವೇದ್ಯ

ಹೊರಗೆ ಬಾ ತೆರೆಸರಿಸಿ

ಮತದ ತೆರೆಯನು ಹಾಕಿ ಕತ್ತಲೆಯ ಗುಡಿಯೊಳಗೆ
ಸುತ್ತಿ ಬಳಸಿಹ ಮೌಢ್ಯದ ಗುಪ್ತ ವಾಸನೆಯಲ್ಲಿ
ಯಂತ್ರದೋಪಾದಿಯಲಿ ಮಂತ್ರ ಪಠಿಸುವ ಮನುಜ
ಹೊರಗೆ ಬಾ ತೆರೆಸರಿಸಿ, ತೆರೆ ನೀನು ಕಣ್ಗಳನು.
ನೋಡಿಲ್ಲಿ ನಲಿಯುತಿದೆ ಶಿವಚೇತನ ಸೃಷ್ಟಿಯಲಿ
ಹಾಡಿಲ್ಲಿ ಹೃದಯತುಂಬಿ ಕರ್ತನ ಕರುಣೆಯನು
ಮೃಣ್ಮಯದ ಈ ನೆಲೆಯು ಮಾಯಾಮಂದಿರವಲ್ಲ
ಚಿನ್ಮಯದ ಬುಗ್ಗೆಯು ಸತ್ಯ-ಸುಂದರ ಬೀಡು.
ಕಣ್ಗೆ ಕಾಣುವ ಜಗವ ಮಿಥ್ಯೆ ಎನ್ನುತ ದೂರಿ
ಸುತ್ತಿ ಬಳಸಿಹ ಕರ್ತವ್ಯ ಬಂಧವೆನ್ನುತ ಸಾರಿ,
ಪೂಣ್ಕೆಯಂ ತೊಡದೆ ಮರ್ತ್ಯವ ಪರಿವರ್ತಿಸಲು
ಕಾಣ್ಕೆಯಾಗಿಹ ಬದುಕ ನಿರರ್ಥಕ ಗೈಯುತಿಹೆ.
ಕಾರ್ಯದ ನೆನಸಿನಲಿ ದೇವನಂ ಕಾಣದೆಯೆ
ಕಲ್ಪನೆಯ ಕನಸಿನಲಿ, ಕಲ್ಲಿನಲಿ ಅರಸುತ್ತ
ವಿಕಲ್ಪ ಮತಿಯಿಂದ ಅಡ್ಡಗೋಡೆ ಕಟ್ಟುತ್ತ
ದಾನವತೆಯನಂ ಧರ್ಮವಂತಿಕೆಯೆಂದು ತಿಳಿದಿರುವೆ.
ಶತಮಾನಗಳ ಮೌಢ್ಯತೆಗೆ ಬಹಿಷ್ಕಾರ ಹಾಕಿನ್ನು
ಸ್ವಕಲ್ಪಿತ ಶ್ರೇಷ್ಠತೆಗೆ ಅಗ್ನಿಸ್ಪರ್ಶವ ಗೈಯಿನ್ನು
ಧರ್ಮವಾಗ್ದೇವಿಯನು ಜನಮನಕೆ ತೋರಿನ್ನು
ಸಚ್ಚಿದಾನಂದದ ಸುಖಕೆ ಯತ್ನವಂ ಮಾಡಿನ್ನು.

ನಿಮ್ಮ ಅನಿಸಿಕೆ



ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳಿಗೆ,

ಪರಮ ಪೂಜ್ಯರಲ್ಲಿ ನೂರು ನೂರು ನಮನ.

'ಬಸವ ಭಾರತಿ ವಿದ್ಯಾಲಯ'ವು ಶಾರದೆಯ ಚರಣದಲ್ಲಿ ಸಮರ್ಪಿತಗೊಳ್ಳುತ್ತಿರುವ ಪವಿತ್ರ ಪುಷ್ಪ ಎಂದೇ ನನ್ನ ಭಾವನೆ. ಮಕ್ಕಳ ತಿಳಿ ಮನದ ಕೊಳದಲ್ಲಿ ಧರ್ಮ ಹಂಸಗಳು ಈಜಿದರೆ ಅದೊಂದು ಅಪೂರ್ವ ಸಾಧನೆಯೇ ಸೈ. ದೇವಸಮಾಜ ನಿರ್ಮಾಣ ಮಾಡಬೇಕೆಂಬ ಸದಿಚ್ಛೆ ಉಳ್ಳವರಿಗೆಲ್ಲ ಸುಯೋಗ್ಯ ಕ್ಷೇತ್ರವೆಂದರೆ ಬಾಲಮನಸ್ಸು. ಜಾತಿ, ಮತ ಮುಂತಾದ ವಿಭಿನ್ನ ಭಾವಗಳಿಂದ ಮುಕ್ತವಾದ ಆ ಬಾಲ ಮನಸ್ಸಿನಲ್ಲಿ ಸತ್ಯ-ಶಾಂತಿಯ ಆವಿರ್ಭಾವ ಸಹಜ. ಸಾಧ್ಯ, ಅಲ್ಲವೆ ? ಈ ದಿಶೆಯಲ್ಲಿ ತಾವಿಟ್ಟ ಹೆಜ್ಜೆ ತಮಗೆ ಸಂತೃಪ್ತಿ ನೀಡಲೆಂದು ಪ್ರಾರ್ಥಿಸುವೆ. ಕಲ್ಯಾಣ ಕಿರಣದಲ್ಲಿ ತಮ್ಮ ಚಟುವಟಿಕೆಗಳ ಬಗ್ಗೆ ಓದಿ ಆನಂದಿಸುತ್ತೇನೆ.

ವಿಜಾಪುರ.

—ತಮ್ಮ ಸ್ವಾಮಿ ಸಿದ್ದೇಶ್ವರ ಎಂ. ಎ.


ಪೂಜ್ಯರೇ,

ನಿಮ್ಮ ಪ್ರವಚನವು ಮಂಗಳೂರಲ್ಲಿ ನಡೆಯುವ ಕಾಲಕ್ಕೆ ನಾನೊಂದು ಸಂಕಲ್ಪ ಮಾಡಿಕೊಂಡಿದ್ದೆ. ತುಂಬ ದಿವಸಗಳಿಂದ ವಿವಾಹಕ್ಕೆ ವಿಲಂಬವಾದ ನನ್ನ ತಂಗಿಯ ಮದುವೆ ನೆರವೇರಿದರೆ ಬಸವ ಗುರುಗೋತ್ರಿ ವಿದ್ಯಾಲಯಕ್ಕೆ ನೂರೊಂದು ರೂ.ಗಳನ್ನು ಸಲ್ಲಿಸುವೆನೆಂದು ಬಸವೇಶ್ವರರ ಪಾದದಲ್ಲಿ ಅರಿಕೆ ಮಾಡಿಕೊಂಡಿದ್ದೆ. ಸಂಕಲ್ಪ ಗೈದ ಕೇವಲ ಒಂದು ತಿಂಗಳೊಳಗೆ ನನ್ನ ತಂಗಿಯ ವಿವಾಹ ನೆರವೇರಿತು. ಅತ್ಯಂತ ಆನಂದಭರಿತಳಾದ ನಾನು ದಿ: 26 ರಂದು 111 ರೂ.ಗಳನ್ನು ಕೆನರಾ ಬ್ಯಾಂಕಿಗೆ ಎಂ. ಟಿ. ಮಾಡಿದ್ದೇನೆ. ದಯವಮಾಡಿ ಸ್ವೀಕರಿಸಿ ಆಶೀರ್ವದಿಸಬೇಕೆಂದು ಬೇಡಿಕೊಳ್ಳುವೆ.

ಲಲಿತಾ ಬಾಳಿಗಾ

ಭವಾಂತಿ ಸ್ಟ್ರೀಟ್, ಮಂಗಳೂರು

ಮಾತೃ ಹರಕೆ



ಹಿಂದುತ್ವದ ಕಕ್ಷೆಯನ್ನು ನಿರ್ಣಯಿಸುವಲ್ಲಿ ಅನೇಕ ವಾದವಿವಾದಗಳಿರುತ್ತವೆ. ವಿವಿಧ ರೀತಿಯ ವ್ಯಾಖ್ಯಾನಗಳನ್ನು ನೀಡಿ, ವಿವಿಧ ರೀತಿಯ ತತ್ತ್ವಗಳನ್ನೂ, ಜನಗಳನ್ನು ಧ್ರುವೀಕರಿಸುವ ಪ್ರಯತ್ನಗಳೂ ಇವೆ. ಇಂಥ ಪ್ರಸಂಗದಲ್ಲಿ ಇದೇ ತಿಂಗಳ ಕಲ್ಯಾಣ ಕಿರಣದಲ್ಲಿ ಪ್ರಕಟಗೊಂಡಿರುವ ಜ್ಞಾನಚಂದ್ರ ಉದಯಗಿರಿಯವರ ಲೇಖನವು ಒಂದು ವಿಚಾರದ ಜಾಡನ್ನು ಸ್ಪಷ್ಟೀಕರಿಸಿದೆ. ಇದೇ ರೀತಿಯಾಗಿ ಆಲೋಚಿಸುವವರೂ ಅನೇಕರುಂಟು. ವೈದಿಕ, ಜೈನ, ಬೌದ್ಧ, ಲಿಂಗಾಯತ, ಸಿಖ್ ಧರ್ಮಗಳಲ್ಲಿ ಎರಡು ರೀತಿಯಲ್ಲಿ ವಿಚಾರ ಮಾಡುವ ಜನರುಂಟು. 'ಹಿಂದು' ಎಂದರೆ ಧರ್ಮವಾಚಕ ಶಬ್ದವೆಂದು, 'ಹಿಂದು ಧರ್ಮ'ವೆಂದರೆ ವೇದೋಕ್ತ ವೈದಿಕ ಧರ್ಮವೆಂದು ವ್ಯಾಖ್ಯಾನಿಸಿ, ವೇದ ಪ್ರಾಮಾಣ್ಯಗಳನ್ನು ಮನ್ನಿಸದಿರುವ ಇನ್ನಿತರ ಧರ್ಮಗಳನ್ನು ಅಹಿಂದು ಅಥವಾ ನಾಸ್ತಿಕ ಧರ್ಮವೆಂದು ಕರೆಯುವ ಕೆಲವು ಸನಾತನಿಗಳು ಇರುವದಾದರೆ, ಇದೇ ವ್ಯಾಖ್ಯಾನವನ್ನು ಆಧರಿಸಿ ವೇದಧರ್ಮಾನುಯಾಯಿಗಳು ಮಾತ್ರ ಹಿಂದುಗಳು, ಉಳಿದವರು ಅಹಿಂದುಗಳು ಎಂದು ಘೋಷಿಸಿಕೊಳ್ಳುವ ಅವೈದಿಕ ಧರ್ಮಿಗಳುಂಟು.

ಮಂಗಳೂರಲ್ಲಿ ಪ್ರವಚನ ಮಾಡುವಾಗ ಹಿಂದುತ್ವದ ಬಗ್ಗೆ ಅತ್ಯಂತ ವಿಶಾಲವಾದ ನಿಖರವಾದ ವ್ಯಾಖ್ಯಾನ ಕೊಟ್ಟಾಗ ಓರ್ವ ಸನಾತನಿಗಳು ಹೇಳಿದರು : "ಪ್ರವಚನ ಅಮೋಘವಾಗಿತ್ತು. ಆದರೆ ಸನಾತನ ಧರ್ಮವೊಂದೇ ಧರ್ಮ, ಬಾಕಿ ಎಲ್ಲ ಅಂದರೆ ಜೈನ, ಬೌದ್ಧ, ಲಿಂಗಾಯತ, ಕ್ರೈಸ್ತ, ಮಹಮ್ಮದೀಯ ಮುಂತಾದುವೆಲ್ಲ ಕೇವಲ ಮತಗಳು. ಆದ್ದರಿಂದ ನೀವು ಸನಾತನ ಧರ್ಮ ಒಂದನ್ನೇ ಧರ್ಮವೆಂದು, ಬಾಕಿ ಎಲ್ಲವನ್ನೂ ಮತಗಳೆಂದು ಕರೆಯಬೇಕು...." ಎಂದರು. ಈ ರೀತಿಯಾಗಿ ವಾದ ಮಾಡಿದಾಗಲೇ ಹಲವಾರು ಧರ್ಮಗಳು ಹಿಂದು ಕಕ್ಷೆಯನ್ನು ಬಿಟ್ಟು ಹೊರಸಿಡಿಯಲು ಯತ್ನಿಸುವುದು,

'ಧರ್ಮ' ಪದವು ಅನೇಕ ರೀತಿಯಲ್ಲಿ ಬಳಕೆಯಾಗಿದೆ. ಸುಡುವುದು ಬೆಂಕಿಯ ಧರ್ಮ, ಬೀಸುವುದು ಗಾಳಿಯ ಧರ್ಮ ಎಂದಾಗ ಆಯಾ ವಸ್ತುವಿನ ಸ್ವಭಾವವೆಂದೂ, ಮಕ್ಕಳ ಪಾಲನೆ-ಪೋಷಣೆ ತಂದೆಯ ಧರ್ಮ ಎಂದಾಗ ವಿವಿಧ ವ್ಯಕ್ತಿಗಳ ಕರ್ತವ್ಯಗಳೆಂದು, ಉಪಕಾರ ಗೈಯುವ ಮನುಷ್ಯನನ್ನು ಧರ್ಮಾತ್ಮನೆಂದಾಗ ಪುಣ್ಯಜೀವಿ, ಪರೋಪಕಾರಿ ಎಂದು ಅರ್ಥವಾಗುವುದು. ಸೃಷ್ಟಿಯಲ್ಲಿ ಒಂದು ಧರ್ಮವಿದೆ, ನೀತಿ, ನಿಯಮ, ಕ್ರಮ ಅದಕ್ಕೆ Rta ಎಂದು ಕರೆಯಲಾಗುವುದು. ಇದು ಭೌತಿಕ ನಿಯಮ(Natural laws)ವೂ ಹೌದು, ನೈತಿಕ ನಿಯಮ(moral law)ವೂ ಅಹುದು. ಧರ್ಮಪದವು 'ಧೃ' ಧಾತುವಿನಿಂದ ಉತ್ಪತ್ತಿಯಾಗಿ 'ಎತ್ತಿ ಹಿಡಿ' ಎಂಬ ಅರ್ಥ ಕೊಡುವುದು, 'ಧರಿಸು' ಎಂದೂ ಅರ್ಥ ಕೊಡುವುದು. ಆದ್ದರಿಂದ ಯಾವ ಯಾವ ತತ್ತ್ವಸಮುಚ್ಚಯಗಳಿಂದ ನಾವು ವ್ಯಕ್ತಿ-ಸಮಾಜಗಳನ್ನು ಎತ್ತಿಹಿಡಿಯಬಲ್ಲೆವೋ ಸಂಘಟಿಸಬಲ್ಲೆವೋ ಆ ತತ್ತ್ವಸಮುದಾಯವೇ ಧರ್ಮ. ಈ ತತ್ತ್ವಸಮುದಾಯ ಆಚಾರ ಪ್ರಧಾನವಾದ್ದರಿಂದ ಧರ್ಮವು ಒಂದು ಜೀವನ ವಿಧಾನ, a way of life. ಈ ದೃಷ್ಟಿಯಿಂದ ಆಚರಣೆಯಲ್ಲಿರುವ ಕಾರಣ ಕ್ರೈಸ್ತ, ಇಸ್ಲಾಂ ಯಹೂದಿಗಳು ಧರ್ಮಗಳೇ ವಿನಾ ಮತಗಳಲ್ಲ; ಅದೇ ರೀತಿ ಜೈನ, ಬೌದ್ಧ, ಲಿಂಗಾಯತ, ಸಿಖ್‌ಗಳೂ ಸಹ ಧರ್ಮಗಳು (Religions).

'ಮತ' ಎಂಬ ಶಬ್ದ ಹಿಂದೂಗಳಲ್ಲಿ ರೂಢಿಯಲ್ಲಿದೆಯಷ್ಟೆ. 'ಇದು ನನ್ನ ಮತ' ಎಂದಾಗ opinion, outlook ಎಂದು ಅರ್ಥವಾಗುವುದು. Faith, ನಂಬಿಗೆ ಎಂತಲೂ ಅರ್ಥವಾಗುವುದು. ಆದ್ದರಿಂದ ಸಿದ್ಧಾಂತ, ಸಾಧನೆ, ದರ್ಶನ, ದೀಕ್ಷಾಸಂಸ್ಕಾರ, ಸಾಹಿತ್ಯ, ಪರಂಪರೆ, ಸಂಸ್ಕೃತಿ, ಸಮಾಜ ಶಾಸ್ತ್ರ, ಅರ್ಥಶಾಸ್ತ್ರ, ನೀತಿಶಾಸ್ತ್ರ—ಈ ಹತ್ತು ಲಕ್ಷಣಗಳನ್ನು ಸ್ವತಂತ್ರವಾಗಿ ಹೊಂದಿರುವ ತತ್ತ್ವಸಮುದಾಯವನ್ನು ಧರ್ಮವೆಂದರೆ ತಪ್ಪಾಗದು. ಅದೇನೂ ಕೇವಲ ಮತ (intellectual opinion) ಅಲ್ಲ. ವೈದಿಕ ಅಂದರೆ ವೇದ ಪ್ರಮಾಣದ ಆಧಾರದ ಮೇಲೆ ರೂಪಿತಗೊಂಡ ಧರ್ಮದಲ್ಲಿ ಬರುವ ಅದ್ವೈತ, ದ್ವೈತ ಮುಂತಾದವನ್ನು ಮತಗಳೆನ್ನಲಡ್ಡಿ ಇಲ್ಲ. "ಬ್ರಹ್ಮಸತ್ಯ ಜಗನ್ಮಿಥ್ಯ; ಇದು ನನ್ನ ಮತ", "ಇಲ್ಲ, ಅದೂ ಸತ್ಯ ಇದೂ ಸತ್ಯ, ಪಂಚಭೇದಗಳನ್ನು ನಾನು ಮನ್ನಿಸುತ್ತೇನೆ. ಇದು ನನ್ನ ಮತ." ಹೀಗೆ ಆಲೋಚಿಸುವದು 'ಮತ.'

ಇಷ್ಟನ್ನು ಹಿನ್ನೆಲೆಯಾಗಿಟ್ಟುಕೊಂಡು 'ಹಿಂದು'ತ್ವಕ್ಕೆ ಬರೋಣ. ಹಿಂದೂ ಧರ್ಮವೆಂದರೆ ವೈದಿಕವೆಂದು ವೈದಿಕರಾಗಲಿ, ಅವೈದಿಕರಾಗಲೀ ಅರ್ಥ ಮಾಡಿ ವೈದಿಕರನ್ನಲ್ಲದ ಉಳಿದವರನ್ನು ಹಿಂದು ಕಕ್ಷೆಯಿಂದ ಹೊರತಳ್ಳಿದರೆ; ಅಥವಾ ಅವೈದಿಕರೆಂದು ಹೊರಗೆ ಹೋದರೆ ಇಬ್ಬರದೂ ತಪ್ಪು. ಆಗ ವೈದಿಕನದು

ದುರಭಿಮಾನ, ಅವೈದಿಕನದು ಅಜ್ಞಾನ. ಹಿಂದು ಎನ್ನುವುದು ಒಂದು ಪರಂಪರೆ (Heritage), ಒಂದು ಸಂಸ್ಕೃತಿ(culture), ಭರತ ಭೂಮಿಯೊಡನೆ ಈ ನೆಲ-ಜಲಗಳೊಡನೆ ಮಿಳಿತವಾಗಿ ಬಂದಿರುವ ಉದಾತ್ತ ಸಂಪತ್ತು. ಅಜ್ಞಾನದಿಂದಾಗಲೀ, ಉದಾಸೀನದಿಂದಾಗಲೀ ಅದರಿಂದ ಹೊರಹೋಗುವುದು ಸರಿಯಲ್ಲ.

ಹಿಂದು ಧರ್ಮವೆಂದರೆ ವೈದಿಕ ಧರ್ಮವೆಂದು ಏಕೀಕರಿಸುವುದೂ ತಪ್ಪೇ. ಉಗಮಕಾಲದಿಂದಲೂ ಜನಾಂಗ ವಾಚಕ ಶಬ್ದವಾಗಿಯೇ ಬಂದು, ಹಾಗೆಯೇ ಬೆಳೆದು, ಅಖಂಡ ಭಾರತದಲ್ಲಿ ಜನಾಂಗವು ಹಬ್ಬಿದಾಗಲೂ ಅದೇ ಹೆಸರನ್ನು ಪಡೆದುಕೊಂಡಿದೆ. ಸಿಂಧು ನದಿಯ ಬಯಲಿನ ವಾಸಿಗರು ಎಂದು ಆರಂಭವಾದುದು, ಆ ಜನಾಂಗ ಹಬ್ಬಿದಂತೆಲ್ಲ ಒಂದು ಪರಂಪರೆಯ ಜನಕ್ಕೆ ಅನ್ವಯವಾಯಿತು. ಸಿಂಧೂ ಬಯಲಿನ ದ್ರವಿಡ ಸಂಸ್ಕೃತಿಯು ತಲಕಾವೇರಿಯಿಂದ ಉಗಮಿಸಿದ ಈ ಪರಂಪರೆಯ ನದಿ ಕಾಲಾಂತರದಲ್ಲಿ ಆಗಮಿಸಿದ ಆರ್ಯ ಸಂಸ್ಕೃತಿಯನ್ನು ಇಂಬಿಟ್ಟುಕೊಂಡಿತು. ತಲಕಾವೇರಿಯಲ್ಲಿ ಹುಟ್ಟಿದ ಕಾವೇರಿ ಭಾಗಮಂಡಲದಲ್ಲಿ ಇನ್ನೊಂದು ನದಿಯನ್ನು ಒಳಗೊಂಡು ಮುಂದೆ ಅನೇಕ ವಾಹಿನಿಗಳನ್ನು ಇಂಬಿಟ್ಟುಕೊಂಡು, ಮೂಲನಾಮ ಕಾವೇರಿ ಎಂತಲೇ ಪ್ರಸಿದ್ಧವಾಗಿದೆ. ಅದೇ ರೀತಿ ಸಿಂಧುಕೊಳ್ಳದ ದ್ರವಿಡ, ಶೈವ ಸಂಸ್ಕೃತಿಯು ಏಕಾಂಗಿಯಾಗಿ ಹರಿದು, ಕಾಲಾನಂತರ ವೇದಸಂಸ್ಕೃತಿಯನ್ನು ಇಂಬಿಟ್ಟುಕೊಂಡರೂ, ಮೂಲನಾಮ ಸಿಂಧು, ಹಿಂದು ಸಂಸ್ಕೃತಿಯೆಂದೇ ಖ್ಯಾತಿ ಪಡೆದಿದೆ. ಈ ಹಿಂದೂ ಪರಂಪರೆಯ ವಿಸ್ತಾರವಾದ ವಲಯದಲ್ಲಿ, ಕಾಲಕಾಲಕ್ಕೆ Fission (ಒಡೆಯುವಿಕೆ), Fusion (ಕೂಡುವಿಕೆ), Polarisalion (ಧ್ರುವೀಕರಣ) ಮುಂತಾದವು ಸಂಭವಿಸಿ ಬೇರೆ ಬೇರೆ ಧರ್ಮಗಳಾಗಿ, ಸಮಾಜಗಳಾಗಿ ರೂಪುಗೊಂಡಿವೆ. ಏನೆಲ್ಲ ಸಂಭವಿಸಿದ್ದರೂ ಒಂದು ವಲಯದ ಪರೀಘದಲ್ಲೇ ಸಂಭವಿಸಿವೆ. ಜೈನ-ಬೌದ್ಧ ಧರ್ಮಗಳ ಸಂಘಟನೆ, ಲಿಂಗಾಯತ, ಸಿಖ್ ಧರ್ಮಗಳ ಉಗಮ, ಆರ್ಯಸಮಾಜ-ಬ್ರಹ್ಮಸಮಾಜಗಳ ರಚನೆ—ಈ ಎಲ್ಲವೂ ಹಿಂದು ಸೌರವ್ಯೂಹದಲ್ಲಿ ನಡೆದಿವೆಯೇ ಹೊರತು ಹೊರಗಲ್ಲ. ಭಾರತ ಸ್ವಾತಂತ್ರ್ಯದ ಚಳುವಳಿಯ ಕಾಲದಲ್ಲಿ ಏಕಮೇವಾದ್ವಿತೀಯ ಪುರುಷರಾಗಿದ್ದ ಗಾಂಧೀಜಿ ನಂತರ ರಾಜಕೀಯ ಪಕ್ಷಗಳು ನೂರೆಂಟು ಹೋಳಾಗಿ, ಒಂದಾಗಿ ಅವಾಂತರಗಳಾಗಿದ್ದರೂ ಗಾಂಧೀಜಿ ಪೂಜ್ಯರು, ಮಾನ್ಯರು. ಎಲ್ಲರೂ ಆ ಬೀಜದ ಸಂತತಿಗಳೇ ! ಹಾಗೆ ಶೈವ ವೈದಿಕ, ಜಿನ, ಬೌದ್ಧ, ಲಿಂಗಾಯತ, ಸಿಖ್ ಎಲ್ಲವೂ ಅನೇಕ ಫಲಗಳಾಗಿದ್ದರೂ ಮೂಲ ಹಿಂದೂ ಸಂಸ್ಕೃತಿಯ ತಳಿಗಳೇ ! ಅಂತೆಯೇ ಎಲ್ಲರಿಗೂ ಪೂಜ್ಯವಾಗಿದೆ ಓಂಕಾರ; ಭಾರತೀಯ ಜನ್ಯ ಈ ಧರ್ಮಗಳೆಲ್ಲವೂ ಕರ್ಮಸಿದ್ಧಾಂತ, ಆತ್ಮನ ಅಸ್ತಿತ್ವ, ಮುಕ್ತಿಯ ಕಲ್ಪನೆ, ಯೋಗಸಾಧನೆ ಇವುಗಳಲ್ಲಿ ಏಕಪ್ರಕಾರದ ಶ್ರದ್ಧೆಯನ್ನಿಟ್ಟಿವೆ. ಅನೇಕ ರೀತಿಯ ವ್ಯತ್ಯಾಸಗಳ ಮಧ್ಯೆಯೂ ಏಕರೀತಿಯ ಸೂತ್ರ

ಗಳನ್ನು ಒಳಗೊಂಡಿವೆ. ಒಂದೇ ತಾಯಿ-ತಂದೆಯರಿಂದ ಜನ್ಮ ತಳೆದ ನಾಲ್ಕಾರು ಸಹೋದರರು ಒಂದು ಅವಿಭಕ್ತ ಕುಟುಂಬದ ಮನೆಯಲ್ಲಿ ಇರುವರೆಂದು ಭಾವಿಸುವ. ಅವರಲ್ಲಿ ಸ್ವಲ್ಪ ಸರ್ವಾಧಿಕಾರಿ ಪ್ರವೃತ್ತಿ ಇರುವವನು ಉಳಿದವರಿಗೆ ಹೇಳುವನು, "ಈ ಮನೆ ನನ್ನದು ಮಾತ್ರ ; ನಿಮ್ಮದಾರದೂ ಅಲ್ಲ ; ನೀವೆಲ್ಲ ಬಿಟ್ಟುತೊಲಗಿ." ಆಗ ಇವರು ಕೋರ್ಟಿನ ಮುಖಾಂತರವಾದರೂ ತಮ್ಮ ಹಕ್ಕುಬಾಧ್ಯತೆ ಸ್ಥಾಪಿಸುವರಷ್ಟೆ. "ಅವನು ಹೇಳಿದ, ಆದ್ದರಿಂದ ಅದು ನಮ್ಮದಲ್ಲ" ಎಂದು ಬಿಟ್ಟುಹೋದರೆ ಇದು ಇವರ ಅಜ್ಞಾನ; ಮತ್ತು ಇವರಿಗೇ ಹಾನಿ. ಅದೇ ರೀತಿ ಹಿಂದೂ ಪರಂಪರೆಯು ಭವ್ಯಮನೆ ಯಾವೊಂದು ಧರ್ಮದ—ವೈದಿಕವೇ ಇರಲಿ, ಶೈವವೇ ಆಗಲಿ, ವೈಷ್ಣವವಾಗಲೀ—ಸೊತ್ತಲ್ಲ. ಅದು ಅವಿಭಕ್ತ ಕುಟುಂಬ. ಭಾರತೀಯ ಜನ್ಯ ಧರ್ಮಗಳ ಅನುಯಾಯಿಗಳೆಲ್ಲ ಇದರ ಒಡೆತನದ ಹಕ್ಕುಳ್ಳವರು. ಒಂದು ವೇಳೆ ಸಂಕುಚಿತ ಮನೋಭಾವದ ಸರ್ವಾಧಿಕಾರಿಯ ಪ್ರವೃತ್ತಿಯ ಕೆಲವರು ಏನೋ ವ್ಯಾಖ್ಯಾನಿಸಿದರೆ ಅದನ್ನು ಒಪ್ಪಿಕೊಂಡು ಉಳಿದವರೇಕೆ ಹೊರಗೆ ಹೋಗಬೇಕು. ಈ ದೃಷ್ಟಿಯಿಂದ ಜಿನ, ಬೌದ್ಧ, ಲಿಂಗಾಯತ, ಸಿಖ್ ಧರ್ಮಗಳು ಅವೈದಿಕ ಧರ್ಮಗಳೆನ್ನಬಹುದೆ ವಿನಾ ಅಹಿಂದು ಧರ್ಮಗಳಲ್ಲ ಎಂಬುದನ್ನು ಮನಗಾಣಬೇಕು.

"ಹಿಂದುತ್ವ"ವು ಪರಂಪರಾಗತವಾಗಿ ಪಿತ್ರಾರ್ಜಿತವಾಗಿ ಬರುವ ಸಂಪತ್ತು ; ಅದನ್ನೇಕೆ ಕಳೆದುಕೊಳ್ಳುವ ಯತ್ನ ಮಾಡಬೇಕು. ಹಿಂದುವು ಜನಾಂಗ ವಾಚಕ ಶಬ್ದ. ಅದು ಹಲವಾರು ಮತ, ಧರ್ಮಗಳ ಒಕ್ಕೂಟ, Federation of many religions. ಹಿಂದು ಸೌರವ್ಯೂಹದಲ್ಲಿ ಬರುವ ಪ್ರಮುಖ ಧರ್ಮಗಳು, ಶೈವ, ವೈದಿಕ, ಬೌದ್ಧ, ಜೈನ, ಲಿಂಗಾಯತ, ಸಿಖ್. ಪ್ರತಿಯೊಂದು ಗ್ರಹವು ತನ್ನ ಅಕ್ಷದ ಮೇಲೆ ಸುತ್ತುತ್ತ ತನ್ನ ಅಸ್ತಿತ್ವವನ್ನು ವ್ಯಕ್ತಿತ್ವವನ್ನು ಕಳೆದುಕೊಳ್ಳದೆಯೇ ಸೂರ್ಯನ ಸುತ್ತ ಸುತ್ತುವಂತೆ ಹಿಂದು ಕಕ್ಷೆಯಲ್ಲಿ ಬರುವ ಮೇಲ್ಕಂಡ ಧರ್ಮಗಳು ತಮ್ಮ ವೈಶಿಷ್ಟ್ಯ (Uniqueness), ವ್ಯಕ್ತಿತ್ವ (Individuality) ಕಳೆದುಕೊಳ್ಳದೆ ಓಂಕಾರ ಸೂರ್ಯನ ಸುತ್ತಲೂ ಸುತ್ತುತ್ತ ಹಿಂದುಮಂಡಲದೊಳಗೆ ಸಂಚರಿಸಲು ಸಾಧ್ಯವಿದೆ. ಇವುಗಳ ಅಸ್ತಿತ್ವ ಸಂಪೂರ್ಣವಾಗಿ ಸ್ವಂತಂತ್ರವಾಗಿದೆ. ಅವರ ಧರ್ಮಗ್ರಂಥಗಳು ಬೇರೆ, ಧರ್ಮಗುರು ಬೇರೆ, ಧರ್ಮಾಚರಣೆ ಬೇರೆ. ಸ್ವಧರ್ಮದ ಗ್ರಂಥಗಳು ಅನುಯಾಯಿಗಳಿಗೆ ಪಠ್ಯ ಪುಸ್ತಕಗಳು, ಇತರರ ಗ್ರಂಥಗಳು ಅಧ್ಯಯನ ಗ್ರಂಥಗಳು. ತನ್ನ ಧರ್ಮಗುರು ತನಗೆ ಧರ್ಮದಾತ, ಇತರ ಸಂತರು ಜ್ಞಾನಗುರುಗಳು. ತನ್ನ ಧರ್ಮಗುರು ತನಗೆ ಧರ್ಮಪಿತ. ಅವನಿಗಿಂತ ಪುರಾತನರು ದೊಡ್ಡಪ್ಪಂದಿರು, ನಂತರದವರು ಚಿಕ್ಕಪ್ಪಂದಿರು. ಹಿಂದೂ ಜನಾಂಗ ಒಂದು ತೋಟ. ವಿವಿಧ ಧರ್ಮಗಳು ವಿವಿಧ ಬಗೆಯ ವೃಕ್ಷಗಳು. ರುಚಿ, ರೂಪ ಬೇರೆಯಾದ ಹಣ್ಣುಗಳಾಗಿದ್ದರೂ ಒಂದೇ ಮಾಲಿಕತ್ವದ ಕೆಳಗಿರುವವು. ಹಿಂದೂ

ಸಮಾಜ ಒಂದು ವಾದ್ಯಮೇಳ. ಬೇರೆ ಬೇರೆ ಧರ್ಮಗಳು, ಧರ್ಮಗ್ರಂಥಗಳು ಬೇರೆ ಬೇರೆ ವಾದ್ಯಗಳು, ಓಂಕಾರವೇ ಮೂಲ ಶ್ರುತಿ. ಎಲ್ಲವೂ ಕೂಡಿ ನುಡಿಸಬೇಕು ಭಾವೈಕ್ಯತೆಯ ಗಾಯನವನ್ನು.

ಹಿಂದು ಸಂಘಟನೆಯ ಅವಶ್ಯಕತೆ

ಓರ್ವ ತಾಯಿ-ತಂದೆಯರ ಮಕ್ಕಳಾದ ಅಣ್ಣತಮ್ಮಂದಿರು ಪರಸ್ಪರ ಜಗಳವಾಡುತ್ತಿರುತ್ತಾರೆ. ಆಗ ಆಗಂತುಕನೋರ್ವನು ಬಂದು ಅವಾಚ್ಯ ಶಬ್ದಗಳಿಂದ ತಾಯಿತಂದೆಯರನ್ನು ಬೈಯುತ್ತಾನೆ. ಪರಸ್ಪರ ಜಗಳವನ್ನು ಮರೆತೂ ಸಹ ಎಲ್ಲರೂ ಮಾತಾಪಿತೃಗಳ ಗೌರವ ರಕ್ಷಣೆಗೆ ಸಿದ್ಧರಾಗುತ್ತಾರೆ. ಹಾಗೆ ಹಿಂದು ಕಕ್ಷೆಯೊಳಗೆ ಬರುವ ಅನೇಕ ಧರ್ಮಗಳು ಪರಸ್ಪರ ಭಿನ್ನಾಭಿಪ್ರಾಯಗಳಿಂದ ಕೂಡಿದ್ದರೂ, ಇವರೆಲ್ಲರನ್ನು ಎದುರಿಸುವ Common foe ಏಕಶತ್ರುವಿನ ವಿರುದ್ಧ ಹೋರಾಡುವುದವಶ್ಯ. ಓರ್ವ ಇಸ್ಲಾಂ ಧರ್ಮಾನುಯಾಯಿ ಬಂದರೆ ದ್ರಾವಿಡರ ದೇವಾಲಯಗಳನ್ನು, ಆರ್ಯರ ದೇವಮಂದಿರಗಳನ್ನು, ಜೈನರ ಬಸದಿಗಳನ್ನು, ಲಿಂಗಾಯತರ ಬಸವ ಮಂಟಪಗಳನ್ನು, ಬೌದ್ಧರ ವಿಹಾರಗಳನ್ನು ನೆಲಸಮ ಮಾಡುವನು. ಎಂಥದೇ ಮತಸಂಘರ್ಷಣೆಯುಂಟಾದ ಕಾಲದಲ್ಲೂ (ಕೆಲವು ಅಪವಾದಗಳನ್ನು ಬಿಟ್ಟರೆ ಉದಾ : ಬೌದ್ಧ ಭಿಕ್ಕುಗಳ ವಧೆ, ಮತಾಂಧ ಸಂಪ್ರದಾಯವಾದಿಗಳಿಂದ ಅನುಭವಮಂಟಪ ನಾಶ, ವಚನಸಾಹಿತ್ಯ ದಹನ) ಹಿಂದೂಗಳು ಪರಸ್ಪರ ಕ್ರೂರ ಹೋರಾಟಕ್ಕೆ ನಿಂತಿಲ್ಲ. ಆರ್ಯ—ದ್ರವಿಡ, ಶೈವ-ವೈಷ್ಣವ ಸಂಘರ್ಷಗಳನ್ನು ತಪ್ಪಿಸಲೆಂದೇ ಕೆಲವು ಆಚರಣೆಗಳು ರೂಢಿಯಲ್ಲಿ ಬಂದಿವೆ. ಕಾಶಿಯಿಂದ ರಾಮೇಶ್ವರದವರೆಗೆ ಯಾತ್ರೆ ಮಾಡಬೇಕೆಂಬ ಕಲ್ಪನೆ ಜನರಲ್ಲಿ ಪರಸ್ಪರ ತಿಳುವಳಿಕೆ ಬಾಂಧವ್ಯಗಳು ಹುಟ್ಟಿಸುವ ಯತ್ನ ಮಾತ್ರವೇ ಅಲ್ಲ, ಭಾರತವನ್ನು ಧಾರ್ಮಿಕವಾಗಿ ಬೆಸೆಯುವ ಪ್ರಯತ್ನ. ಓರ್ವನು ಹಿಂದುವಾಗಿ ಉಳಿದಿದ್ದರೆ ಎಂದಾದರೊಂದು ದಿನ ಅವನನ್ನು ಮೂಢನಂಬಿಕೆಯಿಂದ ಹೊರತಂದು, ವೈಚಾರಿಕ ಜಾಗೃತಿಯ ರಕ್ಷಣೆಗೆ ತಂದು, ಜಾತ್ಯತೀತ ಸಮಾಜ ರಚನೆಗೆ ಪ್ರೋತ್ಸಾಹಿಸಿ, ಸುಸಂಘಟಿತ ಸಮಾಜ ರಚನೆಗೆ ಪ್ರೇರೇಪಿಸಬಹುದು. ಆದರೆ ಒಮ್ಮೆ ಅವನು ಮಾತೃಧರ್ಮದಿಂದ, ಮಾತೃಸಂಸ್ಕೃತಿಯಿಂದ ವಂಚಿತನಾಗಿ ಹೊರಗೆ ಹೋದರೆ ನಂತರ ಹಿಂದು ವಾಹಿನಿಯೊಳಕ್ಕೆ ಆಕರ್ಷಿಸುವುದು ಕಷ್ಟ. ಯಾವುದಾದರೊಂದು ಆಶ್ರಮಕ್ಕೆ ಹೋದಾಗ ಅಲ್ಲಿ ಬುದ್ಧನ, ಮಹಾವೀರನ, ಸ್ವಾಮಿ ವಿವೇಕಾನಂದರ, ಬಸವಣ್ಣನವರ ಭಾವಚಿತ್ರ ಕಾಣಬಹುದು. ಯಾವುದೇ ಚರ್ಚು, ಮಸೀದಿಗಳಲ್ಲಿ ಕಾಣಲು ಸಾಧ್ಯವಿಲ್ಲ. ಆದ್ದರಿಂದ ಭಾರತೀಯ ಜನ್ಯಧರ್ಮಗಳವರು ಹಿಂದುತ್ವದ ವ್ಯಾಖ್ಯಾನ ಸರಿಯಾಗಿ ಒಪ್ಪಿಕೊಂಡು, ತಮ್ಮ ಕಕ್ಷೆಯನ್ನು ಹಿರಿದಾಗಿಸಿಕೊಂಡು

ಭಾವೈಕ್ಯತೆಯಿಂದ ಬಾಳಬೇಕೇ ವಿನಾ ಸಂಕುಚಿತ ವ್ಯಾಖ್ಯೆಯಿಂದ ಸಮಾಜವನ್ನು ಕಿರಿದಾಗಿಸಿಕೊಂಡು ಶಕ್ತಿಯನ್ನು ಕುಂಠಿತಗೊಳಿಸಿಕೊಳ್ಳಬಾರದು. ದೇಹದಲ್ಲಿ ದಾರ್ಢ್ಯತೆ ಇದ್ದಾಗ ಎಂಥ ಚಳಿಗಾಳಿ ಬೀಸಿದರೂ ತಡೆಯಬಲ್ಲ; ಮೈಯೊಳಗೆ ಚಳಿ - ಜ್ವರ ವಿದ್ದಾಗ ಗಡಗಡ ನಡಗುವನು. ಹಾಗೆ ಆಂತರಂಗಿಕ ಸಬಲತೆ ಇದ್ದಾಗ ವಿದೇಶೀ ಧರ್ಮ-ಸಂಸ್ಕೃತಿಗಳ ಯಾವುದೇ ಧಾಳಿ ತಡೆಯಲು ಸಾಧ್ಯ. ಒಳಗಿನ ದೌರ್ಬಲ್ಯ, ಕಾದಾಟ, ಸಂಕುಚಿತತೆ, ಜಾತೀಯತೆ ಜಾಸ್ತಿಯಾದಾಗ ತನ್ನ ಪತನ ತಾನೇ ಆಹ್ವಾನಿಸುವನು.

ಆದ್ದರಿಂದ ಹಿಂದುತ್ವ ವ್ಯಾಖ್ಯೆಯನ್ನು ಮಾಡುವುದರಲ್ಲೇ ಕಾಲಹರಣ ಮಾಡದೆ, ವಿಶಾಲವಾದ ವ್ಯಾಖ್ಯೆಯನ್ನು ಒಪ್ಪಿಕೊಂಡು ಸಂಘಟಿಸಿ, ಸಬಲರಾಗಿ, ಸದೃಢರಾಗಿ ಮುಂದುವರಿಯುವದಕ್ಕೆ ಎಲ್ಲರೂ ಪ್ರಯತ್ನಿಸಬೇಕು.

—ಜಗದ್ಗುರು ಮಾತೆ ಮಹಾದೇವಿ

ಸಮಸ್ಯೆ? ಸಮಾಧಾನ!

ಹೆಚ್. ಎಸ್. ಬಸವರಾಜ್, ಕಾಗದ ಕಾರ್ಖಾನೆ, ಭದ್ರಾವತಿ.

❊ ನನ್ನ ಮಿತ್ರನ ತಂಗಿ ವಿವಾಹವಾದ ಎರಡೇ ತಿಂಗಳಲ್ಲಿ ಸ್ಕೂಟರ್ ಅಪಘಾತದಲ್ಲಿ ತನ್ನ ಪತಿಯನ್ನು ಕಳೆದುಕೊಂಡಳು. ಆಕೆಯ ವಯಸ್ಸು 19. ವೈವಾಹಿಕ ಜೀವನದ ಸುಖವನ್ನೇ ಕಂಡರಿಯಳು. ಆಕೆಗೆ ಪುನರ್ವಿವಾಹ ಮಾಡ ಬೇಕೆಂಬ ಅಭಿಪ್ರಾಯ ನನ್ನದು. ಆದರೆ ಆಕೆಯ ತಾಯಿ ತಂದೆ ಇದು ಧರ್ಮ ಬಾಹಿರ ಎನ್ನುತ್ತಾರೆ. ತಮ್ಮ ಸ್ಪಷ್ಟ ಅಭಿಪ್ರಾಯವೇನು ?

* ಬಸವಣ್ಣನವರ ತತ್ತ್ವದ ಪ್ರಕಾರ ವಿಧವಾ ವಿವಾಹ ತಪ್ಪಲ್ಲ. ಉತ್ತರ ಕರ್ನಾಟಕದಲ್ಲಿ ಅತ್ಯಂತ ಸ್ವಾಭಾವಿಕವಾಗಿ ಅದು ಆಚರಣೆಯಲ್ಲಿದೆ. ಇಂದ್ರಿಯಶಕ್ತಿಯ ಬಳಕೆಯಲ್ಲಿ ಶರಣರು ಮೂರುವಿಧಾನ ಹೇಳುತ್ತಾರೆ. ದಮನ, ಉಪಯೋಗೀ ಕರಣ, ಉದಾತ್ತೀಕರಣ. ದಮನ (Suppression) ಅತ್ಯಂತ ಹೀನ. ಉದಾತ್ತೀಕರಣ ಅತ್ಯಂತ ಶ್ರೇಷ್ಠ. ಇದು ವೈರಾಗ್ಯದ ತಳಹದಿಯ ಮೇಲೆ ದೈವೀ ಪಥದಲ್ಲಿ ಮನಸ್ಸು ತೊಡಗಿಸುವ ವಿಧಾನ. ಈ ವಿಧಾನ, ತೀರ ಕಷ್ಟ. ಅಂಥವರನ್ನು ಒತ್ತಾಯದಿಂದ ಮದುವೆಯಾಗದಂತೆ ಇರಿಸುವುದು; ಇಡೀ ಜೀವನವನ್ನು ವೈಧವ್ಯದ ಕಣ್ಣೀರಿನಲ್ಲಿ ಮುಳುಗಿಸುವುದು ಅನ್ಯಾಯ. ಆದ್ದರಿಂದ ಮೌಢ್ಯತೆ ಬಿಟ್ಟು, ಉತ್ತಮ ವರನಿಗೆ ಕೊಟ್ಟು ಮದುವೆ ಮಾಡಿರಿ. ಇದೇನು ಧರ್ಮಬಾಹಿರ ವಲ್ಲ. ದೈವೀಸಮ್ಮತ.

ಉದಯಕುಮಾರ್ ಪಡಶೆಟ್ಟಿ, ಗುಲಬರ್ಗಾ

❊ ಇಲ್ಲೊಬ್ಬ ಜನ್ಮದಿಂದ ಲಿಂಗಾಯಿತ. ಆದರೆ ಸ್ವಧರ್ಮವನ್ನು ಏಳ್ಳಷ್ಟೂ ಓದದೆ, ಆಚರಿಸದೆ ಕ್ರೈಸ್ತಧರ್ಮದ ಆಚರಣೆ, ಪ್ರಾರ್ಥನೆ ಮುಂತಾದ್ದು ಮಾಡುತ್ತಾನೆ. ಕೇಳಿದರೆ ತಾನು ಸರ್ವಧರ್ಮಗಳನ್ನು ಗೌರವಿಸುವವ, ಕೇವಲ ತನ್ನ ಮತದ ಅಭಿಮಾನಿಯಲ್ಲ ಎನ್ನುತ್ತಾನೆ. ಇವನಿಗೆ ತಮ್ಮ ಹಿತೋಪದೇಶ ವೇನು ?

* ಮಹಾರಾಯ ಮೊದಲು ಹೆತ್ತಮ್ಮನಿಗೆ ಗೌರವ ಸಲ್ಲಿಸಲಿ. ಹೆತ್ತ ತಾಯಿಯನ್ನು ಕಡೆಗಣಿಸಿ, ಮಿತ್ರರ ತಾಯಿಯನ್ನು ಅಗ್ರಪೀಠದ ಮೇಲಿರಿಸಿ ಪೂಜಿಸುವದು ಹಿರಿದಲ್ಲ; ತನ್ನ ತಾಯಿಯನ್ನು ಗೌರವಿಸಬೇಕಾದ್ದು ಕರ್ತವ್ಯ. ಇನ್ನಿತರ ಮಾತೆಯರನ್ನು ಗೌರವಿಸುವುದು ಮಾನವೀಯತೆ. ಕರ್ತವ್ಯ ಬಿಟ್ಟ ಮಾನವೀಯತೆಗೆ ಅರ್ಥವಿಲ್ಲ.

ಕೆ. ವಿ. ರವಿಪ್ರಕಾಶ, ಬೆಂಗಳೂರು.

❊ ಮನುಷ್ಯನು ತಾನು ಮಾಡುವ ಕಾಯಕದಲ್ಲಿ, ಮಾತನಾಡುವ ರೀತಿಯಲ್ಲಿ ದೇವರನ್ನು ಅರಿತುಕೊಳ್ಳಲಿಕ್ಕೆ ಸಾಧ್ಯವೆ ? ಹಾಗಾದಲ್ಲಿ ಪೂಜೆ (ಲಿಂಗಪೂಜೆ) ಏತಕ್ಕಾಗಿ ?

* ವಿವಿಧ ಘಟಕಗಳಿಗೆ ವಿವಿಧ ಆಹಾರಗಳನ್ನು ನಾವು ಕೊಡುತ್ತೇವೆ. ಅನ್ನ ಉಂಡಾಗ ದೇಹಕ್ಕೆ ತೃಪ್ತಿ; ಜ್ಞಾನ ಉಂಡಾಗ ಬುದ್ಧಿಗೆ ತೃಪ್ತಿ; ಹಾಗೆ ಪೂಜೆ-ಧ್ಯಾನಗಳಿಂದ ಆತ್ಮನಿಗೆ ತೃಪ್ತಿ. ಕಾಯಕದಿಂದ ಭೌತಿಕ ದೇಹ ರಕ್ಷಣೆ, ರಾಷ್ಟ್ರದ ಆರ್ಥಿಕ ಪ್ರಗತಿ, ಸಂಸಾರ ಸಂರಕ್ಷಣೆ, ಉತ್ತಮ ಮಾತುಗಳಿಂದ ಸಮಾಜದಲ್ಲಿ ಉನ್ನತ ಸಂಸ್ಕೃತಿ, ಸೌಹಾರ್ದತೆ. ಆತ್ಮನ ನಿಃಶ್ರೇಯಸ್ಸು ಕೇವಲ ಧ್ಯಾನ-ಪೂಜಾದಿಗಳಿಂದ ಮಾತ್ರ ಸಾಧ್ಯ. ಆದ್ದರಿಂದ ವ್ಯಕ್ತಿಯಾಗಲೀ ರಾಷ್ಟ್ರವಾಗಲೀ ಸಂಪೂರ್ಣ ಪ್ರಗತಿ ಸಾಧಿಸುವುದು ಮೂರು ಸಾಧನೆಗಳಿಂದ ಭೌತಿಕ ಪ್ರಗತಿ, ನೈತಿಕ ಉದ್ಧಾರ, ಆಧ್ಯಾತ್ಮಿಕ ಉತ್ಥಾನ. ಅವುಗಳಿಗೆ ಬೇಕಾಗುವ ಮೂರು ಮೌಲ್ಯಗಳು ಕಾಯಕ, ಕಲೆ, ಉಪಾಸನೆ.

❊ ಇಂದು ಎಲ್ಲಿ ನೋಡಿದರೂ ಮೋಸ, ವಂಚನೆ, ದರೋಡೆ ಹೆಚ್ಚುತ್ತಿವೆ. ಇದಕ್ಕೆಲ್ಲ ಕಾರಣವೇನು ? ಪರಿಹಾರ ಉಂಟೇ ?

* ಹೆಚ್ಚುತ್ತಿರುವ ಸ್ವಾರ್ಥ, ಭೋಗಾಕಾಂಕ್ಷೆ, ವೈಭೋಗ ಜೀವನದ ದಾಹ, ಒಂದೆಡೆ ಮೋಸ ವಂಚನೆ ದರೋಡೆಗಳಿಗೆ ಕಾರಣ. ಒಪ್ಪತ್ತು ಉಣ್ಣಲೂ ಊಟವಿಲ್ಲದೆ, ಮೈತುಂಬ ಮುಚ್ಚಲು ಬಟ್ಟೆ ಇಲ್ಲದ ಕರಾಳ ಬಡತನ ಇನ್ನೊಂದು ಕಾರಣ. ನೈತಿಕ ಜೀವನದ ಪರಿಚಯವನ್ನು ಮಾಡಿಕೊಡದೆ, ಉತ್ತಮ ಆದರ್ಶಗಳನ್ನು ಜನಾಂಗದಲ್ಲಿ ಬಿತ್ತರಿಸದೆ, ಸಮಾಜ - ರಾಷ್ಟ್ರಗಳಿಗಾಗಿ ಬದುಕುವ ತ್ಯಾಗ ಮನೋಭಾವ ಕಲಿಸದೆ ಇರುವ, ಸಿನಿಮಾಗಳ ಮೂಲಕ ಹೊಲಸು ಜೀವನದ ಕಲ್ಪನೆ ಮಾಡಿಕೊಡುವ ಕೃತಿಯು ಸಮಾಜದ ಸ್ಥಿತಿ ಹದಗೆಡಲು ಕಾರಣ. ಪರಿಹಾರವಿದೆ. ಕೆಟ್ಟ ಸಿನಿಮಾಗಳನ್ನು ತಡೆ ಹಿಡಿಯುವುದು ; ಹೊಲಸು ಭಿತ್ತಿಪತ್ರಗಳನ್ನು ಪ್ರದರ್ಶಿಸದಿರುವುದು. ಪಂಚತಾರಾ ಹೋಟೆಲುಗಳನ್ನು ಬಹಿಷ್ಕರಿಸುವುದು. ಜನಜೀವನ ನೈತಿಕವಾಗಿ ಹದಗೆಡದ ಪರಿಸರವನ್ನು ಕಲ್ಪಿಸಿ, ಬಾಲ್ಯದಿಂದಲೂ . ಮಕ್ಕಳಿಗೆ ರಾಷ್ಟ್ರೀಯ ನೀತಿ, ಸರಳ ಜೀವನ, ಶಿಸ್ತುಗಳನ್ನು ಕಲಿಸುವುದು.

❊ ತನ್ನ ಜೀವನದಲ್ಲಿ ಮನುಷ್ಯನು ಅರಿತೋ ಅರಿಯದೆಯೋ ತಪ್ಪುಗಳನ್ನು ಮಾಡುತ್ತಾನೆ. ಅದಕ್ಕೆ ತಕ್ಕ ಶಿಕ್ಷೆ ಉಂಟೆ ? ಇದ್ದರೆ ಹೇಗೆ ?

* ಅರಿತೇ ಮಾಡಿರಲಿ ಅರಿಯದೆಯೇ ಮಾಡಿರಲಿ ಶಿಕ್ಷೆ ಮಾತ್ರ ಉಂಟು. ಅರಿತು ಮಾಡಿದಾಗ ಅಧಿಕ ಶಿಕ್ಷೆ. ಅರಿಯದೇ ಮಾಡಿದಾಗ ಸ್ವಲ್ಪ ಶಿಕ್ಷೆ. ಒಂದು ಪ್ರಾಣಿಯನ್ನು ಉದ್ದೇಶಪೂರ್ವಕವಾಗಿ ಕೊಲ್ಲುತ್ತಾನೆ ಎಂದಿಟ್ಟುಕೊಳ್ಳೋಣ. ಆಗ

ಶಿಕ್ಷೆಯ ತೀವ್ರತೆ ಬಹಳ. ಅರಿಯದೆ ಕಾಲಿಟ್ಟು, ಕೈಬಡಿಸಿ ಕೊಂದರೆ ಜೀವಹಾನಿಯಾಗುವುದರಿಂದ ಶಿಕ್ಷೆ ಪಡೆಯಲೇಬೇಕು. ತಪ್ಪಿಗಾಗಿ ಪಶ್ಚಾತ್ತಾಪ ಪಟ್ಟರೆ ಶಿಕ್ಷೆಯ ತೀವ್ರತೆ ಇನ್ನೂ ಕಡಿಮೆಯಾಗುವುದು. ಆದರೆ ಕೊಂಚ ಪ್ರಮಾಣದಲ್ಲಿಯಾದರೂ ಅನುಭವಿಸಬೇಕು.

❊ ಮಾಂಸಾಹಾರ ಅವಶ್ಯಕವೆ ? ಹಿಂದೂ ಸಂಸ್ಕೃತಿಯಲ್ಲಿ ಮಾಂಸಾಹಾರ ನಿಷಿದ್ಧವೇ ? ಕಾರಣವೇನು ? ಆಧುನಿಕ ಜೀವನದಲ್ಲಿ ಮಾಂಸಾಹಾರವನ್ನು ಎಲ್ಲರೂ ತ್ಯಜಿಸಲು ಸಾಧ್ಯವೆ ? ಜೀವಹಿಂಸೆ ಪಾಪ ಎನ್ನುವುದಾದರೆ ದೊಡ್ಡಪ್ರಾಣಿ ಸಣ್ಣ ಪ್ರಾಣಿಯನ್ನು ಕೊಲ್ಲುವುದಿಲ್ಲವೆ ? ಅವಕ್ಕೂ ಶಿಕ್ಷೆಯುಂಟೆ ?

* ಮಾಂಸಾಹಾರ ಆವಶ್ಯಕತೆ ಏನಲ್ಲ. ಅದು ಆದರ್ಶವೂ ಅಲ್ಲ, ಅನಿವಾರ್ಯವೂ ಅಲ್ಲ. ಹಿಂದೂ ಸಂಸ್ಕೃತಿಯ ಪ್ರಕಾರ ಅದು ನಿಷಿದ್ಧ. ಕಾರಣವು ಸ್ಪಷ್ಟ, 'ಯಾವನಿಗೆ ಜೀವವನ್ನು ಕೊಡಲು ಹಕ್ಕಿಲ್ಲವೋ ಅವನಿಗೆ ತೆಗೆದುಕೊಳ್ಳಲೂ ಹಕ್ಕಿಲ್ಲ.' ನಿಸರ್ಗಮಾತೆಯ ಸಂಪತ್ತನ್ನು ಅಂದರೆ ಹಾಲನ್ನು ಕುಡಿಯಲು ಹಕ್ಕುಂಟೇ ವಿನಾ ರಕ್ತವನ್ನಲ್ಲ. ಇಂದಿನ ಕಾಲದಲ್ಲಿಯೇ ಮಾಂಸಾಹಾರವನ್ನು ತ್ಯಜಿಸುವ ಅನುಕೂಲತೆ ಜಾಸ್ತಿ. ಮಾಂಸಾಹಾರ ಹಿಂಸಾತ್ಮಕ ಪಾಪ ಎಂಬ ಅರಿವೂ ಇಲ್ಲದಿದ್ದ ಅನೇಕ ದೇಶಗಳು ಅಹಿಂಸೆಯ ಆದರ್ಶಗಳನ್ನು ಭಾರತ ಮುಂತಾದ ದೇಶದಿಂದ ಕಲಿಯುತ್ತವೆ. ಎಸ್ಕಿಮೋ, ಶೀತ ದೇಶಗಳ ಜನಕ್ಕೆ ತರಕಾರಿ ಬೆಳೆಯುವ ಸಾಧ್ಯತೆ ಇಲ್ಲದೆ ಇತ್ತು. ಈಗ ಸುಧಾರಿಸಿದ ವಾಹನ ಸೌಲಭ್ಯದಿಂದ ತರಿಸಿಕೊಳ್ಳಲು ಸಾಧ್ಯತೆ ಹೆಚ್ಚಿದೆ. ದೊಡ್ಡಪ್ರಾಣಿ ಸಣ್ಣ ಪ್ರಾಣಿಯನ್ನು ತಿನ್ನುವುದು ನೈಸರ್ಗಿಕ ವರ್ತನೆ Instinctive behaviour. ಆದರೆ ಮನುಷ್ಯ ಮಾಡಬೇಕಾದ್ದು ಬೌದ್ಧಿಕ ಚಿಂತನೆ. ಆದ್ದರಿಂದ ಪ್ರಾಣಿಗಳು ಮಾಡಿದ ತಪ್ಪನ್ನು ಮನುಷ್ಯ ಮಾಡಿದರೆ ಶಿಕ್ಷಾರ್ಹ. ಸಣ್ಣಕೂಸು ತಾಯಿಯನ್ನು ಕಾಲಿನಿಂದ ಒದೆದರೆ ಅದನ್ನು ಯಾರೂ ಶಿಕ್ಷೆಗೆ ಗುರಿಮಾಡರು. ಮೀಸೆ ಬಂದ ಮಗ ಮಾಡಿದರೆ ಶಿಕ್ಷೆ ಕೊಡುವರಷ್ಟೇ. ಏಕಕೋಶ ಜೀವಿ ಅಮೀಬಾದಿಂದ ಮಾನವನವರೆಗೆ ಭೌತಿಕ ವಿಕಾಸಮಾತ್ರ ಸಾಗುತ್ತ ಹೋಗಿ, ಪಾಪ - ಪುಣ್ಯಗಳ ಬಂಧನ ಮನುಷ್ಯನಿಂದ ಪ್ರಾರಂಭವಾಗುತ್ತೆ.

❊ ಅನೇಕರು ದೇವಸ್ಥಾನ (ಕಲ್ಲಿನ ಮಂದಿರ) ಗಳಲ್ಲಿ ದೇವರಿರುವನೆಂದು ಅಲ್ಲಿಗೆ ಹೋಗಿ ಅಭಿಷೇಕ ಮಾಡಿ ತುಪ್ಪ ಸುರಿದು ಹೋಮಹವನಾದಿ ಮಾಡುವರಲ್ಲ ಇದು ಸರಿಯೇ ? ತಮ್ಮ ಅಭಿಪ್ರಾಯವೇನು ?

* ನಮ್ಮ ಪ್ರಕಾರ ದೇವಸ್ಥಾನ ಒಂದೇ ಒಂದು; ಅದು ಬ್ರಹ್ಮಾಂಡ, ದೇವನು ಸರ್ವಾಂತರ್ಯಾಮಿಯಾಗಿರುವ ದೇವಾಲಯ ಅದು ಮಾತ್ರ. ದೇವನಿಗೆ ಆಕಾರವಿಲ್ಲ ; ಆಕಾರವಿರುವುದು ದೇವರು (Absolute Reality) ಅಲ್ಲ. ಆಕಾರವಿರುವುದು ಮಹಾತ್ಮರು, ಐತಿಹಾಸಿಕ ಮಹಾಪುರುಷರು, ಪೌರಾಣಿಕ ದೇವತೆ

ಗಳಿಗೆ ಮಾತ್ರ. ಸಮಾಜ ಸಂಘಟನೆಗೆ, ಆತ್ಮೋದ್ಧಾರಕ್ಕೆ ದಿವ್ಯಸ್ಥಾನಗಳು ಅಂದರೆ ಪ್ರಾರ್ಥನಾ ಮಂದಿರ, ಧ್ಯಾನಮಂದಿರಗಳು ಬೇಕೇ ಬೇಕು. ತಿನ್ನಲಿಕ್ಕೆ ಬರುವ ವಸ್ತುಗಳನ್ನು ಅಭಿಷೇಕ ಮಾಡಿ ಚೆಲ್ಲುವುದು, ಅಪ್ಯಾಯನ ಪ್ರಸಾದವಾದ ತುಪ್ಪವನ್ನು ಸುಡುವುದು ಮಾನವತ್ವ ವಿರೋಧಿಕಾರ್ಯ. ನಮ್ಮ ಅಂತರಂಗ ವಿಕಾಸಕ್ಕಾಗಿ ಸರಳವಾದ ಪರಿಕರಗಳಾದ ನೀರು, ಊದಿನಕಡ್ಡಿ, ಆರತಿ, ಪುಷ್ಪ-ಪತ್ರೆ, ವಿಭೂತಿ ಮುಂತಾದವೇ ಸಾಕು.

ರಮಾಕಾಂತ, ಕುಂದಾಪುರ

❊ ಬಸವಧರ್ಮ ಎಂಬ ಶಬ್ದವನ್ನು ನೀವು ಬಳಸಿದ್ದನ್ನು ಓದಿದ್ದೆ; ಬಸವ ಧರ್ಮ ಎಂದರೆ ಯಾವುದು ? ಅದರ ಮುಖ್ಯ ಲಕ್ಷಣವೇನು ?

* ಕ್ರಾಂತಿಕಾರಿ ಯುಗಪುರುಷ ಬಸವಣ್ಣನವರು ಯಾವ ಒಂದು ತತ್ವ ಸಮುಚ್ಚಯವನ್ನು, ಆಚಾರ - ವಿಚಾರ ಸಂಹಿತೆಯನ್ನು ಕೊಟ್ಟರೋ ಆ ಸಂವಿಧಾನವೇ ಬಸವಧರ್ಮ. ಈ ಜಗತ್ತಿಗೊಬ್ಬ ಕರ್ತನಿದ್ದಾನೆಂದು ನಂಬಿ, ವಿಶ್ವಗುರು ಬಸವಣ್ಣನವರನ್ನು ಆದಿಗುರುವೆಂದು ಮಂತ್ರಪುರುಷರೆಂದು ಭಾವಿಸಿ ಶರಣಾಗಿ ಅವರು ಹೇಳಿದ ತತ್ವಗಳಲ್ಲಿ ಶ್ರದ್ಧೆಯಿಟ್ಟು ಪಾಲಿಸಿ, ಸಕಲ ಜೀವಾವಳಿಗೆ ಲೇಸನ್ನು ಬಯಸುವವನೇ ಬಸವಧರ್ಮಿ.

ಗುರುಪುತ್ರ ನೇಳ್ಗಿ, ಅವರಾದ


❊ ಬಸವಣ್ಣನವರ ಧರ್ಮದಲ್ಲಿ ಗೋವಿಗೆ ಯಾವ ಸ್ಥಾನವಿದೆ ?

* ಅವರು ಪಂಚಭೂತಗಳ ಪೂಜೆಯನ್ನಾಗಲೀ, ಪ್ರಾಣಿಗಳ ಪೂಜೆಯನ್ನಾಗಲೀ ಪ್ರೋತ್ಸಾಹಿಸರು. ಆದ್ದರಿಂದ ಗೋ ಪೂಜೆಗೆ ಸ್ಥಾನವಿಲ್ಲ. ಮಾನವೀಯತೆಯ ಪರಾಕಾಷ್ಠೆಯಾದ ಅಹಿಂಸಾಧರ್ಮ ಪಾಲನೆಯ ದೃಷ್ಟಿಯಿಂದ ಗೋವಧೆ ಏಕೆ, ಪ್ರಾಣಿವಧೆಯೇ ನಿಷಿದ್ಧ. ಮತ್ತು ಗೋವನ್ನು ಅತ್ಯಂತ ಸ್ನೇಹದಿಂದ, ದಯಾ ದೃಷ್ಟಿಯಿಂದ ನೋಡಿಕೊಳ್ಳುವುದು ಕರ್ತವ್ಯ.

ಪ್ರತಾಪಚಂದ್ರ, ಮಂಗಳೂರು

❊ ನಾನೇ ಆಗಲಿ ಯಾರೇ ಆಗಲಿ ಮೂಢನಂಬಿಕೆಗಳನ್ನು ಅಂಟಿಸಿಕೊಂಡಿದ್ದರೆ ಅವುಗಳನ್ನು ದೂರಮಾಡುವ ಸುಲಭೋಪಾಯ ಯಾವುದು ತಿಳಿಸುವಿರಾ ?

* ಶತ ಶತಮಾನಗಳಿಂದ, ದಶಕಗಳ ಕಾಲದಿಂದ ತಲೆಯಲ್ಲಿ ಬೇರುಬಿಟ್ಟಿರುವ ಮೂಢನಂಬಿಕೆಗಳನ್ನು ತೆಗೆಯುವುದು ತುಂಬಾ ಕಷ್ಟಕರ. ಕಾರಣವೆಂದರೆ, ಮೂಢ ನಂಬಿಕೆಯೇ ಧರ್ಮಾಚರಣೆ ಎಂಬುದು ತಪ್ಪು ತಿಳಿವಳಿಕೆ; ಬಿಟ್ಟರೆ ಏನಾದೀತೋ ಎಂಬ ಅವ್ಯಕ್ತ ಭಯ. ಸದ್ಧರ್ಮ ಯಾವುದು ಎಂಬುದನ್ನು ಅರಿಯಬೇಕಾದರೆ ಶ್ರೀ ದಯಾನಂದ ಸರಸ್ವತಿ, ಶ್ರೀ ಬಸವೇಶ್ವರರು ಮುಂತಾದವರ ಕ್ರಾಂತಿಕಾರೀ ಸಾಹಿತ್ಯ ಓದಬೇಕು. ನಿಜವಾದ ಮತ್ತು ಒಬ್ಬ ದೇವನಿಗೆ ಶರಣಾಗತರಾಗಿ ಅವನು ಸದಾಕಾಲ ನಮ್ಮ ಬೆನ್ನಿಗೆ ಇದ್ದಾನೆ ಎಂಬ ಶ್ರದ್ಧೆ ಬೆಳೆಸಿಕೊಳ್ಳಬೇಕು. ★



—ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳು

ಲಿಂಗದಿಂದುದಿಸಿ ಅಂಗವಿಡಿದಿಪ್ಪ ಪುರಾತನರ
ಇಂಗಿತವೇನೆಂದು ಬೆಸಗೊಂಬಿರಯ್ಯ ?
ಅವರ ನಡೆಯೇ ಆಗಮ, ಅವರ ನುಡಿಯೇ ವೇದ
ಅವರ ಲೋಕದ ಮಾನವರೆಂದೆನ್ನಬಹುದೆ ಅಯ್ಯಾ ?
ಅದೆಂತೆಂದಡೆ ಸಾಕ್ಷಿ :
"ವೃಕ್ಷಾದ್ಭವತಿ ಬೀಜಂ ಹಿ ತದ್ ವೃಕ್ಷೇ ಲೀಯತೇ ಪುನಃ
ರುದ್ರಲೋಕಂ ಪರಿತ್ಯಕ್ತ್ವಾ ಶಿವಲೋಕೇ ಭವಿಷ್ಯತಿ" ಎಂಬುದಾಗಿ
ಅಂಕೋಲೆಯ ಬೀಜದಿಂದಾಯಿತ್ತು ವೃಕ್ಷವು
ಆ ವೃಕ್ಷ ಮರಳಿ ಆ ಬೀಜದೊಳಡಗಿತ್ತು
ಆ ಪ್ರಕಾರದಲ್ಲಿ ಲಿಂಗದೊಳಗಿಂದ ಪುರಾತನರುದ್ಭವಿಸಿ
ಮರಳಿ ಆ ಪುರಾತನರು ಆ ಲಿಂಗದೊಳಗೆ ಬೆರಸಿದರು ನೋಡಿರಯ್ಯಾ
ಇಂತಪ್ಪ ಪುರಾತನರಿಗೆ ನಾನು ಶರಣೆಂದು ಹುಟ್ಟುಗೆಟ್ಟೆನಯ್ಯಾ,
ಚೆನ್ನಮಲ್ಲಿಕಾರ್ಜುನಾ.

—ಜಗನ್ಮಾತಾ ಅಕ್ಕಮಹಾದೇವಿ

ಈ ವಚನ ಅನೇಕ ವಿವಾದಗಳಿಗೆ ಎಡೆಕೊಟ್ಟಿದೆ. ಮುಖ್ಯವಾಗಿ ಕೆಲವು ಪಂಚಾಚಾರ್ಯ ಪರಂಪರೆಯವರು ತಮ್ಮ ವಾದಕ್ಕೆ ಪ್ರಮುಖ ಅಸ್ತ್ರವನ್ನಾಗಿ ಇದನ್ನು ಬಳಸಿಕೊಳ್ಳುತ್ತಾರೆ. "ಪಂಚಾಚಾರ್ಯರು ಲಿಂಗೋದ್ಭವರಾಗಿ ಹುಟ್ಟಿ, ಲೀಲೆಯನ್ನಾಡಿ; ಲಿಂಗದೊಳಗೆ ಅಡಗಿದರು ಎಂಬುದನ್ನು ಅಕ್ಕಮಹಾದೇವಿ ಸ್ಪಷ್ಟ

ಮಾಡಿ ಹೇಳುತ್ತಾಳೆ" ಎಂದು ಸ್ಥಿರೀಕರಿಸುತ್ತಾರೆ. ಇದು ವಾಸ್ತವಿಕವೆ? ಹಾಗಾದರೆ ಅಕ್ಕಮಹಾದೇವಿಯ ವಚನದ ಇಂಗಿತವೇನು?

ಈ ವಚನವು ಐತಿಹಾಸಿಕ ದಾಖಲೆ ಎನ್ನುವುದಕ್ಕಿಂತ ತಾತ್ತ್ವಿಕವಾದ ವಿವರಣೆ ಎಂದರೆ ಸರಿಯಾದೀತು. ಇಲ್ಲಿ ಅವತಾರದ ಕಲ್ಪನೆ (concept of incarnation) ಹೇಳುವುದನ್ನು ಕಾಣುತ್ತೇವೆ. ಮಹಾತ್ಮರು, ಅವತಾರಿಕರು, ದೈವೀಪುರುಷರು ಲಿಂಗದಿಂದ ಅಂದರೆ ಪರಾತ್ಪರ ಪರಮಾತ್ಮನಿಂದ ಉದಿಸಿ, ಶರೀರಧಾರಿಗಳಾಗಿರುತ್ತಾರೆ. ಹೇಗೆ ಅಂತರಿಕ್ಷದಲ್ಲಿ ಸುತ್ತುವ ಅನೇಕ ಉಪಗ್ರಹಗಳು ಅಥವಾ ಚಂದ್ರಲೋಕ, ಮಂಗಳಲೋಕಗಳತ್ತ ಸಾಗುವ ಅನೇಕ ಗಗನನೌಕೆಗಳು ಪೃಥ್ವಿಯ ಮೇಲಿನ ವಿಜ್ಞಾನಿಗಳಿಂದ ನಿಯಂತ್ರಿಸಲ್ಪಡುತ್ತವೆಯೋ ಹಾಗೆ ಮಹಾತ್ಮರ ಜೀವನಗಳೂ ಪರಮಾತ್ಮನಿಂದ ನಿಯಂತ್ರಿಸಲ್ಪಡುತ್ತಿವೆ. ಬೀಜದಿಂದ ವೃಕ್ಷವು ಹೊರಹೊಮ್ಮುವಂತೆ ಲಿಂಗದಿಂದ ಅವರು ಹೊರಹೊಮ್ಮಿ, ಅದರ ಆಶ್ರಯದಲ್ಲೇ ಲೀಲೆಯಾಡುತ್ತಾರೆ. ಈ ಮರ್ತ್ಯದ ಕರ್ತವ್ಯ ತೀರಿದ ಮೇಲೆ ಮತ್ತೆ ಆ ಮೂಲ ನೆಲೆಯಲ್ಲಿ ಲೀನವಾಗುತ್ತಾರೆ. ಮಂದಮಾರುತ ಪರಿಮಳವನ್ನು ಹೊತ್ತು ಸಂಚರಿಸುವಂತೆ ಜ್ಞಾನ-ಅನುಭಾವಗಳನ್ನು ಹೊತ್ತು ಸಂಚರಿಸುತ್ತಾರೆ. ಅವರು ನುಡಿದುದು ವೇದವಾಗುತ್ತದೆ. ವೇದವೆಂದರೆ ಜ್ಞಾನಭಂಡಾರ. ಅನುಭಾವಿಗಳು ನುಡಿದುದೇ ಅಧಿಕೃತ ಶಾಸ್ತ್ರವಾಗುತ್ತದೆ, ಮುಂಬರುವ ಪೀಳಿಗೆಗೆ ಮಾರ್ಗದರ್ಶಕ ದೀಪ್ತಿಯಾಗುತ್ತದೆ. ಜ್ಞಾನಿಗಳು ನಡೆದುದೇ ಆಗಮವಾಗುತ್ತದೆ. ಅಂದರೆ ಶಿವಪಥವಾಗುತ್ತದೆ. ಇಂಥ ಮಹಾಂತರನ್ನು ಮಾನವರೆನ್ನಲಾಗುವುದೆ? ಇಲ್ಲ; ಮಾನವ ದೇಹಧಾರಿಗಳಾಗಿದ್ದೂ ಮಾನವಸಹಜ ಗುಣ-ದೌರ್ಬಲ್ಯಗಳನ್ನು ಮೆಟ್ಟಿನಿಂತ ಅತಿಮಾನವರು (Supermen). ಶರೀರಧಾರಿಯಾಗಿದ್ದೂ ದೈವೀಗುಣಗಳನ್ನು ಅಳವಡಿಸಿಕೊಂಡ ದೈವೀಮಾನವರು. ಲೋಕ ವ್ಯವಹಾರದಲ್ಲಿ ಇವರು ತೊಡಗಿರುವಾಗಲೂ ದೈವೀಶಕ್ತಿಯ ಅರಿವು, ಸಾಮೀಪ್ಯದ ಪ್ರಜ್ಞೆಯನ್ನು ಹೊಂದಿರುವವರು. ಶ್ರೀ ಅರವಿಂದರು ಹೇಳುವಂತೆ "An avatar roughly speaking is one who is conscious of the presence and power of the Divine". ಈ ಮಾತನ್ನೇ ಬಸವಣ್ಣನವರು ಹೀಗೆ ಹೇಳುತ್ತಾರೆ:

"ವನದ ಕೋಗಿಲೆ ಮನೆಗೆ ಬಂದರೆ
ತನ್ನ ವನವ ನೆನೆವುದ ಮಾಣ್ಬುದೆ?
ಮಲೆಯ ಗಜವು ಮನೆಗೆ ಬಂದರೆ
ತನ್ನ ಮಲೆಯ ನೆನೆವುದ ಮಾಣ್ಬುದೆ?
ಕೂಡಲ ಸಂಗನ ಶರಣರು ಮರಳಿ ಮರ್ತ್ಯಕ್ಕೆ ಬಂದರೆ
ತಮ್ಮ ಆದಿಮಧ್ಯಾಂತರಂಗದ ಲಿಂಗವ ನೆನೆವುದ ಮಾಣ್ಬರೆ?

ಕೋಗಿಲೆ ವನದಿಂದ ಬೇರ್ಪಟ್ಟುಮನೆಯ ಪಂಜರದೊಳಗೆ ಸಿಕ್ಕಾಗ ತನ್ನ ವನದ ನಾಮಸ್ಮರಣೆ ಮಾಡುತ್ತ, ಅದನ್ನು ಸೇರುವ ಆಕಾಂಕ್ಷೆ ತಾಳಿರುವದೊ, ಹೇಗೆ ಬೆಟ್ಟದ ಆನೆ ಬಂಧನಕ್ಕೊಳಗಾದ ನಂತರ ಬೆಟ್ಟವನ್ನು, ಬಂಧುವರ್ಗವನ್ನು ಸೇರಿಕೊಳ್ಳುವ ಆತುರದಲ್ಲಿರುತ್ತದೋ ಹಾಗೆ ಅವತಾರಿಕರಾದ ಶರಣರು ಶಿವಮಿಂಧ್ಯವನ್ನಗಲಿ ಮರ್ತ್ಯದ ಬಂಧನ(ಅಥವಾ ಲೀಲೆಗೆ)ಕ್ಕೆ ಬಂದರೆ, ಶಿವಧ್ಯಾನದಲ್ಲೇ ತಲ್ಲೀನರಾಗಿರುತ್ತಾರೆ. "ಇಂತಹ ಜ್ಞಾನಿಗಳು ದೇವಪ್ರತಿನಿಧಿಗಳಾಗಿ ಮರ್ತ್ಯದಲ್ಲಿ ಬಾಳಿ, ಮನುಕುಲವನ್ನು ಮುನ್ನಡೆಸುವ ಮಹೋನ್ನತ ಕಾರ್ಯ ಮಾಡಿ, ಇತಿಹಾಸ ಗರ್ಭದಲ್ಲಿ ಮಿಂಚಿನಂತೆ ಬೆಳಗುತ್ತಾರೆ. ಇಂಥವರ ಬದುಕನ್ನು ಅರಿತು, ಅಳವಡಿಸಿಕೊಂಡು 'ಶರಣು' ಎಂದರೆ ಜನನ-ಮರಣಗಳು ನಶಿಸುವುದರಲ್ಲಿ ಸಂಶಯವಿಲ್ಲ" ಎಂದು ಅಕ್ಕಮಹಾದೇವಿ ಒಂದು ತತ್ತ್ವಜ್ಞಾನವನ್ನು ಇಲ್ಲಿ ಪ್ರತಿಪಾದಿಸುತ್ತಾಳೆ.

ಇಲ್ಲಿ ಲಿಂಗವೆಂದರೆ ಸ್ಥಾವರಲಿಂಗವೆಂದೇನೂ ಅರ್ಥವಾಗದು; Absolute Reality ಆತ್ಯಂತಿಕ ಪರವಸ್ತು ಎಂದು ಮನವರಿಕೆ ಮಾಡಿಕೊಳ್ಳಬೇಕು. ಆದ್ದರಿಂದ ಲಿಂಗದಲ್ಲಿ ಉದಿಸಿ, ಲಿಂಗದಲ್ಲಿ ಅಡಗುತ್ತಾರೆ ಎಂಬ ವಾಕ್ಯಗಳು ಸ್ಥಾವರ ಲಿಂಗೋದ್ಭವರಾಗಿ ಹುಟ್ಟಿದ ಪಂಚಾಚಾರ್ಯರನ್ನು ಕುರಿತು ಎಂಬ ವಿವರಣೆ ತಪ್ಪಾಗುವುದು. ಸಮಸ್ತ ಜೀವರಾಶಿ ಜಗತ್ತು ಹುಟ್ಟುವುದು ಲಿಂಗದಲ್ಲಿ, ಅಂದರೆ ಪರಬ್ರಹ್ಮನಲ್ಲಿ; ಅಡಗುವುದೂ ಪರಮಾತ್ಮನಲ್ಲೇ! ಶರಣ ಪುಂಗವರಂತೂ ತಾವು ಎಲ್ಲಿಂದ ಬಂದವರು? ಎಲ್ಲಿಗೆ ಹೋಗುವವರು? ಎಂಬುದನ್ನು ಸದಾ ನೆನಪಿನಲ್ಲಿ ಇಟ್ಟುಕೊಳ್ಳುವವರು. ಅಂಥವರ ವ್ಯಕ್ತಿತ್ವ ಪರಿಚಯ ಈ ವಚನದಲ್ಲಿದೆ. ★

ಚಂದಾದಾರರು ಪತ್ರ ವ್ಯವಹಾರದಲ್ಲಿ ವಿಳಾಸದ ಮೊದಲಲ್ಲಿ ಬರೆದ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

'ನುಡಿದಂತೆ ನಡೆ' ಎಂದ ಗುರುಬಸವ ಶರಣು

—ಈಚನೂರು ಕುಮಾರ್

ನುಡಿದಂತೆ ನಡೆ ಎಂದ ಬಸವಗೆ ಶರಣು
ನಡೆದಂತೆ ನುಡಿದ ಬಸವ ಪ್ರಭು ಶರಣು ॥ ಪ ॥

ಮೂಢತ್ವ ಮುಸುಕಿರಲು ಕುರುಡುನಂಬಿಕೆಯಿರಲು
ಅರಿವಿನಂಕುಶದಲಿ ತಿವಿದು ಎಚ್ಚರಿಸಿದೆ
ಬರಡಾದ ಜಾತಿಗಳ ನೇಮವಿರದ ನರರುಗಳ
ಶರಣತೆಗೆ ಸಂಘಟಿಸಿ ಶರಣತ್ವ ನಿರ್ಮಿಸಿದೆ ॥ ೧ ॥

ಅಕ್ಷರದ ಅಜ್ಞದಲ್ಲಿರಲು ಸರಳತೆಯ ನುಡಿಯಲ್ಲಿ
ವಚನವಚನವ ಬರೆದು ಅನುಭವವ ತಿಳಿಸಿರುವೆ
ಅಧಿಕಾರ ಇಲ್ಲದೆಯೇ ನಿಸ್ವಾರ್ಥ ಸೇವೆಯಲಿ
ಓರೆಕೋರೆಯ ತಿದ್ದಿ ಜಗದ್ಗುರು ಎನಿಸಿರುವೆ ॥ ೨ ॥

ಶರಣರಿಗೆ ನೀ ತಿಳಿದು ಶರಣರಿಗೆ ನೀನೊಲಿದು
ಅವರೆಲ್ಲ ಹೃದಯಗಳ ದೇಗುಲದಿ ರಾಜಿಸುವೆ
ಕಾಯಕವೇ ಕೈಲಾಸವೆಂದು ವ್ಯವಹರಿವ ತೊಡೆದು
ಆದೇವ ಈಶ್ವರನ ಪರಪುತ್ರ ನೀನಾದೆ ॥ ೩ ॥

★ ★ ★

ನಿಮ್ಮ ರೆಕ್ಕೆಗಳಿಂದಲೇ ಹಾರಿರಿ. ಎರಡನೆಯವರ ರೆಕ್ಕೆಗಳಿಂದ ಹಾರುವುದು ಗಂಡಾಂತರಕಾರಿ. ಏಕೆಂದರೆ ಆ ರೆಕ್ಕೆಗಳನ್ನವರು ಎಂದು ಕಸಿದುಕೊಂಡಾರೆಂಬ ನಿಯಮವಿಲ್ಲ.

—ಮಾಂಟೆಸ್ಕ್ಯೂ

ಯಾವನ ಜೇಬಿನಲ್ಲಿ ದುಡ್ಡಿರದೋ ಅವನ ನಾಲಿಗೆಯ ಮೇಲೆ ಜೇನಿರಬೇಕು.

—ಫ್ರೆಂಚ್ ಗಾದೆ

ದಾಂಪತ್ಯ ಧರ್ಮ - 4

ಕರ್ನಾಟಕದ ಗಾಂಧಿ, ರಾಷ್ಟ್ರಧರ್ಮ ದ್ರಷ್ಟಾರ
ಶ್ರೀ ಹರ್ಡೇಕರ್ ಮಂಜಪ್ಪನವರ ವಿಚಾರಗಳು

ಕೌಟುಂಬಿಕ ಕರ್ತವ್ಯ

ದಂಪತಿಗಳು ಪರಸ್ಪರ ಹೇಗೆ ನಡೆದುಕೊಳ್ಳಬೇಕೆಂಬ ಸಂಗತಿಗಳನ್ನು ಕಳೆದೆರಡು ಪ್ರಕಟಣೆಗಳಲ್ಲಿ ಸಂಕ್ಷಿಪ್ತವಾಗಿ ವಿವರಿಸಿದ್ದೇವಷ್ಟೆ. ಇವರು ತಮ್ಮ ಕುಟುಂಬಕ್ಕಾಗಿ ಮಾಡತಕ್ಕ ಕರ್ತವ್ಯಗಳೂ ಇವೆ. ಅವುಗಳನ್ನು ಮಾಡಿದರೇನೇ ದಾಂಪತ್ಯ ಧರ್ಮವನ್ನನುಸರಿಸಿದಂತಾಗುವುದು. ದಂಪತಿಗಳು ಕುಟುಂಬದ ಅಂಗವಾಗಿದ್ದರೆ ಕುಟುಂಬವಾದರೋ ಸಮಾಜದ ಒಂದು ಭಾಗವು. ಸಮಾಜವು ರಾಷ್ಟ್ರದ ಮುಖ್ಯಾಂಶವು.

ಮನುಷ್ಯನು ದೊಡ್ಡವನಾಗುತ್ತಾ ಜನಾಂಗದ ಸಂಬಂಧವನ್ನು ಹೆಚ್ಚಿಸಿಕೊಂಡು ಹೋದಂತೆ ಆತನ ಹೊಣೆಗಾರಿಕೆಗಳೂ ಹೆಚ್ಚುತ್ತ ಹೋಗುತ್ತವೆ. ವಧೂವರರು ಲಗ್ನದ ಪೂರ್ವದಲ್ಲಿ ತಮ್ಮ ತಮ್ಮ ಮಟ್ಟಿಗೇನೇ, ಸ್ವಸಂರಕ್ಷಣೆಯ ಕರ್ತವ್ಯಗಳನ್ನಷ್ಟೇ ಮಾಡುತ್ತಿದ್ದರು. ಲಗ್ನವಾದ ಮೇಲೆ ಗಂಡನು ಹೆಂಡತಿಗಾಗಿಯೂ ಹೆಂಡತಿಯು ಗಂಡನಿಗಾಗಿಯೂ ಮಾಡತಕ್ಕ ಕಾರ್ಯಗಳುಂಟಾದವು. ಅವುಗಳನ್ನಷ್ಟೇ ಮಾಡಿದರೆ ಅವರ ಜೀವಿತ ಯಾತ್ರೆಯು ಸುಖಕರವಾಗಿ ಸಾಗುವುದಿಲ್ಲ.

ಏಕೆಂದರೆ ಅವರು ತಮ್ಮಂತಹ ಒಂದೆರಡು ಜೋಡಿಗಳಿಂದಲಾದರೂ ಕೂಡಿರತಕ್ಕ ಕುಟುಂಬದಲ್ಲಿಯೇ ವಾಸವಾಗಿರಬೇಕಾಗುತ್ತದೆ. ಎಂದಮೇಲೆ ಅವರು ಆ ಕುಟುಂಬಕ್ಕಾಗಿಯೂ ಕೆಲವು ಕಾರ್ಯಗಳನ್ನು ಮಾಡಲೇಬೇಕು. ಅವರು ಮಕ್ಕಳನ್ನು ಹೆತ್ತರೆ ಅವರಿಗಾಗಿಯೂ ತಾವು ಮಾಡತಕ್ಕ ಕರ್ತವ್ಯಗಳಿವೆ. ಹೆಂಡತಿಯು ತನ್ನ ಗಂಡನ ಕ್ಷೇಮ ಚಿಂತನೆಯೊಂದನ್ನೇ ಮಾಡದೆ ಆತನ ತಾಯಿ-ತಂದೆ, ಬಂಧು ಬಳಗದವರ ಕಡೆಗೂ ಲಕ್ಷಿಸಬೇಕಾಗುತ್ತದೆ. ಗಂಡನಾದರೋ ಹೆಂಡತಿಯ ಹಿತವನ್ನಷ್ಟೇ ಬಯಸಿದರಾಗಲಿಲ್ಲ. ಅವಳ ತಾಯಿ-ತಂದೆ, ಬಂಧು-ಬಳಗದವರ ಕಡೆಗೂ ಗಮನಿಸಲೇಬೇಕಾಗುತ್ತದೆ. ಈ ಎಲ್ಲ ರಕ್ತಸಂಬಂಧಿಗಳ ಹಿತಾಹಿತಗಳು ಪರಸ್ಪರ ಸಂಬಂಧವಿರುವುದರಿಂದ ಯಾರನ್ನೂ ಉಪೇಕ್ಷಿಸಲಿಕ್ಕಾಗುವುದಿಲ್ಲ. ಉಪೇಕ್ಷೆ ಮಾಡಿದ್ದಾದರೆ ತನ್ನ ಜೀವಿತ ಯಾತ್ರೆಗೇನೇ ತೊಂದರೆಯುಂಟಾಗುತ್ತದೆ. ಅಂತೆಯೇ ಇವರೆಲ್ಲರ ವಿಷಯದಲ್ಲಿಯೂ ದಂಪತಿಗಳು ತಾವು ಮಾಡಬೇಕಾದ ಕರ್ತವ್ಯಗಳನ್ನು ತಿಳಿದುಕೊಂಡಿರಬೇಕು. ಇವುಗಳಿಗೇನೇ ಕೌಟುಂಬಿಕ ಕರ್ತವ್ಯಗಳೆಂದು ಹೇಳಿದೆ.

ಲಗ್ನವಾದ ನಂತರ ತನ್ನ ಹೆಂಡತಿಯ ಹಿತಾಹಿತಗಳನ್ನಷ್ಟೇ ಲಕ್ಷಿಸಿ ತನ್ನನ್ನು ಅವರೆಗೆ ಸಾಕಿ ಸಲಹಿದ ತಾಯಿ ತಂದೆಗಳನ್ನೂ ಬಂಧುಗಳನ್ನೂ ಉಪೇಕ್ಷಿಸಬಾರದು. ಅವರ ಸಂರಕ್ಷಣೆಯ ಭಾರವು ತನ್ನ ಮೇಲೆ ಅಂದಿನಿಂದಲೇ ಬಂದಿತೆಂದು ತಿಳಿಯ ಬೇಕು: ತಾಯಿ ತಂದೆಗಳು ತನಗೆ ಮಾಡಿರತಕ್ಕ ಮಹದುಪಕಾರವನ್ನು ತೀರಿಸಲು ತಾನು ಬಹು ಭಕ್ತಿ, ವಿಶ್ವಾಸಗಳಿಂದ ಅವರ ಸೇವೆ ಮಾಡುವುದು ತನ್ನ ಕರ್ತವ್ಯ ವೆಂದೇ ತಿಳಿಯಬೇಕು. ಲಗ್ನವಾದ ನಂತರ ತನ್ನ ತಾಯಿ ತಂದೆಗಳ ಕ್ಷೇಮಕ್ಕಾಗಿ ಪ್ರಯತ್ನಿಸಲು ಹೆಂಡತಿಯನ್ನು ಸಹಾಯಕಳನ್ನಾಗಿ ಮಾಡಿಕೊಳ್ಳಬೇಕೇ ವಿನಾ ಹೆಂಡತಿಯ ಕಡೆಗೇನೇ ಲಕ್ಷಿಸಿ ತಾಯಿ ತಂದೆಗಳನ್ನೇ ಉಪೇಕ್ಷಿಸಬಾರದು, ಅಥವಾ ಅವರನ್ನೇ ತನ್ನ ಹೆಂಡತಿಯ ಸೇವೆ ಸಹಾಯಗಳಿಗಾಗಿ ನಿಯಮಿಸಬಾರದು. ಹೀಗೆ ಮಾಡಿದ್ದಾದರೆ ದಾಂಪತ್ಯ ಧರ್ಮ ಕೊಲೆ ಮಾಡಿದಂತೆಯೇ ಸರಿ.

ಅನೇಕರು ಲಗ್ನವಾದ ನಂತರ ತಂದೆ ತಾಯಿಗಳನ್ನು ಉಪೇಕ್ಷಿಸಿ ಅವರನ್ನು ಅನೇಕ ತೊಂದರೆಗಳಿಗೀಡುಮಾಡುವುದುಂಟು. ಇದು ಭಯಂಕರವಾದ ಪಾಪ ಕೃತ್ಯವೇ ಸರಿ. ಹೆಂಡತಿಯು ತನ್ನ ಗಂಡನ ಸೇವೆ ಮತ್ತು ಕ್ಷೇಮಚಿಂತನೆಗಳನ್ನು ಮಾಡಿದರಷ್ಟೇ ತೀರದು. ತನಗೆ ಅತ್ಯಂತ ಪ್ರಿಯನಾದ ಆ ಗಂಡನನ್ನು ಹೆತ್ತು ಸಾಕಿ ಸಲಹಿದ ತಂದೆ ತಾಯಿಗಳಲ್ಲಿ ಎಂದರೆ ತನ್ನ ಅತ್ತೆ ಮಾವಂದಿರಲ್ಲಿ ಪತಿಗಿಂತಲೂ ಹೆಚ್ಚಾಗಿ ಭಕ್ತಿ ವಿಶ್ವಾಸಗಳನ್ನಿಟ್ಟು ಅವರ ಸೇವೆ ಮಾಡಬೇಕು. ತನ್ನ ಸುಖ ಸೌಕರ್ಯಗಳಿಗೆ ಅಡ್ಡಿಯಾಗುವುದೆಂದು ಭ್ರಮಿಸಿ, ಆ ಅತ್ತೆ-ಮಾವಂದಿರನ್ನು ಉಪೇಕ್ಷಿಸಿ ತನ್ನ ಗಂಡನ ಮನಸ್ಸನ್ನೇ ಬೇರೆ ಮಾಡಿದ್ದಾದರೆ ಅದು ಪತಿಸೇವೆಯಲ್ಲ ; ಪತಿವ್ರತಾ ಧರ್ಮವೂ ಅಲ್ಲ. ಕೇವಲ ವಿಷಯೋಪಭೋಗದ ದುಷ್ಟವರ್ತನೆಯು.

ಆದುದರಿಂದ ದಂಪತಿಗಳು ಈ ವಿಧವಾದ ದುಷ್ಟ ವರ್ತನೆಗೆ ಎಳ್ಳಷ್ಟಾದರೂ ಅವಕಾಶ ಕೊಡಬಾರದು. ಹೆಂಡತಿಯು ಗಂಡನ ಅಣ್ಣ-ತಮ್ಮಂದಿರ ವಿಷಯ ದಲ್ಲಿಯೂ ಅವರ ಹೆಂಡಂದಿರ ವಿಷಯದಲ್ಲಿಯೂ ಪ್ರೇಮಾದರಗಳುಳ್ಳವಳಾಗಿರ ಬೇಕು. ಅವರ ಹಿತಾಹಿತಗಳೆಲ್ಲಾ ತನ್ನ ಗಂಡನ ಹಿತಾಹಿತಗಳಿಗೆ ಸಂಬಂಧಪಟ್ಟಿವೆ ಯೆಂದು ತಿಳಿಯಬೇಕು. ಅವರೆಲ್ಲರಿಂದ ತನ್ನ ಗಂಡನನ್ನು ಬೇರೆ ಮಾಡಿ ತಾನೊಬ್ಬಳೇ ಸುಖ-ಸೌಕರ್ಯಗಳಲ್ಲಿರಬೇಕೆಂಬ ಕ್ಷುದ್ರ ವಿಷಯಗಳನ್ನು ಮಾಡ ಬಾರದು. ಲಗ್ನವಾದ ನಂತರ ತಾಯಿ-ತಂದೆ, ಅಣ್ಣ-ತಮ್ಮಂದಿರನ್ನೆಲ್ಲಾ ಬಿಟ್ಟು ತಾನೂ ತನ್ನ ಹೆಂಡತಿಯೂ ಸುಖದಿಂದಿರಬೇಕೆಂಬ ದುಷ್ಟ ಯೋಚನೆಯನ್ನು ಗಂಡನೂ ಮಾಡಬಾರದು. ಈ ನಡತೆಗಳೆಲ್ಲಾ ದಾಂಪತ್ಯ ಧರ್ಮಕ್ಕೆ ವಿರೋಧ ವಾದುವುಗಳು.

ಕುಟುಂಬದಿಂದ ಬೇರೆಯಾಗಿರುವುದೆಲ್ಲಾ ದುಷ್ಟ ನಡತೆಯೆಂತಲೂ ಕುಟುಂಬ ದಲ್ಲಿ ಕೂಡಿರುವುದೆಲ್ಲಾ ಒಳ್ಳೆಯ ನಡತೆಯೆಂತಲೂ ತಿಳಿಯಬಾರದು. ಕೂಡಿರು ವುದೇ ಆಗಲಿ ಅಥವಾ ಬೇರೆಯಾಗಿರುವುದೇ ಆಗಲಿ ಮುಖ್ಯವಾದುದಲ್ಲ. ಪರಸ್ಪರ

ರಲ್ಲಿ ಪ್ರೇಮಾದರ-ಭಕ್ತಿ-ವಿಶ್ವಾಸಗಳಿರಬೇಕಾದುದೇ ಮುಖ್ಯ. ಹಾಗಿದ್ದವರು ತಮ್ಮ ತಮ್ಮ ಅನುಕೂಲ ಸೌಕರ್ಯಗಳಿಗಾಗಿ ಬೇರೆಯಾಗಿದ್ದರೂ ಕೂಡಿದ್ದಂತೆಯೇ ಸರಿ. ತಂದೆ-ತಾಯಿ, ಅತ್ತೆ-ಮಾವ, ಅಣ್ಣ-ತಮ್ಮ, ಅಕ್ಕ-ತಂಗಿಯರಲ್ಲಿ ಪ್ರೇಮಾದರ-ಭಕ್ತಿ-ವಿಶ್ವಾಸಗಳಿಲ್ಲದೆ ದುಷ್ಟ ದುರ್ಭಾವನೆಗಳಿಂದ ಕೂಡಿದ್ದರೂ ಬೇರೆಯಾಗಿ ದ್ದಂತೆಯೇ ಸರಿ. ಇಷ್ಟೇ ಅಲ್ಲ ; ಬೇರೆಯಾಗಿರುವುದಕ್ಕಿಂತಲೂ ಹೆಚ್ಚು ಅಹಿತಕರ ವಾದುದು. ಅದರಿಂದ ಕುಟುಂಬದಲ್ಲಿ ಯಾವಾಗಲೂ ಅಸಂತೋಷ, ಕಲಹ, ವಂಚನೆ ಮೊದಲಾದವುಗಳೇ ನೆಲೆಸುವುವು. ಆದಕಾರಣ ಇಂತಹ ಯಾವ ಮನೋ ವೃತ್ತಿಗಳಿಗೂ ಅವಕಾಶ ದೊರೆಯದಂತೆ ನಡೆದುಕೊಳ್ಳುವುದು ದಂಪತಿಗಳ ಕೌಟುಂಬಿಕ ಕರ್ತವ್ಯವು.

ದಾಂಪತ್ಯ ಧರ್ಮವೂ ಆತ್ಮೋನ್ನತಿಗೂ ಸಹಾಯವಾಗಿದೆಯೆಂದು ಈ ಮುಂಚೆ ಹೇಳಿದ್ದೇವಷ್ಟೆ. ಅನ್ಯರ ಹಿತಕ್ಕಾಗಿ ತನ್ನನ್ನು ಆಹುತಿಯಾಗಿ ಕೊಡುವ ಕಾರ್ಯಕ್ಷೇತ್ರವು ವಿಶಾಲವಾದಷ್ಟು ಆತನ ಆತ್ಮೋನ್ನತಿಗೆ ಸಮಯ ಸಂದರ್ಭಗಳೂ ಹೆಚ್ಚುತ್ತ ಹೋಗುತ್ತವೆ. ದಾಂಪತ್ಯ ಧರ್ಮದಲ್ಲಿ ಈ ವಿಧವಾದ ಕಾರ್ಯಕ್ಷೇತ್ರವು ಹೆಚ್ಚುತ್ತಾ ಬಂದಿತೆಂಬುದು ಈವರೆಗಿನ ವಿವೇಚನೆಯಿಂದ ಗೊತ್ತಾಗಿರಬಹುದು. ಮೊದಲು ತನ್ನಮಟ್ಟಿಗೇನೇ ನೋಡಿಕೊಳ್ಳುತ್ತಿದ್ದ ವ್ಯಕ್ತಿಯು ಲಗ್ನವಾದಮೇಲೆ ತನ್ನ ಹೆಂಡತಿಗಾಗಿ ಅಥವಾ ಗಂಡನಿಗಾಗಿ ಸ್ವಾರ್ಥತ್ಯಾಗ ಮಾಡಬೇಕಾಯಿತು. ಆಮೇಲೆ ತನ್ನ ಅತ್ತೆಮಾವಂದಿರೇ ಮೊದಲಾದ ಬಳಗದವರಿಗಾಗಿಯೂ ಸ್ವಾರ್ಥ ತ್ಯಾಗ ಮಾಡಬೇಕಾಯಿತು.

ಇಷ್ಟೇ ಅಲ್ಲ; ಆಮೇಲೆ ತನ್ನ ಮಕ್ಕಳ ಕ್ಷೇಮಕ್ಕಾಗಿಯೂ ತಾನು ಹೆಚ್ಚಿನ ಸ್ವಾರ್ಥತ್ಯಾಗ ಮಾಡಬೇಕಾಗುತ್ತದೆ. ಮಕ್ಕಳು ವಿದ್ಯೆ, ಗುಣಶೀಲಾದಿಗಳಿಂದ ಒಳ್ಳೆಯವರಾಗುವಂತೆ ಪ್ರಯತ್ನಿಸುವುದು ಮುಖ್ಯ ಕರ್ತವ್ಯವು. ಆ ಕರ್ತವ್ಯ ವನ್ನು ಮಾಡದೆ ಕೇವಲ ಮಕ್ಕಳನ್ನು ಹೆತ್ತ ಮಾತ್ರದಲ್ಲಿಯೇ ಅವರ ಹೊಣೆಗಾರಿಕೆ ಹೋಗುವುದಿಲ್ಲ.

ರಾಷ್ಟ್ರಸೇವೆ

ದಂಪತಿಗಳು ತಮ್ಮ ಕುಟುಂಬದವರ ಹಿತಾರ್ಥವಾಗಿ ಮಾಡಬೇಕಾದ ಮುಖ್ಯ ಕರ್ತವ್ಯಗಳನ್ನು ಕಳೆದ ಪ್ರಕರಣದಲ್ಲಿ ತಿಳಿಸಿದ್ದೇವಷ್ಟೆ. ಅವುಗಳನ್ನು ಮಾಡಿದ ಮಾತ್ರದಿಂದ ದಾಂಪತ್ಯ ಧರ್ಮವು ಸಂಪೂರ್ಣ ಆಚರಿಸಲ್ಪಟ್ಟಂತಾಗಲಿಲ್ಲ. ದಂಪತಿಗಳು ತಮ್ಮ ನೆರೆಹೊರೆಯವರ, ತಮ್ಮ ಗ್ರಾಮದವರ, ತಮ್ಮ ಸಮಾಜ ದವರ ಮತ್ತು ತಾವು ವಾಸಿಸುವ ರಾಷ್ಟ್ರದವರ ಸೇವೆಯನ್ನು ಕೂಡ ಮಾಡಲೇ ಬೇಕಾಗಿದೆ. ಏಕೆಂದರೆ ತಮ್ಮ ಸುಖ-ಶಾಂತಿಗಳಿಗೆ ಅವರೆಲ್ಲರೂ ಅಪ್ರತ್ಯಕ್ಷವಾಗಿ

ಕಾರಣರಾಗಿಯೇ ಇದ್ದಾರೆ. ಅವರೆಲ್ಲರ ಋಣದಿಂದ ಮುಕ್ತರಾದಾಗಲೇ ದಾಂಪತ್ಯ ಧರ್ಮವನ್ನು ಕೊನೆಗಾಣಿಸಿದಂತಾಗುವುದು.

ದಾಂಪತ್ಯ ಧರ್ಮವು ಇಷ್ಟು ವ್ಯಾಪಕವಾದುದೆಂಬುದು ಅನೇಕರಿಗೆ ತಿಳಿದಿಲ್ಲ. ತಮ್ಮ ಕುಟುಂಬದ ಮಟ್ಟಿಗೆ ಲಕ್ಷಿಸಿದರೆ ತಮ್ಮ ಕರ್ತವ್ಯ ಪೂರೈಸಿತೆಂದು ತಿಳಿದವರೇ ಹೆಚ್ಚು. ತಮ್ಮ ತಾಯಿತಂದೆಗಳ ಮತ್ತು ಗುರುಹಿರಿಯರ ಋಣದಿಂದ ಮುಕ್ತರಾಗಲು ಅವರ ಸೇವೆ ಮಾಡಬೇಕಾದುದು ಹೇಗೆ ದಾಂಪತ್ಯ ಧರ್ಮಕ್ಕೆ ಸಂಬಂಧಪಟ್ಟುದಾಗಿದೆಯೋ ಹಾಗೆಯೇ ಅವರೆಲ್ಲರಿಗೂ ತಾಯಿಯಂತಿದ್ದ ತಮ್ಮ ಜನ್ಮಭೂಮಿಯ ಸೇವೆಯನ್ನು ಮಾಡಬೇಕಾದುದೂ ದಾಂಪತ್ಯ ಧರ್ಮಕ್ಕೆ ಸೇರಿದ್ದಾಗಿಯೇ ಇದೆ.

ತಾವು ಯಾವ ಧರ್ಮವನ್ನು ಅನುಸರಿಸಿದ್ದಾರೆಯೋ ಆ ಧರ್ಮದ ತಮ್ಮ ಬಾಂಧವರ ಹಿತಕ್ಕಾಗಿಯೂ ಪ್ರಾಣಸ್ವರೂಪವಾದ ಆ ಧರ್ಮಕ್ಕೋಸ್ಕರವಾಗಿಯೂ ಸ್ವಾರ್ಥತ್ಯಾಗಮಾಡುವುದು ದಂಪತಿಗಳ ಕರ್ತವ್ಯವೇ ಆಗಿದೆ. ಹೀಗೆ ದಾಂಪತ್ಯ ಧರ್ಮವು ಬಹು ವ್ಯಾಪಕವಾದುದು ಮತ್ತು ಅತ್ಯಂತ ಮಹತ್ವವುಳ್ಳದು ಆಗಿದೆ ಎಂಬುದನ್ನು ತಿಳಿದುಕೊಂಡು ಆ ಪ್ರಕಾರ ಆಚರಿಸಬೇಕು.

ತಮ್ಮ ನೆರೆಹೊರೆಯವರು ಮತ್ತು ಗ್ರಾಮದವರು ಶುಚಿಯಾಗಿದ್ದರೆ ತಮ್ಮ ಆರೋಗ್ಯಕ್ಕೂ ಅವರು ಸಹಾಯ ಮಾಡಿದಂತಾಗುತ್ತದೆ. ಅವರು ಅಶುಚಿಗಳಾಗಿ ನಾನಾ ರೋಗಗಳುಂಟಾಗುವ ರೀತಿಯಲ್ಲಿ ಆಚರಿಸಿದ್ದಾದರೆ ಅವರಿಂದುಂಟಾಗುವ ರೋಗವು ದಂಪತಿಗಳ ಅನಾರೋಗ್ಯಕ್ಕೂ ಕಾರಣವಾಗುವುದು. ಏಕೆಂದರೆ ಇವರೆಲ್ಲರೂ ಒಂದೇ ವಿಧವಾದ ಸಾರ್ವಜನಿಕ ಸಮಯ ಸಂದರ್ಭಗಳಿಗೆ ಹೊಂದಿಕೊಂಡು ಒಂದೇ ವಾತಾವರಣದಲ್ಲಿ ವಾಸಿಸುವವರಾಗಿದ್ದಾರೆ. ಹೀಗೆ ಇವರಿಗೆ ಪರಸ್ಪರ ಸಂಬಂಧವಿರುವುದರಿಂದ ಒಬ್ಬರ ಹಿತಾಹಿತಗಳು ಇನ್ನೊಬ್ಬರ ಹಿತಾಹಿತಗಳಿಗೆ ಸೂಕ್ಷ್ಮರೀತಿಯಲ್ಲಿಯಾದರೂ ಕಾರಣವಾಗಿಯೇ ಆಗುತ್ತವೆ.

ಇದೇ ಪ್ರಕಾರ ಸಮಾಜ ಮತ್ತು ರಾಷ್ಟ್ರಗಳಿಗೂ ಕೂಡ ವ್ಯಕ್ತಿಯು ಸಂಬಂಧಪಟ್ಟಿದ್ದಾನೆ. ಇಷ್ಟೇ ಅಲ್ಲ, ದಂಪತಿಗಳು ಮಾನವ ಕುಟುಂಬದ ಒಂದು ಅಂಗವಾಗಿಯೇ ಇದ್ದಾರೆಂದು ತಿಳಿಯಬೇಕು. ಆದುದರಿಂದ ಸರ್ವ ಜನರೂ ಸುಖಿಗಳಾಗಿ ಜೀವಿಸಲೆಂದೇ ಹಾರೈಸುವುದು ಗೃಹಸ್ಥನ ಧರ್ಮವೆಂದು ನಮ್ಮ ಪ್ರಾಚೀನರು ಗೊತ್ತುಮಾಡಿ, ಆ ಪ್ರಕಾರ ಪ್ರತಿನಿತ್ಯ ಪರಮಾತ್ಮನನ್ನು ಕುರಿತು ಪ್ರಾರ್ಥಿಸಲು ಅಪ್ಪಣೆ ಮಾಡಿದ್ದಾರೆ.

ಜಗತ್ತಿನ ಯಾವುದೋ ಒಂದು ಮೂಲೆಯಲ್ಲಾಗುವ ಹಿತಾಹಿತಗಳ ಪರಿಣಾಮವು ಕೂಡ ಜಗತ್ತಿನ ಎಲ್ಲ ಭಾಗಗಳ ಮೇಲೆಯೂ ಹೇಗಾಗುತ್ತಿದೆಯೆಂಬುದು ಈ ಕಾಲದಲ್ಲಿ ಸ್ಪಷ್ಟ ಗೊತ್ತಾಗುತ್ತಲಿದೆ. ಯುರೋಪಖಂಡದಲ್ಲಾದ ಹಿಂದಿನ ಮಹಾಯುದ್ಧದ ಪರಿಣಾಮವು ಈಗ ಜಗತ್ತಿನ ಪ್ರತಿಯೊಂದು ವ್ಯಕ್ತಿಯ

ಮೇಲೆಯೂ ಅತ್ಯಲ್ಪ ಪ್ರಮಾಣದಲ್ಲಾದರೂ ಆಗಿಲ್ಲವೇ? ಈಗಿನ ಆರ್ಥಿಕ ದುರವಸ್ಥೆಯು ಪ್ರಪಂಚದ ಪ್ರತಿಯೊಂದು ವ್ಯಕ್ತಿಗೂ ಸಂಬಂಧಪಟ್ಟಿಲ್ಲವೆ? ಇದು ಆ ಮಹಾಯುದ್ಧದ ದುಷ್ಪರಿಣಾಮಗಳಲ್ಲಿ ಒಂದಲ್ಲವೆ?

ಜಗತ್ತಿನ ನಾನಾ ರಾಷ್ಟ್ರಗಳ ಸಂಬಂಧವೇ ಈಗ ಹೆಚ್ಚಾಗಿರುವಾಗ ಒಂದು ರಾಷ್ಟ್ರದಲ್ಲಿಯ ಪ್ರತಿಯೊಬ್ಬ ವ್ಯಕ್ತಿಗೂ ಆ ರಾಷ್ಟ್ರದ ಹಿತಾಹಿತಗಳು ಸಂಬಂಧಿಸಿರುವುದೇನು ಆಶ್ಚರ್ಯ? ಆದಕಾರಣ ದಂಪತಿಗಳು ಮಾಡುವ ರಾಷ್ಟ್ರಸೇವೆಯೂ ಅವರ ಉನ್ನತಿಯ ಒಂದು ಕಾರ್ಯವಾಗಿಯೇ ಪರಿಣಮಿಸಿದೆ. ಡಾ॥ ಭಗವಾನದಾಸರು ದಿಲ್ಲಿಯ ಹಿಂದು ಕಾಲೇಜಿನ ವಿದ್ಯಾರ್ಥಿಗಳಿಗೆ "ಸಮಾಜ ಸೇವೆಯ" ವಿಷಯವಾಗಿ ಉಪದೇಶ ಮಾಡುವಾಗ ಹೀಗೆ ಹೇಳಿದರು:

"ರಾಷ್ಟ್ರದ ರಾಜಕೀಯ ಸಂಗತಿಯು ಜನಜೀವನದ ಒಂದು ಮುಖ್ಯಾಂಶವಾಗಿದೆ. ಈಗಿನ ರಾಜಕೀಯ ವಿಷಯವಾದರೋ ಅರ್ಥಶಾಸ್ತ್ರವನ್ನು, ಸ್ವಭಾವ ವೈಶಿಷ್ಟ್ಯವು ಶಿಕ್ಷಣವನ್ನೂ ಅವಲಂಬಿಸಿದೆ. ಮತ್ತು ಇವೆಲ್ಲವು ಅಭೇದ್ಯವಾದ ಅನ್ಯೋನ್ಯ ಸಂಬಂಧದಿಂದಲೇ ನಡೆಯುತ್ತಲಿವೆ".

ಆದಕಾರಣ ದಂಪತಿಗಳು ತಮ್ಮ ನೆರೆಹೊರೆಯವರ ಕ್ಷೇಮಕ್ಕೂ ತಮ್ಮ ಗ್ರಾಮದ ಹಿತಕ್ಕೂ ತಾವು ನೆರವಾಗಲೇಬೇಕು. ತಮ್ಮ ಸಮಾಜ, ಧರ್ಮ ಮತ್ತು ರಾಷ್ಟ್ರಗಳ ಸೇವೆಗೆ ತನು-ಮನ-ಧನಗಳಿಂದ ಸಹಾಯಮಾಡಲೇಬೇಕು. ರಾಷ್ಟ್ರೋನ್ನತಿಗಾಗಿ ನಡೆಯುತ್ತಿರುವ ಪ್ರತಿಯೊಂದು ಕಾರ್ಯದಲ್ಲಿಯೂ ತಮ್ಮ ಶಕ್ತ್ಯನುಗುಣವಾಗಿ ಭಾಗವಹಿಸಲೇಬೇಕು. ರಾಷ್ಟ್ರಕಾರ್ಯಗಳನ್ನು ಉಪೇಕ್ಷಿಸುವುದಾಗಲಿ ಅಥವಾ ರಾಷ್ಟ್ರವಿಘಾತಕ ಕಾರ್ಯಗಳಿಗೆ ನೆರವಾಗುವುದಾಗಲಿ ದಾಂಪತ್ಯ ಧರ್ಮಕ್ಕೆ ವಿರೋಧವಾದುದೆಂದೇ ತಿಳಿಯಬೇಕು.

ದಂಪತಿಗಳು ತಮ್ಮ ಕರ್ತವ್ಯವನ್ನು ರಾಷ್ಟ್ರೋನ್ನತಿಗೆ ಹೀಗೆ ಸಂಬಂಧಗೊಳಿಸಿ ನಡೆಸಿದ್ದಾದರೆ ಅವರ ಜನ್ಮಭೂಮಿಯ ಋಣದಿಂದ ಮುಕ್ತರಾದಂತಾಗುವರು. ನದಿಯು ಉಗಮಸ್ಥಾನದಲ್ಲಿ ಬಿಂದುಮಾತ್ರವಾಗಿದ್ದರೂ ಮುಂದೆ ಹರಿಯುತ್ತ ಅನೇಕ ಹಳ್ಳಕೊಳ್ಳಗಳ ಮೂಲಕ ಹೇಗೆ ದೊಡ್ಡಪ್ರವಾಹವಾಗಿ ಕೊನೆಗೆ ತನ್ನ ಜನ್ಮಕ್ಕೆ ಕಾರಣವಾದ ಸಮುದ್ರವನ್ನೇ ಸೇರುತ್ತದೆಯೋ ಹಾಗೆಯೇ ಒಂದು ವ್ಯಕ್ತಿಯೂ ಕೂಡ ವಿವಾಹದಿಂದ ದಾಂಪತ್ಯಧರ್ಮವನ್ನು ಅನುಸರಿಸಿ ಕುಟುಂಬ, ಗ್ರಾಮ, ಸಮಾಜ ಮತ್ತು ರಾಷ್ಟ್ರಗಳ ಸೇವೆ ಮಾಡುತ್ತಹೋದರೆ ಇವೆಲ್ಲವುಗಳಿಗೂ ಕಾರಣನಾದ ಪರಮಾತ್ಮನಲ್ಲಿ ಸೇರಿಹೋಗುವನು.

ಇದೆ ಮನುಷ್ಯಜನ್ಮದ ಸಾರ್ಥಕ್ಯವು. ಇಂತಹ ಶ್ರೇಷ್ಠವಾದ ಉದ್ದೇಶ [illegible] ದಾಂಪತ್ಯಧರ್ಮವು ನಿರ್ಮಿತವಾಗಿದೆ. [illegible] [illegible] ಬುದ್ಧಿ ಮತ್ತು ಶಕ್ತಿಗಳು [illegible].

ಕವಿಯಾಗಿ ಬಸವಣ್ಣನವರು–೨

ಡಾ॥ ಸಿ. ಪಿ. ಕೃಷ್ಣಕುಮಾರ್
ಕನ್ನಡ ಅಧ್ಯಯನ ಸಂಸ್ಥೆ
ಮಾನಸ ಗಂಗೋತ್ರಿ, ಮೈಸೂರು

ಬಸವಣ್ಣನವರ ಬಾಳೆಲ್ಲ ಶಿವಮಯವಾಗಿ ಶಿವಾರ್ಪಿತವಾದ ಪರಿ ಈ ವಚನದಲ್ಲಿ ಪ್ರಶಾಂತಮನೋಜ್ಞವಾಗಿ ಅಭಿವ್ಯಕ್ತವಾಗಿದೆ.

ವಚನದಲ್ಲಿ ನಾಮಾಮೃತ ತುಂಬಿ,
ನಯನದಲ್ಲಿ ನಿಮ್ಮ ಮೂರುತಿ ತುಂಬಿ,
ಮನದಲ್ಲಿ ನಿಮ್ಮ ನೆನಹು ತುಂಬಿ,
ಕಿವಿಯಲ್ಲಿ ನಿಮ್ಮ ಕೀರುತಿ ತುಂಬಿ—
ಕೂಡಲ ಸಂಗಮದೇವ,
ನಿಮ್ಮ ಚರಣಕಮಲದೊಳಗಾನು ತುಂಬಿ !

ಬಸವಣ್ಣನವರ ಎಲ್ಲ ಕರಣಗಳೂ ಭಗವಂತನನ್ನು ತುಂಬಿಕೊಳ್ಳುತ್ತವೆ; ಸರ್ವೇಂದ್ರಿಯಗಳೂ ಶಿವಪರವಾಗುವ ಅಖಂಡಾನುಭವವನ್ನು ಇಲ್ಲಿ ನೋಡುತ್ತೇವೆ. ಮೊದಲು ಬಾಹ್ಯಕರಣಗಳಲ್ಲಿ, ಅನಂತರ ಮಾನಸದಲ್ಲಿ ಭಗವಂತ ನೆಲೆಗೊಳ್ಳುತ್ತಾನೆ. ಇದರಿಂದ ಭಕ್ತನಲ್ಲಿ ಸರ್ವಾರ್ಪಣಭಾವ ಸಿದ್ಧಿಸಿ, ಅವನ ಸಮಸ್ತವ್ಯಕ್ತಿತ್ವವೂ ಶಿವಾರ್ಪಿತವಾಗಿ, ಭಗವಚ್ಚರಣಪೀಯೂಷಮಗ್ನವಾದ ಭ್ರಮರಸ್ಥಿತಿಯಲ್ಲಿ ವಿರಮಿಸುತ್ತದೆ. ಹೀಗೆ ಅನುಭವಚಿತ್ರಣದಲ್ಲಿ ಮೆಟ್ಟಿಲು ಮೆಟ್ಟಿಲಾಗಿ ಮುಂದುವರೆದು ಗುರಿಮುಟ್ಟಿ ಪರಿಣಾಮರಮಣೀಯವಾಗುವ ರೀತಿ ಬಸಣ್ಣನವರ ಹಲವು ವಚನಗಳಲ್ಲಿ ಕಂಡುಬರುತ್ತದೆ.

ಮೇಲಿನ ವಚನದಲ್ಲಿ ಬಂದಿರುವ "ತುಂಬಿ" ಎಂಬ ಮಾತಿನಲ್ಲಿ ಶ್ಲೇಷೆಯಿದೆ. "ತುಂಬುವುದು" ಮತ್ತು "ಭ್ರಮರ" ಎಂಬ ಎರಡು ಅರ್ಥಗಳೂ ಇಲ್ಲಿ ಸಂಗತವಾಗುತ್ತವೆ. ಬಸವಣ್ಣನವರಲ್ಲಿ ಇಂತಹ ಮಾತಿನ ಚಮತ್ಕಾರಗಳು ಎಷ್ಟೋ ಕಡೆ ಬರುವುದುಂಟು. "ಮೇಲಾಗಲೊಲ್ಲೆನು ಕೀಳಾಗಲಲ್ಲದೆ; ಕೀಳಿಂಗಲ್ಲದೆ ಹಯನು ಕರೆವುದೆ ?" ಎಂಬುದು ಒಳ್ಳೆಯ ಉದಾಹರಣೆ. ಇಲ್ಲಿ ಕೀಳು ಎಂದರೆ ಹಸುವಿನ ಕರು ಎಂದೂ ಅರ್ಥ. ಈ ಚಮತ್ಕಾರಗಳು ಪಾಂಡಿತ್ಯದಿಂದ ಚೋದಿತ

ಮಾದುವಲ್ಲ; ಅವು ಅಪ್ರಯತ್ನಪೂರ್ವಕ, ಸರಳ ರಮ್ಯ, ಅರ್ಥಸ್ವಾರಸ್ಯಕ್ಕೆ ಪೋಷಕ.

ಬಸಣ್ಣನವರ ಮನಸ್ಸು ಎಲ್ಲ ಕಾಲದಲ್ಲೂ ಭ್ರಮರಸ್ಥಿತಿಯಲ್ಲಿರಲಿಲ್ಲ. ಅವರ ಶರಣಜೀವನದ ಮೊದಲ ಹಂತದಲ್ಲಿ, ಸಾಧಕಾವಸ್ಥೆಯಲ್ಲಿ ಬೇರೆ ಬೇರೆ ಪ್ರಾಣಿಪ್ರವೃತ್ತಿಗಳು ಅವರನ್ನು ಕ್ಷೋಭೆಗೊಳಿಸಿದುಂಟು. ಮಾನವಚಿತ್ತದಲ್ಲಿ ವಾಸನಾರೂಪವಾಗಿ ಹುದುಗಿರುವ ಈ ಪಶುಪ್ರವೃತ್ತಿಗಳ ಹಿನ್ನೆಲೆಯಲ್ಲಿ ತಮ್ಮ ಮಾನಸಿಕ ಹೋರಾಟವನ್ನು ಚಿತ್ರಿಸುವಾಗ ಬಸವಣ್ಣನವರು ಹೃದಯಂಗಮವಾದ ಹಲವಾರು ಪ್ರಾಣಿ ರೂಪಕಗಳನ್ನು ನೀಡಿದ್ದಾರೆ. ಇವುಗಳಲ್ಲಿ ಪ್ರಮುಖವಾಗಿ ಕಾಣಿಸತಕ್ಕದ್ದು ಮರ್ಕಟರೂಪಕ. ಅದು ಭ್ರಮರರೂಪಕದೊಡನೆ ಒಂದೆಡೆ ಹೀಗೆ ಬರುತ್ತದೆ:

ಕೊಂಬೆಯ ಮೇಲಣ ಮರ್ಕಟನಂತೆ ಲಂಘಿಸುವುದೆನ್ನ ಮನವು;
ನಿಂದಲ್ಲಿ ನಿಲಲೀಯದೆನ್ನ ಮನವು;
ಹೊಂದಿದಲ್ಲಿ ಹೊಂದಲೀಯದೆನ್ನ ಮನವು
ಕೂಡಲ ಸಂಗಮದೇವಾ,
ನಿಮ್ಮ ಚರಣಕಮಲದಲ್ಲಿ ಭ್ರಮರವಾಗಿರಿಸು ನಿಮ್ಮ ಧರ್ಮ !

ಮೊದಲು ಕಪಿಸ್ವಭಾವ ವರ್ಣಿತವಾಗಿದೆ. ಚಾಂಚಲ್ಯಕ್ಕೆ, ವಿಕೃತ ಚೇಷ್ಟೆಗಳಿಗೆ ಹೆಸರಾದುದು ಮರ್ಕಟ. ಯಾರಿಗೆ ಏನು ಫಲ ಈ ಮಂಗ ಬುದ್ಧಿಯಿಂದ ? ಆದ್ದರಿಂದಲೆ ಬಸವಣ್ಣನವರು ತಮ್ಮ ಮರ್ಕಟ ಮನ ಶಿವಚರಣ ಕಮಲದಲ್ಲಿ ದುಂಬಿಯಾಗಲೆಂದು ಹಾರೈಸುತ್ತಾರೆ. ದುಂಬಿ ಒಂದು ದೃಷ್ಟಿಯಿಂದ ಮರ್ಕಟಕ್ಕೆ ವಿರುದ್ಧವಾದುದು; ಲಾಭಹೀನವಾದ ವ್ಯರ್ಥಾಯಾಸಕ್ಕೆ ಅದು ಪಕ್ಕಾಗುವುದಿಲ್ಲ. ಭ್ರಮಿಸಿರುವ ಗುಣ ಈ ಭ್ರಮರಕ್ಕೆ ಇಲ್ಲವೆಂದಲ್ಲ. ಆದರೆ ಅದು ಹಲವಾರು ಎಡೆಗಳಲ್ಲಿ ಹಾರಾಡಿ ಬಂದರೂ ಒಂದು ಹೂವಿನ ಮೇಲೆ ಕುಳಿತ ತತ್ಕಾಲಕ್ಕಾದರೂ ತದೇಕಚಿತ್ತದಿಂದ ಮಧುಪಾನಲೀನವಾಗುತ್ತದೆ. ಹೂವನ್ನಲ್ಲದೆ ಬೇರೇನನ್ನೂ ಮೂಸುವುದಿಲ್ಲ; ಅದರ ಸಂಗದಿಂದ ಹೂವಿಗೂ ಲಾಭವೇ. ಹೀಗೆ ಒಂದು ಕಡೆ ಮಂಗನ ಚಿತ್ರ, ಇನ್ನೊಂದು ಕಡೆ ಭೃಂಗದ ಚಿತ್ರ ಬೇರೆ ಬೇರೆ ಗುಣಗಳ ಪ್ರತೀಕವಾಗಿ ಬಂದಿವೆ.

ಈ ವಚನದಲ್ಲಿರುವ ಹಂಬಲವೇ ಮತ್ತೊಂದೆಡೆ ಯಾವ ರೂಪಕವೂ ಇಲ್ಲದೆ, ನಿರಲಂಕೃತವಾಗಿ ವ್ಯಕ್ತವಾಗಿದೆ :

ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯಾ ತಂದೆ;
ಸುತ್ತಿಸುಳಿದು ನೋಡದಂತೆ ಅಂಧಕನ ಮಾಡಯ್ಯಾ ತಂದೆ;

ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯಾ ತಂದೆ-
ನಿಮ್ಮ ಶರಣರ ಪಾದವಲ್ಲದೆ ಅನ್ಯವಿಷಯಕ್ಕೆಳಸದಂತೆ ಇರಿಸು
ಕೂಡಲ ಸಂಗಮದೇವ !

ಮನಸ್ಸನ್ನು ಹತ್ತು ದಿಕ್ಕಿಗೆ ಸೆಳೆದು ಹಾಳು ಮಾಡುತ್ತವೆ ಇಂದ್ರಿಯಗಳು. ಇವಿದ್ದರಲ್ಲವೆ ಎಲ್ಲ ಚಪಲತೆಗೆ ಅವಕಾಶ? ಇವುಗಳ ಶಕ್ತಿಯೆ ಉಡುಗಿ ಹೋದರೆಂ? ಆಗ ಏಕಾಗ್ರಚಿತ್ತ ಸಿದ್ಧಿಸುತ್ತದೆ. ಆಧ್ದರಿಂದಲೇ ಬಸವಣ್ಣನವರು ಹೆಳವನಾಗಲು, ಕುರುಡನಾಗಲು, ಕಿವುಡನಾಗಲು ಬಯಸುತ್ತಾರೆ. 'ನಿಮ್ಮ ಶರಣ ಪಾದವಲ್ಲದೆ ಅನ್ಯವಿಷಯಕ್ಕೆಳಸದಂತೆ ಇರಿಸು' ಎಂಬ ಪ್ರಾರ್ಥನೆ ದೊಡ್ಡದಲ್ಲ; ಯಾರೂ ಹಾಗೆ ಹೇಳಬಹುದು. ಆದರೆ ನನ್ನನ್ನು ಹೆಳವನಾಗಿಸು, ಅಂಧನಾಗಿಸು, ಕಿವುಡನಾಗಿಸು ಎಂದು ಮೊರೆಯಿಟ್ಟವರು ಪ್ರಾಯಶಃ ಬಸವಣ್ಣನವರೊಬ್ಬರೆ. ಏನು ಕಳಕಳಿಯಿದೆ ಈ ಮಾತಿನಲ್ಲಿ! ಮನದಾಗುವ, ಕರುಳಿರಿಯುವ ಆಕ್ರಂದನದಾಗಿದೆ ಈ ವಚನ.

ಕೋತಿಯ ರೂಪಕ ಇನ್ನೊಂದು ಕಡೆ ಬೇರೆ ರೀತಿಯಲ್ಲಿ ಬರುತ್ತದೆ :

ಎನ್ನ ಮನವೆಂಬ ಮರ್ಕಟನು
ತಮವಿಕಾರವೆಂಬ ಅಲ್ಪಸುಖದಾಸೆ ಮಾಡಿ,
ವೃಥಾ ಭ್ರಮಣಗೊಂಡು, ನಾನಾದೆಸೆಗೆ ಲಂಘಿಸಿ
ಅಳಲಿಸಿ ಬಳಲಿಸುತ್ತಿದೆ ನೋಡಾ !
ಕೂಡಲ ಸಂಗಮ ದೇವರೆಂಬ ವೃಕ್ಷಕ್ಕೆ ಲಂಘಿಸಿ
ಅಪರಿಮಿತ ಸುಖವನೆಯ್ದುದು ನೋಡಾ.

ಮರ್ಕಟರೂಪಗಳಂತೆಯೆ ಕೆಲವು ಸರ್ಪರೂಪಕಗಳು ಬಸವಣ್ಣನವರಲ್ಲಿ ಬಹಳ ಪ್ರಭಾವಶಾಲಿಯಾಗಿ ಮೈದಾಳಿವೆ. ಸಂಸಾರಕ್ಕೆ, ವಿಷಯಾಸಕ್ತ ಮನಸ್ಸಿಗೆ ವಿಷ ಸರ್ಪದ ಹೋಲಿಕೆ ಅತ್ಯುಚಿತವಾದುದು. ಈ ವಚನವನ್ನು ನೋಡೋಣ:

ಮನವೇ ಸರ್ಪ, ತನುವೇ ಹೇಳಿಗೆ !
ಹಾವಿನೊಡತಣ ಹುದುವಾಳಿಗೆ !
ಇನ್ನಾವಾಗ ಕೊಂದಹುದೆಂದರಿಯೆ, ಇನ್ನಾವಾಗ ತಿಂದಹುದೆಂದರಿಯೆ
ನಿಚ್ಚಕ್ಕೆ ನಿಮ್ಮ ಪೂಜಿಸಬಲ್ಲಡೆ ಅದೇ ಗಾರುಡ ಕೂಡಲ ಸಂಗಮದೇವ!

ಒಂದೊಂದು ಮನಸ್ಸೂ ಒಂದೊಂದು ವಿಷದ ಹಾವು. ಕೂಡಲಸಂಗಮದೇವನ ಭಕ್ತಿಯ ಗಾರುಡವಿದ್ಯೆ ಕರಗತವಾದರೆ ಮಾತ್ರ ಈ ಸರ್ಪಗಳೊಡನೆ ನಿಶ್ಚಿಂತೆಯಿಂದ ಬಾಳಬಹುದು ; ಆ ಶ್ರೀರಕ್ಷೆಯೊಂದಿದ್ದರೆ ಯಾವ ಹಾವು ಕಚ್ಚುವುದಿಲ್ಲ, ಕಚ್ಚಿದರೂ ಅದರ ವಿಷ ಪರಿಣಾಮರಹಿತವಾಗುತ್ತದೆ. ಆ ಸರ್ಪಭೂಷಣ ಶಿವನ ದಯೆ ಲಭಿಸಿದಾಗ ಯಾವ ಹಾವು ತಾನೆ ಅಪಾಯಕಾರಿಯಾದೀತು ?

ಅಲ್ಲಿ ಮನನೀಯವಾದ ಇನ್ನೊಂದು ಅಂಶವಿದೆ. ಮನದ ಸರ್ಪವನ್ನು ಕೊಂದು ಬಿಡಬೇಕೆಂದು ಹೇಳಿಲ್ಲ ಬಸವಣ್ಣನವರು. ಅದನ್ನು ಕೊಲ್ಲುವುದು ಸಲಭವೂ ಅಲ್ಲ. ಅಪೇಕ್ಷಣೀಯವೂ ಅಲ್ಲ. ಅದರೊಡನೆ ಸುಲಭವಾಗಿ ಬಾಳಬಲ್ಲ ಗಾರುಡಿಗರಾಗಬೇಕು ನಾವು. ಈ ಸಂಸಾರ ತ್ಯಾಜ್ಯವಲ್ಲ ; ಆದರೆ ಅದು ಮಾಯೆಯಾಗದಂತೆ ನೋಡಿಕೊಳ್ಳಬೇಕು. ಭಕ್ತಿಯಿಂದ ಅದು ಸಾಧ್ಯ. ಬಸವಣ್ಣನವರ ಇಹ_ಪರ ಸಮನ್ವಯ ದೃಷ್ಟಿಯನ್ನು ಇತರೆಡೆಗಳಂತೆ ಇಲ್ಲಿಯೂ ನೋಡಬಹುದು.

ಮನವನ್ನು ನಿಗ್ರಹಿಸಲು ದೇಹದಂಡನೆ ಮಾರ್ಗವಲ್ಲ ಎಂಬುದನ್ನು ಹೇಳುವಾಗ ಮತ್ತೆ ಹಾವಿನ ರೂಪಕ ಬರುತ್ತದೆ:

ಹುತ್ತವ ಬಡಿದರೆ ಹಾವು ಸಾಯಬಲ್ಲುದೇ, ಅಯ್ಯಾ ?
ಘೋರತಪವ ಮಾಡಿದರೇನು—
ಅಂತರಂಗ - ಆತ್ಮಶುದ್ಧಿಯಿಲ್ಲದವರನೆಂತು ನಂಬುವನಯ್ಯ
ಕೂಡಲ ಸಂಗಮದೇವ ?

ಹಾವು–ಹಾವಾಡಿಗನ ರೂಪಕ ಮತ್ತೊಂದೆಡೆ ಇನ್ನೂ ಉಜ್ವಲವಾಗಿದೆ :

"ನಾನಾವರ್ಣದ ಸಂಸಾರ ಹಾವು ಹಾವಾಡಿಗನ ಸ್ನೇಹದಂತೆ" ! ಸಂಸಾರ ಗ್ರಸ್ತನಾದ ಮಾನವನ ದಾರುಣದುರಂತವನ್ನು ಮನಗಾಣಿಸಲು ಬಸವಣ್ಣನವರು ತಂದಿರುವ ಹಾವು - ಕಪ್ಪೆಯ ರೂಪಕ ಎಲ್ಲಕ್ಕಿಂತ ಮಿಗಿಲಾಗಿದೆ:

ಕಪ್ಪೆ ಸರ್ಪನ ನೆಳಲಲ್ಲಿ ಇಪ್ಪಂತೆ ಎನಗಾಯಿತ್ತಯ್ಯಾ !
ಅಕಟಕಟಾ ಸಂಸಾರ ವೃಥಾ ಹೋಯಿತಲ್ಲಾ !
ಕರ್ತೃವೆ ಕೂಡಲ ಸಂಗಮದೇವಾ,
ಇದ ತಪ್ಪಿಸಿ ಎನ್ನನು ರಕ್ಷಿಸಯ್ಯಾ.

ಸಂಸಾರದ ಘೋರ ಸ್ವರೂಪವನ್ನು, ಅದರಲ್ಲಿ ಸಿಕ್ಕಿಹಾಕಿಕೊಂಡ ಜೀವಿಯ ಶೋಚನೀಯಾವಸ್ಥೆಯನ್ನೂ ಬಸವಣ್ಣನವರು ಹಲವು ಪರಿಣಾಮಕಾರಿಯಾದ ರೂಪಕಗಳ ಮುಖಾಂತರ ಚಿತ್ರಿಸಿದ್ದಾರೆ. ಇವು ಸ್ವಾನುಭವ ಜನ್ಯವಾಗಿದ್ದು ಅವರ ಆತ್ಮಕಥನದ ಅಂಗವಾಗಿಯೆ ಪ್ರಾದುರ್ಭವಿಸಿವೆ. ಇದೊಂದು ಪಶುರೂಪಕ:

ಕೆಸರಲ್ಲಿ ಬಿದ್ದ ಪಶುವಿನಂತಾನು ದೆಸೆದೆಸೆಗೆ ಬಾಯ ಬಿಡುತ್ತಿದ್ದೆನಯ್ಯ !
ಅಯ್ಯಾ, ಆರೈವರಿಲ್ಲ—"ಅಕಟಕಟಾ! ಪಶು" ವೆಂದೆನ್ನ
ಕೂಡಲ ಸಂಗಮದೇವ ಕೊಂಬ ಹಿಡಿದೆತ್ತುವನ್ನಕ್ಕ !

ಈ ಭಾವನೆಯನ್ನೇ ಬೇರೊಂದು ರೀತಿಯಲ್ಲಿ ಪ್ರತಿಪಾದಿಸುತ್ತವೆ ಮುಂದಿನ ವಚನ:

ಕಾಲಲಿ ಕಟ್ಟಿದ ಗುಂಡು, ಕೊರಳಲಿ ಕಟ್ಟಿದ ಬೆಂಡು :
ತೇಲಲೀಯದು ಗುಂಡು, ಮುಳುಗಲೀಯದು ಬೆಂಡು !

ಇಂತಪ್ಪ ಸಂಸಾರಶರಧಿಯ ದಾಟಿಸಿ
ಕಾಲಾಂತಕನೆ, ಕಾಯೊ, ಕೂಡಲ ಸಂಗಯ್ಯ !

ಇಲ್ಲಿ ಸಂಸಾರದ ಮತ್ತೊಂದು ಬಗೆಯ ದುರಂತ ಸ್ವರೂಪ ಚಿತ್ರಿತವಾಗಿದೆ. ಸಂಸಾರವೊಂದು ಶರಧಿ ; ಕಾಲಿಗೊಂದು ಗುಂಡು, ಕೊರಳಿಗೊಂದು ಬೆಂಡು ಕಟ್ಟಿಕೊಂಡ ಜೀವ ಇದರಲ್ಲಿ ಸಿಕ್ಕಿ ಒದ್ದಾಡುತ್ತಿದ್ದಾನೆ. ಗುಂಡು ಒಳಕ್ಕೆಳೆಯುತ್ತದೆ. ಬೆಂಡು ಮೇಲಕ್ಕೆತ್ತುತ್ತದೆ. ಸಂಪೂರ್ಣವಾಗಿ ಮುಳುಗುವಂತೆಯೂ ಇಲ್ಲ ; ತೇಲುವಂತೆಯೂ ಇಲ್ಲ ; ಆದರೆ ಯಾವಾಗ ಮುಳುಗುತ್ತೇನೊ ಎಂಬ ಭಯ ಮಾತ್ರ ಸದಾ ಇದ್ದದ್ದೆ. ಇದು ಮೃತ್ಯುವಿಗಿಂತ ಭಯಾನಕವಾದ ಸ್ಥಿತಿ. "ಕಾಲಲಿ ಕಟ್ಟಿದ ಗುಂಡು, ಕೊರಳಲಿ ಕಟ್ಟಿದ ಬೆಂಡು" ಎಂಬ ಸರಳವಾದ ಮಾತು ಎಂತಹ ಸಂಕೀರ್ಣಚಿತ್ರವನ್ನು ಉದ್ಬೋಧಿಸುತ್ತದೆ ! 'ಕಾಲಾಂತಕ' ಎಂಬ ಪದ ಕೂಡ ಇಲ್ಲಿ ಔಚಿತ್ಯಪೂರ್ಣವಾಗಿದೆ. ನಾವು ಈ ಸಂಸಾರದಲ್ಲಿ ಕಾಲಬದ್ಧರಾಗಿದ್ದೇವೆ, ಕಾಲಪ್ರವಾಹಪತಿತರಾಗಿದ್ದೇವೆ. ನಮ್ಮನ್ನು ಉದ್ಧರಿಸಬಲ್ಲ ಸಮರ್ಥ ಆ ಕಾಲಾಂತಕ, ಮೃತ್ಯುಂಜಯನೊಬ್ಬನೆ.

ತಮ್ಮ ಸಂಸಾರ ನಿಮಗ್ನಾವಸ್ಥೆಯಲ್ಲಿ ಬಸವಣ್ಣನವರು ಕೂಡಲ ಸಂಗನ ಕೃಪೆಗಾಗಿ ಮೊರೆಯಿಡುವ ಪರಿ ಈ ವಚನದಲ್ಲಿ ಪ್ರಾಮಾಣಿಕವಾಗಿ, ಹೃದಯಸ್ಪರ್ಶಿಯಾಗಿ ತಲೆದೋರಿದೆ.

ಸಂಸಾರಸಾಗರದ ತೆರೆ ಕೊಬ್ಬಿ ಮುಖದ ಮೇಲೆ ಅಲೆವುತ್ತಿದೆ ನೋಡಾ
ಸಂಸಾರಸಾಗರ ಉರದುದ್ದ ಹೇಳಾ ?....ಕೊರಲುದ್ದವೇ ಹೇಳಾ ?
ಸಂಸಾರಸಾಗರ ಶಿರದುದ್ದವಾದ ಬಳಿಕ ಏನ ಹೇಳುವೆನಯ್ಯಾ ?
ಅಯ್ಯ, ಅಯ್ಯ, ಎನ್ನ ಹುಯ್ಯಲು ಕೇಳಯ್ಯ !
ಕೂಡಲ ಸಂಗಮದೇವ, ನಾನೇವೆನೇವೆನಯ್ಯಾ ?

ನಿರಾಡಂಬರವಾದ ಈ ವಚನದಲ್ಲಿ ಸಂಸಾರದ ಪ್ರಾಬಲ್ಯವೂ ಜೀವಿಯ ವೇದನೆ ಆರ್ತನಾದಗಳೂ ಸ್ಪಷ್ಟವಾಗಿ ನಿರೂಪಿತವಾಗಿವೆ. "ನಾನೇವೆನೇವೆನಯ್ಯ" ಎಂಬ ಧ್ವರುಕ್ತಿ ನಿಸ್ಸಹಾಯಕತೆಯ ಪರಮಾವಧಿಯನ್ನು ಚೆನ್ನಾಗಿ ಧ್ವನಿಸುತ್ತದೆ.

ಕೂಡಲ ಸಂಗಮದೇವ ತನಗೆ ಒಲಿಯುವನೊ ಇಲ್ಲವೊ ಎಂಬ ಸಂದೇಹ ಬಸವಣ್ಣನವರನ್ನು ಮೊದಮೊದಲು ಒಮ್ಮೊಮ್ಮೆ ಕಾಡಿದ್ದಿರಬೇಕು. ಅದು ಎಂತಹ ಗಾಢವಾದ ಚಿಂತೆಯಾಗಿತ್ತೆಂಬುದನ್ನು ಅವರು ವಿಶಿಷ್ಟವಾಗಿ ಹೇಳಿಕೊಂಡಿದ್ದಾರೆ:

ಪರಚಿಂತೆ ಎಮಗೇಕಯ್ಯ ? ನಮ್ಮ ಚಿಂತೆ ನಮಗೆ ಸಾಲದೆ ?
ಕೂಡಲ ಸಂಗಯ್ಯ ಒಲಿದಾನೋ ಒಲಿಯನೋ ಎಂಬ ಚಿಂತೆ
ಹಾಸಲುಂಟು ಹೊದೆಯಲುಂಟು !

ಚಿಂತೆ ಅಪಾರವಾಗಿತ್ತು ಎಂದಿದ್ದರೆ ಕೇವಲ ರೂಢಿಯ ಮಾತಾಗುತ್ತಿತ್ತು. ಹಾಸಲುಂಟು, ಹೊದೆಯಲುಂಟು ಎಂಬುದು ಅಪೂರ್ವವಾದ ಅಭಿವ್ಯಕ್ತಿಯಾಗಿರುವಂತೆಯೆ ಅನುಭವವೂ ಆಗಿದೆ. ಆ ಮಾತು ಚಿಂತೆಯ ಆಧಿಕ್ಯವನ್ನು ಧ್ವನಿಸುವ ಅಲಂಕಾರ ಮಾತ್ರವಾಗಿಲ್ಲ; ಸತ್ಯಸ್ಯ ಸತ್ಯವಾಗಿದೆ. ಭಗವಂತನ ಒಲುಮೆಯ ಚಿಂತೆ ಬಸವಣ್ಣನವರನ್ನು ಉನ್ಮಾದದಂತೆ ಹಿಡಿದಿತ್ತು; ಆ ಸ್ಥಿತಿಯಲ್ಲಿ ಅವರು ಹಾಸು ಹೊದಿಕೆಗಳನ್ನೆಲ್ಲ ನಿರ್ಲಕ್ಷಿಸಿದ್ದಾರೆ; ಉಷ್ಣ-ಚಳಿಗಳ ಪರಿವೆ ಅವರಿಗಿಲ್ಲ. ದೈವಿಕೃಪೆಯ ಚಿಂತೆಯೆ ಅವರ ಸರ್ವಸ್ವವಾಗಿ ಹಾಸುವ, ಹೊದೆಯುವ ಪರಿಕರವೆಲ್ಲ ಆಗಿ ಬಿಟ್ಟಿದೆ. ಈ ಪರಮಚಿಂತೆಯೊಂದಿರುವಾಗ ಪರಚಿಂತೆಗಳಿಗೆ ಸ್ಥಾನವೆಲ್ಲಿ ?

ತಮ್ಮ ಭಕ್ತಿಯ ಬಗೆಗೆ ಬಸವಣ್ಣನವರಿಗೆ ಒಂದು ಕಾಲದಲ್ಲಿ ತೀರ ಅಸಮಾಧಾನವಾಗಿದ್ದಿರಬೇಕು. ತಾನು ನಿಜವಾದ ಭಕ್ತನಲ್ಲ, ಬರಿಯ ವೇಷಧಾರಿ; ತನ್ನ ಮನವಿನ್ನೂ ಪಕ್ವವಾಗಿಲ್ಲ ಎಂದು ಅವರು ಅಸಂತುಷ್ಟರಾಗಿದ್ದಂತೆ ಕಾಣುತ್ತದೆ ಅದನ್ನು ಈ ಕೋಡಗದ ರೂಪಕದಲ್ಲಿ ವ್ಯಕ್ತಪಡಿಸುತ್ತಾರೆ:

ಕಬ್ಬುನದ ಕೋಡಗ ಪರುಷ ಮುಟ್ಟಿ ಹೊನ್ನಾದರೇನು,
ಅದು ತನ್ನ ಮುನ್ನಿನ ರೂಹ ಬಿಡದನ್ನಕ್ಕ ?
ಕೂಡಲ ಸಂಗಮದೇವ
ನಿಮ್ಮ ನಂಬಿಯೂ ನಂಬದ ಡಂಬಕ ನಾನಯ್ಯ !

ಕಬ್ಬಿಣದ ಕೋತಿ ಪರುಷದಿಂದ ಚಿನ್ನದ ಕೋತಿಯಾಗಿ ಮಾರ್ಪಡಬಹುದು. ಆದರೆ ಈ ಪರಿವರ್ತನೆ ಬೆಲೆಯಿಲ್ಲದ್ದು. ಚಿನ್ನದ ಕೋತಿಯಾದರೇನು ! ಆ ಕಪಿತನ, ವಿಕಾರವಾದ ಮೂತಿ ಎಲ್ಲಿ ಹೋದೀತು ? ದೀಕ್ಷೆಗೊಂಡು ಲಿಂಗಧಾರಿಯಾಗಿ, ಭಕ್ತನ ಬಾಹ್ಯಲಕ್ಷಣಗಳನ್ನೆಲ್ಲ ಮೈಗೂಡಿಸಿಕೊಂಡ ವ್ಯಕ್ತಿ ಹೊಸಬನಂತೆ ಹೊಳೆಯಬಹುದು. ಆದರೆ ಅಂತರಂಗ ಪರಿವರ್ತನೆಯಿಲ್ಲದೆ ಬರಿಯ ಬಾಹ್ಯ ಪರಿವರ್ತನೆಯಿಂದೇನು ಬಂತು ಭಾಗ್ಯ ? ಈ ಅಭಿಪ್ರಾಯವನ್ನೆ ಬಸವಣ್ಣನವರು ಮತ್ತೊಂದು ರೂಪಕದಲ್ಲಿ ಇನ್ನು ಸೊಗಸಾಗಿ ಮೂಡಿಸಿದ್ದಾರೆ :

ಹೇಡಿ ಬಿರುದ ಕಟ್ಟಿದಂತಾಯಿತ್ತೆನ್ನ ವೇಷ !
ಕಾದಬೇಕು; ಕಾದುವರೆ ಮನವಿಲ್ಲ !
ಆಗಳೇ ಹೋಯಿತ್ತು ಬಿರುದು ;
ಹಗರಣಿಗನಂತೆ ನಗೆಗೆಡೆಯಾಯಿತ್ತು !

ಹೇಡಿ ವೀರನಂತೆ ವೇಷ ಕಟ್ಟಿಕೊಂಡು ಆಟೋಪ ತೋರಿಸಿದಾಕ್ಷಣ ಅವನು ವೀರನಾದನೇ ? ಕಾದಬೇಕಾಗಿ ಬಂದಾಗ ಅವನ ಬಂಡವಾಳ ಬಯಲಾಗುತ್ತದೆ. ಒಳಗೆ ಪೌರುಷವಿದ್ದರೆ ತಾನೆ ! ಒಳಹೊರಗುಗಳ ಸಮನ್ವಯವಿಲ್ಲವ ಈ ಅನೌಚಿತ್ಯ ಹಾಸ್ಯಪ್ರೇರಕವಾಗುತ್ತದೆ. ಆ ವ್ಯಕ್ತಿ ಕೋಡಂಗಿಯಂತೆ ನಗೆಗೆ ವಸ್ತುವಾಗುತ್ತದೆ;

ಉತ್ತರಕುಮಾರನನ್ನು ನೆನಪಿಗೆ ತರುತ್ತದೆ ಬಸವಣ್ಣನವರು ಕೊಡುವ ಈ ಚಿತ್ರ ಇದೇ ಭಾವನೆಯನ್ನು ಅವರು "ಎಳ್ಳಿಲ್ಲದ ಗಾಣವನಾಡಿಧ ಎತ್ತಿನಂತಾಯಿತ್ತೆನ್ನ ಭಕ್ತಿ !" ಎಂಬ ನುಡಿಯಲ್ಲೂ ಹೊರಗೆಡವಿದ್ದಾರೆ.

ಜೀವನ ನಿರ್ವಹಣೆ, ಜಂಜಡ ತನ್ನ ಭಕ್ತಿಗೆ ಅಡ್ಡಿಯಾಗುತ್ತಿದೆಯೆಂಬ ಕೊರಗನ್ನು ಬಸವಣ್ಣನವರು ಹೀಗೆ ತೋಡಿಕೊಳುತ್ತಾರೆ :

— ಉದಯಾಸ್ತಮಾನವೆನ್ನ ಬೆಂದ ಬಸಿರಿಂಗೆ ಕುದಿಯಲಲ್ಲದೆ,
ನಿಮ್ಮ ನೆನೆಯಲು ತೆರಹಿಲ್ಲವಯ್ಯ !
ಎಂತೋ ಲಿಂಗ ತಂದೆ, ಎಂತಯ್ಯ ಎನ್ನ ಪೂರ್ವಲಿಖಿತ ?
ಬೆರಣಿಯನಾಯಲಲ್ಲದೆ ಅಟ್ಟುಣ್ಣ ತೆರಹಿಲ್ಲೆನಗೆ
ನೀ ಕರುಣಿಸು ಕೂಡಲ ಸಂಗಮದೇವ.

ಅಡುಗೆಗೆ ಬೆರಣಿ ಅತ್ಯಾವಶ್ಯಕ, ದಿಟ. ಆದರೆ ಬೆರಣಿ, ಪುಳ್ಳೆಗಳನ್ನು ಆರಿಸುವುದರಲ್ಲೆ ಕಾಲವೆಲ್ಲ ಹೋದರೆ, ಅಡುಗೆ ಮಾಡಿ ಉಂಡು ತಣಿಯುವಂತಾದರೆ, ಪಾಸುವವಾಗಿ ಕಾರ್ಯಸಾಧನೆ ಮಾಡುವುದೆಂದು ? ಉಪವಾಸವಿದ್ದುಕೊಂಡು ಭಕ್ತಿಯನ್ನಾಚರಿಸಬೇಕೆಂದು ಯಾರೂ ಹೇಳುವುದಿಲ್ಲ; ಮೊದಲು ಹೊಟ್ಟೆಗೆ ಅನ್ನ ಬೇಕು, ನಿಜ. "ಶರೀರಮಾದ್ಯಂ ಖಲು ಧರ್ಮಸಾಧನಂ" ಆದರೆ ಉದರಂಭರಣವೆ ಸರ್ವಸ್ವವಾಗಬಾರದಲ್ಲ, ಅದರ ಚಿಂತೆಯೆ ಪ್ರಧಾನವಾಗಬಾರದಲ್ಲ. ಹಾಗಾದಾಗ ಅದಕ್ಕಿಂತ ದುಃಖಕರವಾದುದು ಮತ್ತೊಂದಿಲ್ಲ. ಅದನ್ನೆ ಬಸವಣ್ಣ ಹೇಳುತ್ತಿರುವುದು. "ಬೆರಣಿಯನಾಯಲಲ್ಲದೆ ಅಟ್ಟುಣ್ಣ ತೆರಹಿಲ್ಲೆನಗೆ" ಎಂಬ ಮಾತಿನಲ್ಲಿ ಗಾದೆಯ ಕಸುವಿದೆ. ಇಂಥವೆಷ್ಟೋ ಸಾರೋಕ್ತಿಗಳು ಬಸವಣ್ಣನವರಲ್ಲುಂಟು. ಅವುಗಳಲ್ಲಿ ಕೆಲವನ್ನಾದರೂ ಅವರ ಸಮಕಾಲೀನ ಜನಜೀವನದಿಂದ ಎತ್ತಿಕೊಂಡಿರಬಹುದು. ಆದರೆ ಅವನ್ನು ಅವರು ಸ್ವವಿಶಿಷ್ಟವಾದ ರೀತಿಯಲ್ಲಿ ಬಳಸಿಕೊಂಡಿರುವುದು ಮುಖ್ಯ. ಭಾಷೆಯ ಬೊಕ್ಕಸದಿಂದ ಎಷ್ಟೋ ನಾಣ್ಯಗಳನ್ನು ಅವರು ತೆಗೆದುಕೊಂಡಿದ್ದಾರೆ ; ಹಾಗೆಯೆ ತಮ್ಮದೇ ಆದ ಟಂಕಶಾಲೆಯಿಂದ ಅಸಂಖ್ಯಾತ ನಾಣ್ಯಗಳನ್ನು ಮುದ್ರಿಸಿ ಚಲಾವಣೆಗೆ ಕೊಟ್ಟಿದ್ದಾರೆ. ದೊಡ್ಡ ಕವಿಯ ಶಕ್ತಿ ಆದಾನ ಪ್ರಧಾನಗಳೆರಡರಲ್ಲೂ ಕಂಡುಬರುತ್ತದೆ. ಈ ಸತ್ಯಕ್ಕೆ ಬಸವಣ್ಣನವರು ಹೊರತಲ್ಲ.

ಸುವರ್ಣಶುದ್ಧೀಕರಣದ ರೂಪಕವನ್ನು ಈ ವಚನದಲ್ಲಿ ನೋಡುತ್ತೇವೆ :

ಕರಗಿಸಿ ಎನ್ನ ಮನದ ಕಾಳಿಕೆಯ ಕಳೆಯಯ್ಯ !
ಒರೆಗೆ ಬಣ್ಣಕ್ಕೆ ತಂದೆನ್ನ ಪುಟವಿಕ್ಕಿ ನೋಡಯ್ಯ !
ಕಡಿಹಕ್ಕಿ ಬಡಿಹಕ್ಕಿ ತಂದೆನ್ನ ಕಡೆಯಾಣಿಯ ಮಾಡಿ
ಸಲಹಯ್ಯ ಕೂಡಲ ಸಂಗಮದೇವ !

ಹೊನ್ನನ್ನು ಅಕ್ಕಸಾಲಿಗ ಕಾಯಿಸಿ, ಕರಗಿಸಿ, ಪುಟವಿಟ್ಟು ಆಭರಣಯೋಗ್ಯವಾಗುವಂತೆ ಮಾಡುತ್ತಾನೆ ; ಅನಂತರ ಅದನ್ನು ಕಡಿದು ಬಡಿದು ಒಡವೆ ತಯಾರಿಸುತ್ತಾನೆ. ಸಂಸ್ಕಾರರಹಿತವಾದ ಮನಸ್ಸು ಕೂಡ ಆಗ ತಾನೆ ಗಣಿಯಿಂದ ತೆಗೆದ ಒರಟು ಚಿನ್ನದಂತೆ. ಅದರ ಕಲ್ಮಷಗಳನ್ನು ನಿವಾರಿಸಿ, ಆ ಅಪರಂಜಿಯಿಂದ ಆಭರಣ ನಿರ್ಮಾಣ ಮಾಡುವುದು ಆ ವಿಶ್ವಕರ್ಮನಿಗೆ ಮಾತ್ರ ಸಾಧ್ಯ. ಭಗವಂತನ ಆಘಾತಪರಂಪರೆಯಿಂದಲೆ ಈ ಮನದ ಹೊನ್ನು ನಿರ್ಮಲವಾಗುವುದು. ಬಸವಣ್ಣನವರು ಹಾಗಾಗಬಯಸುತ್ತಾರೆ. ಅವರು ಆಭರಣವಾಗಿ ಅಲಂಕರಿಸಬೇಕೆನ್ನುವುದಾದರೂ ಯಾರನ್ನು ? ಅರಸರನ್ನೇ, ಅಂಗನೆಯರನ್ನೇ, ಅಧಿಕಾರಿಗಳನ್ನೇ, ಸಿರಿವಂತರನ್ನೆ ? ಹಿಂದಿನ ಎಷ್ಟೋ ಕವಿಗಳಿಗೆ ಅಂತಹ ಆಸೆಯಿತ್ತು (ಉಳಿದವರಿಗಂತೂ ಸರಿಯೆ !) ಆದರೆ ಬಸವಣ್ಣನವರಿಗೆ ಅದು ಕನಸಿನಲ್ಲೂ ಸುಳಿಯದು. ಅವರು ಶರಣರಿಗೆ ತೊಡಿಗೆಯಾಗಬೇಕಾಗಿದೆ ; ಅಲ್ಲಿಯೂ ಅವರ ಇಚ್ಛೆ ಚೂಡಾಮಣಿಯಾಗಬೇಕೆಂದಲ್ಲ, ಪಾದಾಭರಣವಾಗಬೇಕೆಂದು. "ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ" ಎಂಬುದಲ್ಲವೆ ಅವರ ನಂಬಿಕೆ ?

ಶರಣರೆಂದರೆ ಬಸವಣ್ಣನವರಿಗೆ ಅಷ್ಟೊಂದು ಪ್ರೀತಿ, ಗೌರವ. ಅವರ ಆಗಮನದಿಂದ ತಮ್ಮ ಮೇಲಾಗುವ ಸುಖಪರಿಣಾಮವನ್ನು ಈ ವಚನದಲ್ಲಿ ನಿರೂಪಿಸಿದ್ದಾರೆ :

ಸಾಸುವೆಯ ಮೇಲೆ ಸಾಗರವರಿದಂತಾಯಿತಯ್ಯ !
ಆನಂದದಿಂದ ನಲಿನಲಿದಾಡುವೆನು........ಕುಣಿಕುಣಿದಾಡುವೆನು !
ಕೂಡಲ ಸಂಗನ ಶರಣರು ಬಂದರೆ
ಉಬ್ಬಿ ಕೊಬ್ಬಿ ಹರುಷದಿಂದಲೋಲಾಡುವೆನು !

ಸಾಸುವೆಯ ಮೇಲೆ ಸಾಗರ ಹರಿದಂತಾಗುವ ಅನುಭವ ಅದ್ಭುತವಾದುದು. ಸಾಸುವೆಯೆನಿತು ಅಲ್ಪ, ಸಾಗರವೆನಿತು ಅಪಾರ ! ಸಾಗರಾಕ್ರಾಂತವಾದಾಗ ಸಾಸುವೆಗೆ ತನ್ನತನ ನಷ್ಟವಾಗುತ್ತದೆ, ವ್ಯಕ್ತಿತ್ವಲಯವಾಗುತ್ತದೆ ; ಅಹಂಕಾರ ಮಮಕಾರಗಳೆಲ್ಲ ವಿಗಳಿತವಾಗಿ ಆನಂದತನ್ಮಯಾವಸ್ಥೆಯೊಂದೆ ಉಳಿಯುತ್ತದೆ. ಬಸವಣ್ಣ ಹೇಳುವುದು ಅಂತಹ ಅಸಾಧಾರಣ ಅನುಭವವನ್ನು. (ಸಶೇಷ)

ನಿಧಾನವಾಗಿ ಮತ್ತು ಸಹನೆಯಿಂದ ಕಾರ್ಯಪ್ರವೃತ್ತನಾಗು, ಗೆಲವು ನಿಶ್ಚಿತವಾಗಿ ನಿನ್ನದಾಗುವುದು. ಒಂದು ಸಸಿಯು ಬೇಗನೆ ಫಲ ಕೊಡಲೆಂದು ನೂರು ಬಿಂದಿಗೆ ನೀರು ಸುರಿದರೂ ಕೂಡಾ ಅದರ ಋತುಕಾಲ ಬಂದಾಗ ಮಾತ್ರ ಫಲ ಕೊಡುವದು.

—ಕಬೀರದಾಸರು

—ಮಾತಾಜಿ

ಮೂರು ಪ್ರಕಾರದ ಜನರು

ಬಸವ ಗಂಗೋತ್ರಿಯ ಆವರಣದಲ್ಲಿ ಕಡಲೆಕಾಯಿ (ಶೇಂಗಾ) ಬೆಳೆಯನ್ನು ಬೆಳೆಯಲಾಗಿತ್ತು. ಗೆಜ್ಜೆ ಶೇಂಗಾ ಫಸಲನ್ನು ಕೀಳುತ್ತಿದ್ದೆವು. ಒಂದು ಗಿಡ ಕಿತ್ತೆ ಗೊಂಚಲು ಗೊಂಚಲಾಗಿ ಕಾಯಿ ತುಂಬಿದ್ದವು. ಇನ್ನೊಂದು ಗಿಡದಲ್ಲಿ ಒಂದು ಒಂದು ಕಾಯಿ ಬಿಟ್ಟಿತ್ತು. ಮತ್ತೊಂದು ಗಿಡದಲ್ಲಿ ಒಂದೂ ಕಾಯಿ ಇರಲಿಲ್ಲ. ಕೇವಲ ಒಂದು ಜೊಟ್ಟಾದ ಕಾಯಿ ಇದ್ದಿತು. ಆಗ ಒಂದು ವಿಚಾರ ಸ್ಫುರಿಸಿತು. ಒಂದು ಗಿಡ ಒಂದು ಬೀಜವನ್ನು ನುಂಗಿ ಮರಳಿ ಒಂದನ್ನೂ ಕೊಡದೆ ಸಾಯುತ್ತಿದೆ. ಇನ್ನೊಂದು ತಾನು ನುಂಗಿದ ಒಂದು ಬೀಜವನ್ನು ಮರಳಿ ಕೊಡುತ್ತಿದೆ. ಮತ್ತೊಂದು ಒಂದು ಬೀಜದ ಸತ್ವ ಹೀರಿಕೊಂಡು ಮತ್ತೆ ಹತ್ತಾರು ಬೀಜಗಳನ್ನು-ಕೊಡುತ್ತಿದೆ. ಅದೇ ರೀತಿ ಈ ಲೋಕದಲ್ಲಿ ಮೂರುತರದ ಜನರಿರುತ್ತಾರೆ. ಪ್ರತಿಯೊಬ್ಬರೂ ತಾಯಿ-ತಂದೆ, ಸಮಾಜ - ರಾಷ್ಟ್ರಗಳ ಋಣ ತಿನ್ನುವರಷ್ಟೆ. ಅವರಲ್ಲಿ ಒರ್ವನು ತಿಂದಷ್ಟನ್ನೂ ತೀರಿಸದೆ ಹೋಗುವವನು. ಎರಡನೆಯವನು ಕೇವಲ ತನಗಾಗಿ, ತನ್ನ ಪತ್ನಿ - ಪುತ್ರರಿಗಾಗಿ ಬಾಳುವವನು. ಆದರೆ ಕೆಲವರೇ ಮಾತ್ರ ತಾವು ಸ್ವೀಕರಿಸಿದ ಋಣಕ್ಕಿಂತಲೂ ಅಧಿಕ ಪಾಲಿನ ಸೇವೆಯನ್ನು ಸಮಾಜ – ರಾಷ್ಟ್ರಗಳಿಗೆ ಸಲ್ಲಿಸುವರು. ಇವರು ಒಂದು ಬೀಜವನ್ನುಂಡು ಹತ್ತಾರು ಕಾಯಿಯನ್ನು ಕೊಡುವ ಗಿಡದಂತೆ ತ್ಯಾಗಿಗಳು, ಪರೋಪಕಾರಿಗಳು ಎನ್ನಿಸಿಕೊಳ್ಳುವರು.

ಲೈಟುಗಳಲ್ಲಿ ವ್ಯತ್ಯಾಸ

ಆಗಲೇ ಕತ್ತಲಾಗಿತ್ತು. ದೀಪಗಳು ಹತ್ತಿದ್ದವು. ಬಸವ ಗಂಗೋತ್ರಿಯಲ್ಲಿ ಕೆಲಸ ನೋಡಿಕೊಳ್ಳುತ್ತಿದ್ದ ನಾವು ಕೆಲಸ ಪೂರೈಸಿ ಪ್ರಾರ್ಥನಾ ಮಂದಿರದ ಕಡೆಗೆ ಸಾಗುತ್ತಿದ್ದೆವು, ಸಂಜೆಯ ಪ್ರಾರ್ಥನೆಗಾಗಿ. ಒಂದು ನಲವತ್ತು ಕ್ಯಾಂಡಲ್ ಬಲ್ಬ್ ಉರಿಯುತ್ತಿತ್ತು. ಸನಿಹದಲ್ಲೇ 40 ಕ್ಯಾಂಡಲ್‌ನ ಒಂದು ಕೊಳವೆ ದೀಪವೂ ಉರಿಯುತ್ತಿತ್ತು. ಬಲ್ಬಿನ ಕಾಂತಿ ಮಂಕಾಗಿತ್ತು, ಕೊಳವೆ ದೀಪ ಪ್ರಕಾಶಮಾನವಾಗಿತ್ತು. ಆಗ ಅನ್ನಿಸಿತು ನನಗೆ, ಎರಡೂ ನಲವತ್ತು ಕ್ಯಾಂಡಲಿನವೇ ಇದ್ದರೂ ಪ್ರಕಾಶದಲ್ಲಿ ಎಷ್ಟು ವ್ಯತ್ಯಾಸ! ಅದೇ ರೀತಿ ಒಂದೇ ವಯಸ್ಸಿನ ಬೇರೆ ಬೇರೆ ವ್ಯಕ್ತಿಗಳು ಬೇರೆ ಬೇರೆ ಸಾಮರ್ಥ್ಯ ಹೊಂದಿ ಬೆಳಗಲು ಸಾಧ್ಯ. ಶಂಕರಾಚಾರ್ಯರಿಗೆ, ಬಸವಣ್ಣನವರಿಗೆ 18ನೆಯ ವಯಸ್ಸಿಗೆ ಜ್ಞಾನೋದಯವಾಯಿತೇ. ಅದೇ ಆ ವಯಸ್ಸಿನ ಮಕ್ಕಳು ಸಮಾಜ - ದೇವರು - ಧರ್ಮಗಳ ಬಗ್ಗೆ ಚಿಂತಿಸಲು ಸಾಧ್ಯವೆ? ಅವರ ಪೂರ್ವಸಂಸ್ಕಾರ ಬಲದಿಂದಲೇ ಅವರು ಪ್ರಕಾಶಿಸುವರು, ವಯೋಭೇದವಿಲ್ಲದೆ!

ವಿದ್ಯುತ್ ಒಂದೇ

ಸಾಲಾಗಿ ದೀಪಗಳನ್ನು ಹಚ್ಚಲಾಗಿತ್ತು. ಪ್ರವಚನ ನಡೆಯುತ್ತಿತ್ತು. ಒಂದು ಬಲ್ಬ್ ಪ್ರಕಾಶಮಾನವಾಗಿ ಹೊಳೆಯುತ್ತಿತ್ತು. ಅದು ನೂರು ಕ್ಯಾಂಡಲ್‌ದು, ನಲವತ್ತು ಕ್ಯಾಂಡಲಿನದು ಕಡಮೆ ಪ್ರಕಾಶದಿಂದ ಉರಿಯುತ್ತಿತ್ತು. ಸೊನ್ನೆ ಕ್ಯಾಂಡಲ್ ಬಲ್ಬು ಮಿಣುಕು ಮಿಣುಕು ಅನ್ನುತ್ತಿತ್ತು. ತಂತಿ ಸುಟ್ಟ ಬಲ್ಬು ಪ್ರಕಾಶವನ್ನೇ ಕೊಡುತ್ತಿರಲಿಲ್ಲ. ಇಲ್ಲಿ ವಿದ್ಯುತ್ ಪ್ರವಾಹ ಒಂದೇ ರೀತಿಯಾಗಿದ್ದರೂ ಬಲ್ಬುಗಳು ತಮ್ಮ ಸಾಮರ್ಥ್ಯಕ್ಕನುಸರಿಸಿ ವಿದ್ಯುತ್‌ನ್ನು ಗ್ರಹಿಸುತ್ತವೆ. ತಂತಿಯೇ ಇಲ್ಲದೆ, ಋಣ - ಧನವಿದ್ಯುತ್ ಕೇಂದ್ರಗಳ ಸಂಪರ್ಕವಿಲ್ಲದಾಗ ವಿದ್ಯುತ್ತೇ ಪ್ರವಹಿಸದು. ಹಾಗೆ ಗುರುವು ಪ್ರವಚನದಲ್ಲೇ ಆಗಲಿ ಅನ್ರಮದಲ್ಲೇ ಆಗಲಿ ಕೊಡುವ ಜ್ಞಾನವಿದ್ಯುತ್ತು ಒಂದೇ ರೀತಿ ಇರುತ್ತದೆ. ಶಿಷ್ಯನು ತನ್ನ ಸಾಧನೆ, ಪ್ರಯತ್ನಕನುಸರಿಸಿ ಆ ಜ್ಞಾನ ಪ್ರವಾಹವನ್ನು ಸ್ವೀಕರಿಸಿ ಬೆಳಗುತ್ತಾನೆ. ಜ್ಞಾನ-ಭಕ್ತಿಗಳೆಂಬ ಋಣ-ಧನ ವಿದ್ಯುತ್ ಕೇಂದ್ರ ಸಂಪರ್ಕವಿಲ್ಲದ ಹೃದಯ ಎಷ್ಟೇ ಜ್ಞಾನವನ್ನು ಸ್ವೀಕರಿಸಿದರೂ ಬೆಳಗದು. ಗುರುವು ಕೊಡುವ ಜ್ಞಾನ ಒಂದೇ ರೀತಿ ಇರುತ್ತದೆ. ಸೂರ್ಯನ ಕಿರಣಗಳು ಗಾಜಿನ ಮುಖಾಂತರ ಹಾಯುತ್ತವೆ, ಮಣ್ಣಿನಲ್ಲಿ ಹಾಯವು. ಹಾಗೆ ಜ್ಞಾನವು ತಪೋಗುಣ ಪ್ರಧಾನ ಬುದ್ಧಿಯಲ್ಲಿ ಹಾಯದು.

ಸಮುಹೃದಯ – ನಡವಳಿಕೆ

ಪೂಜ್ಯರಾದ ಸದ್ಗುರು ಲಿಂಗಾನಂದಸ್ವಾಮಿಗಳು ಇರುವಿಕೆ ಮತ್ತು ತೋರುವಿಕೆಯ ಬಗ್ಗೆ ಹೇಳುತ್ತಾ: ಕೆಲವರು ತುಂಬಾ ಒಳ್ಳೆಯವರು, ಆದರ್ಶವಾದಿಗಳು, ತ್ಯಾಗಿಗಳು ಇರುತ್ತಾರೆ. ಆದರೆ ಮಾತು-ವರ್ತನೆಗಳಲ್ಲಿ ಸ್ವಲ್ಪ ಒರಟಾಗಿ ಇರುತ್ತಾರೆ. ಇನ್ನು ಕೆಲವರು ನಯವಾದ, ಬೆಣ್ಣೆಯ ಮಾತುಗಳನ್ನಾಡಿ ಎಲ್ಲರನ್ನೂ ಸಂಪ್ರೀತಗೊಳಿಸುತ್ತಾರೆ. ದೊಡ್ಡ ದೊಡ್ಡ ಆದರ್ಶದ ಮಾತುಗಳಿಂದ ಬಹಳ ದೊಡ್ಡವರೇನೋ ಎಂಬ ಭ್ರಮೆಗೆ ಇತರರನ್ನು ಒಳಪಡಿಸುತ್ತಾರೆ. ಆದರೆ ಒರಟು ಮಾತುಗಳನ್ನಾಡಿದರೂ ಆದರ್ಶವಾದಿಯನ್ನು ನಂಬಬೇಕು. ಏಕೆಂದರೆ ಅವನ ಅಂತರಂಗ ಪರಿಶುದ್ಧವಾಗಿರುತ್ತದೆ. ಬರೀ ನಯವಾದ ಮಾತನಾಡಿ ಮನಸ್ಸಿನಲ್ಲಿ ಕತ್ತರಿ ಹಾಕುವವರನ್ನು ನಂಬಬಾರದು. ಸಾಗವಾನಿ ಕಟ್ಟಿಗೆಗೆ ಉಜ್ಜುಗೊರಡನ್ನಾಡಿಸಿ ಪಾಲಿಷ್ ಮಾಡದಿದ್ದಾಗ ತುಂಬಾ ಒರಟಾಗಿ ಕಾಣುತ್ತದೆ. ಬೇರೆ ಕಾಡುಕಟ್ಟಿಗೆ ಉಜ್ಜುಗೊರಡನ್ನಾಡಿಸಿ ಪಾಲಿಷ್ ಮಾಡಿದಾಗ ಚೆಂದವಾಗಿ ಕಾಣುತ್ತದೆ. ಆದರೆ ಸತ್ವದಲ್ಲಿ ಸಾಗವಾನಿಗೆ ಸಮವಾಗದು. ಮತ್ತು ಸಾಗವಾನಿಗೆ ನುಣುಪು ಮಾಡಿಬಿಟ್ಟರೆ ಚೆನ್ನಾಗುವುದು. ಹಾಗೆ ಆದರ್ಶವಂತರ ನಡಾವಳಿಕೆ ತಿದ್ದುವುದು ಸುಲಭವೇ ವಿನಾ, ಬರೀ ಸಿಹಿ ಮಾತನಾಡುವವರಿಗೆ ಆದರ್ಶಗಳ ಸತ್ಯ [illegible] ಕಷ್ಟಕರ.

☆

ದೃಷ್ಟಾಂತ ಕಥೆ

ದೇವನಿಗಾಗಿ ಹಂಬಲ

ಜಗದ್ಗುರು ಮಾತೆ ಮಹಾದೇವಿ

ಒಂದು ಊರಿನಲ್ಲಿ ಒಬ್ಬ ಬಡವ. ಅವನಿಗೆ ತನ್ನೂರಿನ ರಾಜನನ್ನು ಆಮಂತ್ರಿಸಿ, ಸತ್ಕರಿಸುವ ಅದಮ್ಯ ಆಕಾಂಕ್ಷೆ. ಆದರೆ ಅವನದ್ದು ಬಡ ಗುಡಿಸಲು. ಉಪಚರಿಸಲು ಅಸಮರ್ಥತೆ. ಹೇಗಾದರೂ ಕರೆಯಲೇಬೇಕೆಂಬ ಆಸೆ. ಬಂದು ವಿನಯದಿಂದ ಬಿನ್ನವಿಸಿದ, "ಮಹಾಸ್ವಾಮಿ ತಮ್ಮ ಆಗಮನ ನಮ್ಮ ಮನೆಗೆ ಆಗಬೇಕೆಂದು ನಮ್ಮ ಅಪೇಕ್ಷೆ. ತಮ್ಮನ್ನು ಸತ್ಕರಿಸುವ ಅದಮ್ಯ ಆಕಾಂಕ್ಷೆ. ದಯ ಮಾಡಿಸಬೇಕು ಮಹಾಪ್ರಭು...." ಬಡವನ ಉತ್ಕಟ ಅಪೇಕ್ಷೆಯನ್ನು ಮನ್ನಿಸಿ ರಾಜನು ಆಮಂತ್ರಣವನ್ನು ಒಪ್ಪಿದ. ಅವನು ಸತ್ಕರಿಸಲು ಅಸಮರ್ಥ ಎಂಬುದ ನ್ನರಿತ ರಾಜನು ತಾನೇ ತನ್ನ ಸಿಬ್ಬಂದಿಯನ್ನು ಕಳುಹಿಸಿ, ವ್ಯವಸ್ಥೆ ಮಾಡಿಸಿ, ಬಂದು ಆತಿಥ್ಯ ಸ್ವೀಕರಿಸಿದ.

ಅದೇ ರೀತಿ ನಾವು ನಮ್ಮಲ್ಲಿ ಶಕ್ತಿ ಇರಲಿ, ಬಿಡಲಿ. ಪರಮಾತ್ಮನಿಗೆ ಹೃದಯ ದಲ್ಲಿ ಬಂದು ನೆಲೆಸಲು ಆಮಂತ್ರಣ ನೀಡಿದರೆ ಸಾಕು, ಮುಂದಿನ ವ್ಯವಸ್ಥೆ ಅವನೇ ಮಾಡಿಕೊಳ್ಳುವನು. ನಮ್ಮ ಕರೆ ಅವನಿಗೆ ಮುಟ್ಟಿದರೆ ಸಾಕು, ತನ್ನ ದೂತನಾದ ಗುರುವನ್ನು ಕಳುಹಿಸಿಕೊಡುವನು. ಭಕ್ತನ ಹೃದಯವನ್ನು ಭಕ್ತಿ ಗಂಗಾಜಲದಲ್ಲಿ ತೊಳೆದು, ಅಜ್ಞಾನ ದೀಪವನ್ನು ಹಚ್ಚಿ, ಸದ್ಗುಣಗಳಿಂದ ಶೃಂಗರಿಸಿ, ಅನುಭಾವದ ಅಡಿಗೆಯನ್ನು ಮಾಡಿಸಿ, ಸಿದ್ಧತೆ ನಡೆಸುವನು. ಆಗ ಪರಮಾತ್ಮನು ಬಂದು ಹೃದಯ ಪೀಠದಲ್ಲಿ ನೆಲೆನಿಂತು ಭಕ್ತನ ಹೃದಯದ ಆತಿಥ್ಯವನ್ನು ಸ್ವೀಕರಿಸುವನು.

ನಮಗೆ ಬೇಕಾದುದೊಂದೇ, ಅವನನ್ನು ಆಹ್ವಾನಿಸಬೇಕೆಂಬ ಉತ್ಕಟಾಪೇಕ್ಷೆ.

(ಆಧಾರಿತ)

ಒಂದು ನೆನಪು:

ಶ್ರೀ ಮುಮ್ಮಡಿ ಕೃಷ್ಣರಾಜರ ಮನೆತುಂಬಿದ ಶರಣೆ ಮಲ್ಲಿಗೆಮ್ಮನವರು

—ಮಾ. ಸಂ. ಸಂಜಪ್ಪ

ಸುಮಾರು ನಲವತ್ತೈದು ವರ್ಷಗಳ ಹಿಂದೆ ಬೆಂಗಳೂರಿಗೆ ಓರ್ವ ಮಹಾತ್ಮರು ಬಂದಿದ್ದರು. ನಗರದ ಮಹಾಂತಿನ ಮಠದಲ್ಲಿ ಇಳಿದುಕೊಂಡಿದ್ದ ಅವರ ಹೆಸರು–"**ಪಾಷಾಣಸ್ವಾಮಿ**"ಗಳು: ಅವರು ಬಹಳ ವೃದ್ಧರಾಗಿದ್ದರು. ಬಳ್ಳಾರಿ ದೇಶದ ಕಡೆಯಿಂದ ಬಂದು ಬೆಂಗಳೂರಲ್ಲಿ ತಂಗಿದ್ದರು. ಅನೇಕ ವರ್ಷಗಳಕಾಲ ಈ ನಗರದಲ್ಲಿದ್ದ ಅವರ ವೇಷ ತುಂಬಾ ವಿಚಿತ್ರ ಮತ್ತು ವಿಶೇಷ. ಬಲಗಾಲಿಗೆ ಒಂದು ಬಂಗಾರದ ತೋಡವನ್ನು ಹಾಕಿದ್ದರು. ಅದಕ್ಕೆ ನೃಸಿಂಹದ ಮುಖವಿತ್ತು. ಬಲಗೈಗೆ ಒಂದು ಬಂಗಾರದ ಕಡಗವನ್ನೂ ಧರಿಸಿದ್ದು, ಬಂಗಾರದ ಕರಡಿಗೆ ಹಾಕುತ್ತಿದ್ದರು. ಕಾವಿಯ ಕಫನಿಯನ್ನು ಧರಿಸಿ, ತಲೆಗೆ ಒಂದು ರೇಷ್ಮೆ ಕಲಾಪತ್ತಿನ ಮಂಗುಟವನ್ನು ರುಮಾಲಿನಂತೆ ಸುತ್ತುತ್ತಿದ್ದರು. ಸದಾಕಾಲ ಹಣೆಯ ಮೇಲೆ ಶೋಭಿಸುವ ತ್ರಿಪುಂಡ್ರ, ಕೈಯಲ್ಲಿ ಇರಿಸಿಕೊಳ್ಳುತ್ತಿದ್ದ ಆಳೆತ್ತರದ ಬೆತ್ತ - ಇವು ಗಳಿಂದ ಅಲಂಕೃತವಾದ ಆ ಭವ್ಯಕಾಯದ ತಪೋ ಮೂರ್ತಿಗಳು ಭಕ್ತರ ಚಿತ್ತವನ್ನು ಬಲು ಬೇಗನೆ ತಮ್ಮತ್ತ ಸೆಳೆದುಕೊಂಡು ಭಕ್ತಿಯು ಅಂಕುರಿಸುವಂತೆ ಮಾಡು ತ್ತಿದ್ದರು. ಇಂತಹ ಸ್ವಾಮಿಗಳನ್ನು ಬಿನ್ನಹಕ್ಕೆ ಕರೆದು ಗೌರವಿಸುವ ಪರಿಪಾಠ ವಿರುವ ಲಿಂಗಾಯತ ಮನೆಗಳವರು ಪ್ರತಿನಿತ್ಯ ಆ ಪೂಜ್ಯರನ್ನು ಬರಮಾಡಿಕೊಂಡು ಪ್ರಸಾದಕ್ಕೆ ಅಣಿ ಮಾಡುತ್ತಿದ್ದರು.

ಅವರು ಧರಿಸುತ್ತಿದ್ದ ಬಂಗಾರದ ತೋಡ, ಕಡಗ, ಕರಡಿಗೆ, ಸರಿಗೆ ರುಮಾಲು ಗಳ ವಿಚಾರವಾಗಿ ಯಾರಾದರೂ ಪ್ರಶ್ನಿಸಿದರೆ, ಪಾಷಾಣ ಸ್ವಾಮಿ ಎಂಬ ಹೆಸರು ನಿಮಗೆ ಹೇಗೆ ಬಂದಿತು? ಯಾರು ಇಟ್ಟರು? ಎಂದು ಕೆಲ ಶ್ರೀಮಂತರೂ ಜಮೀನ್‌ದಾರರೂ ಕೇಳುತ್ತಿದ್ದರು. ಅದಕ್ಕೆ ಅವರು, "ನಾವು ನಿತ್ಯ ಒಂದು ಪ್ರಮಾಣದಲ್ಲಿ ಪಾಷಾಣವನ್ನು ಸೇವಿಸುತ್ತೇವೆ ಎಂದರೆ ಅವರುಗಳು ಅನುಮಾನ ಪಡುತ್ತಿದ್ದರು. ಅವರ ಅನುಮಾನವನ್ನು ಗುರ್ತಿಸಿದ ನಾವು ಲಿಂಗಪೂಜೆಯ ನಂತರ ಅದನ್ನು ಸೇವಿಸುತ್ತಿದ್ದ ಸಮಯಕ್ಕೆ ನಿತ್ಯವೂ ಒಬ್ಬೊಬ್ಬ ಅನುಮಾನಿತರನ್ನು

ಕರೆಸಿಕೊಂಡು ಅವರ ಸಮಕ್ಷಮದಲ್ಲಿಯೇ ಪಾಷಾಣವನ್ನು ಲಿಂಗಾರ್ಪಿತ ಮಾಡಿ ಸೇವಿಸುತ್ತಿದ್ದುದನ್ನೂ ಹಾಗೆ ಸೇವಿಸಿದರೂ ಅಪಾಯವಾಗದಿದ್ದುದನ್ನೂ ಪ್ರತ್ಯಕ್ಷ ಕಂಡು ಅವರಲ್ಲ ಸಭೆ ಸೇರಿ ಕೊಟ್ಟು ಬಹುಮಾನಿಸಿದುವೇ ಈ ತೋಡ, ಕಡಗ, ಕರಡಿಗೆ ರುಮಾಲುಗಳೆಲ್ಲವೂ" ಎಂದು ಹೇಳುತ್ತಿದ್ದರು. ಕೆಲವು ವರ್ಷಗಳನಂತರ ಅವರು ಬೆಂಗಳೂರಿನಿಂದ ಮುಂದಕ್ಕೆ ಪ್ರಯಾಣ ಮಾಡಿದರು. ಯಾವ ಊರಿಗೆ ಹೋದರೆಂಬುದು ಈಗ ಜ್ಞಾಪಕವಿಲ್ಲ.

ಪ್ರಕೃತ ಇಲ್ಲಿ ಹೇಳುವ ನೆನಪು ಅಗ್ಗೆ ಈ ಪಾಷಾಣ ಸ್ವಾಮಿಗಳು ಹೇಳು ತ್ತಿದ್ದ ಒಂದು ವಿಚಾರ ಮಾತ್ರ:

ಬೆಂಗಳೂರಿನ ಇದೇ ಮುಹಂತಿನ ಮಠದಲ್ಲಿ ಬಹುಕಾಲದಿಂದಲೂ ಪುರಾಣ ಪ್ರವಚನ ನಡೆಯುತ್ತಿದ್ದವು. ಹಾಗೆ ನಡೆಯುತ್ತಿದ್ದಾಗ ಒಂದು ಶ್ರಾವಣ ಮಾಸ ದಲ್ಲಿ ಯಾವುದೋ ಊರಿನಿಂದ (ಊರ ಹೆಸರೂ ಈಗ ಜ್ಞಾಪಕವಿಲ್ಲ) ತಂದೆ ಮತ್ತು ಮಗಳು (ತಂದೆಯ ಹೆಸರೂ ಜ್ಞಾಪಕವಿಲ್ಲ)-ಮಗಳ ಹೆಸರು ಮಾತ್ರ "ಮಲ್ಲಿಗೆಮ್ಮ"- ಈ ಇಬ್ಬರು ವ್ಯಕ್ತಿಗಳು ಬಂದು ಈ ಮುಹಂತಿನ ಮಠದಲ್ಲಿ ಉಳಿದುಕೊಂಡು ಪ್ರತಿ ನಿತ್ಯ ಸಂಜೆ ಪುರಾಣ ಪ್ರವಚನ ಮಾಡುತ್ತಿದ್ದರು. ಮಗಳಾದ ಮಲ್ಲಿಗೆಮ್ಮನವರು ಬಸವಪುರಾಣವನ್ನು ಬಹಳ ಸುಶ್ರಾವ್ಯವಾಗಿ, ರಾಗ ರಂಜಿತವಾಗಿ ಓದುತ್ತಿದ್ದರಂತೆ. ಅವರ ಕಂಠವು ಕೋಗಿಲೆಯ ಇಂಚರದಂತೆ ಕಂಚಿನ ಧ್ವನಿಯಂತೆ ಕರ್ಣಾನಂದಕರ ವಾಗಿದ್ದಿತಂತೆ.

ತುಂಬು ಯೌವ್ವನದ, ಇಂಬುಕಂಠದ, ಗಮಕ ಪಾಂಡಿತ್ಯದ, ಆ ಪುರಾಣ ವಾಚನಕ್ಕೆ ಆ ಮಲ್ಲಿಗೆಮ್ಮನವರ ತಂದೆಯವರೇ ಅನುಭಾವ ಪೂರ್ಣವಾಗಿ ವಚನ ಶಾಸ್ತ್ರವನ್ನೂ ಉದಾಹರಿಸಿ ವ್ಯಾಖ್ಯಾನವನ್ನು ಹೇಳುತ್ತಿದ್ದರಂತೆ. ಆ ಕಾಲಕ್ಕೆ ಬೆಂಗಳೂರಿನ ವರ್ತಕರೆಲ್ಲರೂ ಮಡದಿ ಮಕ್ಕಳೊಂದಿಗೆ ಈ ಪುರಾಣ ಶ್ರವಣಕ್ಕೆ ಬರುತ್ತಿದ್ದು ಮಠದ ಒಳಗೂ ಹೊರ ಆವರಣದೊಳಗೂ ತುಂಬಿ ಚಿಕ್ಕಪೇಟೆಯ ಅಂಗಡಿಗಳ ಜಗಲಿಗಳೆಲ್ಲ ತುಂಬಿ ಹೋಗುತ್ತಿದ್ದವಂತೆ. ಧ್ವನಿವರ್ಧಕ ಯಂತ್ರವಿಲ್ಲದ ಆ ಕಾಲದಲ್ಲಿ ಸುತ್ತಲೂ ಅರೆ ಫರ್ಲಾಂಗ್ ದೂರದವರೆಗೂ ಈ ಪುರಾಣ ವ್ಯಾಖ್ಯಾನ ಸ್ಪಷ್ಟವಾಗಿ ಕೇಳಿಸುತ್ತಿದ್ದಿತು.

ಹೀಗೆ ಅದ್ದೂರಿಯಾಗಿ ನಡೆಯುತ್ತಾ ಸಹಸ್ರಾರು ಜನಸಂದಣಿಗೆ ನಡೆಯು ತ್ತಿದ್ದ ಭಕ್ತಿ-ಕಾವ್ಯಗಳ ರಸಕವಳದ ಸುಗ್ರಾಸ ಭೋಜನದ ಸುದ್ದಿಯು ಆಗಿನ ಮೈಸೂರು ದೊರೆಗಳಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ ಕಿವಿಗೆ ತಲುಪಿ, ಆ ಮಹಾರಾಜರೂ ಬೆಂಗಳೂರಿಗೆ ಬಂದು ಏಕಾಂಗಿಯಾಗಿ ವೇಷಾಂತರದಿಂದ ಕಂಬಳಿ ಕೊಪ್ಪೆಯನ್ನು ಹಾಕಿಕೊಂಡು ಮುಹಂತಿನ ಮಠದ ಆವರಣದಲ್ಲಿ ಜನಸಂದಣಿಯ ಮಧ್ಯೆ ಕುಳಿತು ಪುರಾಣವನ್ನು ಕೇಳಿ ಮಂಗಳಾನಂತರ ಎದ್ದು ಹೋಗಿಬಿಡುತ್ತಿದ್ದ ರಂತೆ.

ಹೀಗೆ ಪುರಾಣ ಸಮಾಪ್ತಿಯವರೆಗೂ ನಿತ್ಯ ಬಂದು ಪುರಾಣ ವ್ಯಾಖ್ಯಾನ ಗಳನ್ನು ಕೇಳುತ್ತಿದ್ದು ಸಮಾಪ್ತಿ ಗಣಪರ್ವ ಮಹಾಮಂಗಳವೆಲ್ಲ ಮುಗಿದ ದಿನ ಅದೇ ಮಾರುವೇಷದಲ್ಲಿಯೇ ಮಲ್ಲಿಗೆಮ್ಮನವರ ತಂದೆಯವರನ್ನು ಕಂಡು ಅವರ ಪುರಾಣ ವ್ಯಾಖ್ಯಾನಗಳನ್ನು ಹೊಗಳಿ, "ನಿಮ್ಮಂತಹವರ ಪುರಾಣ-ಪ್ರವಚನವು ಮೈಸೂರು ಅರಮನೆಯಲ್ಲಿ ನಡೆದರೆ ಅರಮನೆಯೂ ಪವಿತ್ರವಾಗಿ ದೊರೆಗಳೂ ಪುನೀತರಾಗುತ್ತಾರೆ. ಶ್ರವಣಕ್ಕಾಗಿ ಬರುವ ರಾಜಮಾನ್ಯರುಗಳಾದ ವಿದ್ವಾಂಸರೂ, ಶ್ರೀಮಂತರೂ, ರಾಜಪ್ರಮುಖರಾದ ವರ್ತಕರೂ ಮತ್ತು ರಾಣಿವಾಸದ ಮಹಿಳೆ ಯರೂ ಹೀಗೆ ಸಹಸ್ರಾವಧಿ ಸಂಖ್ಯೆಯ ಮೇಲ್ದರ್ಜೆಯ ಜನರು ತಮ್ಮಗಳ ವಾಚನ, ವ್ಯಾಖ್ಯಾನ, ಪ್ರವಚನಗಳ ಪ್ರಭಾವದಿಂದ ಪುನೀತರಾಗಿ, ಸನ್ಮಾರ್ಗಗಾಮಿಗಳಾಗಿ ತಮ್ಮ ಶಿಷ್ಯರಾಗುವುದರಲ್ಲಿ ಸಂದೇಹವಿಲ್ಲ. ತಾವುಗಳು ಕೃಪೆಯಿಟ್ಟು ಒಪ್ಪಿ ದರೆ ದೊರೆಗಳಿಗೆ ತಿಳಿಸಿ ಮುಂದಿನ ಏರ್ಪಾಟನ್ನು ನಾನು ಮಾಡುತ್ತೇನೆ." ಎಂದು ಬಿನ್ನವಿಸಿಕೊಂಡರಂತೆ.

ಈ ಮಾರುವೇಷದ ವ್ಯಕ್ತಿಯ ಬಿನ್ನಹವನ್ನು ಆಲಿಸಿದ ಆ ತಂದೆ-ಮಗಳು ಇಬ್ಬರೂ ಆ ವ್ಯಕ್ತಿಯನ್ನು ಅಲ್ಲೇ ಕುಳಿತಿರುವಂತೆ ತಿಳಿಸಿ, ಒಳಹೋಗಿ ಏಕಾಂತದಲ್ಲಿ ಪರಸ್ಪರ ಸಮಾಲೋಚಿಸಿಕೊಂಡು ಆ ವ್ಯಕ್ತಿ ಇದ್ದಲ್ಲಿಗೆ ಬಂದು, "ಮೊದಲು ನೀವು ಯಾರು ಎಂಬುದೇ ತಿಳಿಯಲಿಲ್ಲ. ನೀವು ಯಾರಾದರೂ ಆಗಿರಿ ನಮಗೆ ಅದರ ಚಿಂತೆ ಇಲ್ಲ. ನಾವು ರಾಜರ ಆಶ್ರಯವನ್ನಾಗಲಿ, ಬಿರುದು ಬಾವಲಿಗಳನ್ನಾಗಲಿ ಅಪೇಕ್ಷಿಸುವವರಲ್ಲ. ಆಸೆ, ಆಮಿಷಗಳಿಂದ ಹಾಗೆ ರಾಜಾಶ್ರಯವನ್ನು ಪಡೆದ ಹೆಂಗಸರಾಗಲಿ, ಗಂಡಸರಾಗಲಿ ಕೊನೆಗೆ ಏನಾಗುತ್ತಾರೆಂಬುದನ್ನು ಪುರಾಣ ಪುಣ್ಯ ಕಥೆಗಳನ್ನು ಹೇಳುವ ನಮ್ಮಂಥ ಅನೇಕರಿಂದ ಪುರಾಣಗಳನ್ನು ಕೇಳಿರುವ ನಿಮಗೆ ಪುನಃ ವಿವರಿಸುವ ಅಗತ್ಯವಿಲ್ಲ. ಮೇಲಾಗಿ ಆಸ್ಥಾನ ವಿದ್ವಾಂಸರೂ ಪಂಡಿತರೂ ವಿದ್ವಜ್ಜನರು ಶ್ರೀಮಂತ ವಣಿಕರು ಮುಂತಾದವರು ರಾಜರ ಆಹ್ವಾನವನ್ನು ಮನ್ನಿಸಿ ಅಲ್ಲಿಗೆ ಬರುವರಾದರೂ "ಪುರಾಣ ಹೇಳುವುದಕ್ಕೆ ಬದನೆಕಾಯಿ ತಿನ್ನುವು ದಕ್ಕೆ" ಎಂಬಂತಾಗಿ ಅವರಲ್ಲಿ ಬಹುಜನರ ಮನ, ಬುದ್ಧಿ, ಚಿತ್ತ, ಅಂತರಂಗ, ಆಲೋಚನೆ, ಅವಲೋಕನಗಳೆಲ್ಲವೂ ಎಲ್ಲಿರುತ್ತವೆ ? ಹೇಗಿರುತ್ತವೆ ? ಯಾವ ಕಲ್ಪನಾ ಸಾಮ್ರಾಜ್ಯದಲ್ಲಿ ಮುಳುಗಿರುತ್ತವೆ ? ಎಂಬುದೆಲ್ಲ ನೀವು ಬಲ್ಲಿರಿ. ಆದು ದರಿಂದ ನಾವು ಅಂತಹ ಕಲ್ಪನಾ ಸಾಮ್ರಾಜ್ಯದ ಮೇಲುದರ್ಜೆಯ ಜನರಿಗಿಂತಲೂ ದುಡಿಮೆಯಲ್ಲಿ ನಿರತರಾಗಿ ಗಳಿಸಿದ ಬಳಿಕ ವಿರಾಮ ಸಮಯವನ್ನು ಪುರಾಣ-ಪುಣ್ಯ ಸ್ಮರಣೆಗಳಿಗೆ ವಿನಿಯೋಗಿಸಲು ಬರುವ ಸಾಮಾನ್ಯ ಜನ ಸಮೂಹಕ್ಕೆ ಸಾತ್ವಿಕ-ನೈತಿಕ ವಿಚಾರಗಳನ್ನು ತಿಳಿಸಿ ಜೀವನವನ್ನು ಸನ್ಮಾರ್ಗಕ್ಕೆ ಪ್ರಚೋದನೆಗೊಳಿಸುವುದ ರಲ್ಲಿಯೇ ಸಂತೃಪ್ತರಾಗುತ್ತಿದ್ದೇವೆ; ಆದುದರಿಂದ ನಮ್ಮನ್ನು ಇಲ್ಲಿಗೆ ಬಿಟ್ಟು ಬಿಡಿ.

ಶರಣು ಶರಣಾರ್ಥಿ" ಎಂದು ಹೇಳಿ ಉತ್ತರಕ್ಕೂ ಕಾಯದೆ ಇಬ್ಬರೂ ಒಳಕ್ಕೆ ಹೊರಟುಹೋದರಂತೆ.

ಆ ಮಾರು ವೇಷದ ವ್ಯಕ್ತಿಯು ಆಶ್ಚರ್ಯಪಟ್ಟರೂ ಕೊಂಚ ಪೆಚ್ಚಾಗಿ ಎದ್ದು ಹೊರಟು ಹೋದರು. ಪಟ್ಟು ಬಿಡದೆ ಮರುದಿನ ರಾಜ ಲಾಂಛನಗಳಿಲ್ಲದ ಶ್ರೀಮಂತ ಉಡಿಗೆ ತೊಡಿಗೆಗಳನ್ನು ಧರಿಸಿ, ಮತ್ತೊಬ್ಬ ಸಂಧಾನ ಚತುರನೊಡನೆ ಒಂದು ಶ್ರೀಮಂತ ಬಗ್ಗೀ ಗಾಡಿಯಲ್ಲಿ ಕುಳಿತು ಮತ್ತೆ ಮಹಂತಿನ ಮಠಕ್ಕೆ ಹಾಜರಾದರಂತೆ. ಮತ್ತೆ ತಂದೆ-ಮಗಳು ಇಬ್ಬರೊಡನೆ ಕುಶಲ ಪ್ರಶ್ನೆಗಳಾದ ನಂತರ ಜೊತೆಯಲ್ಲಿ ಬಂದಿದ್ದ ಸಂಧಾನಕಾರ ವ್ಯಕ್ತಿಯು ಮಹಾರಾಜರನ್ನು ಪರಿಚಯ ಮಾಡಿಕೊಟ್ಟನಂತರ, ತಂದೆ - ಮಗಳು ಇಬ್ಬರೂ ಆಶ್ಚರ್ಯಚಕಿತರಾಗಿ ಈ ಮುಖವನ್ನು ತೀರ ಇತ್ತೀಚೆಗೆ ಎಲ್ಲಿಯೋ ನೋಡಿದಂತೆ ಇದೆಯೆಲ್ಲಾ ಎಂದು ಯೋಚಿಸುತ್ತಿರವಷ್ಟರಲ್ಲಿಯೇ ಮುಮ್ಮಡಿ ಕೃಷ್ಣರಾಜ ಒಡೆಯರವರೇ ಮುಂದಾಗಿ, "ಪ್ರತಿದಿನ ಮಾರು ವೇಷದಲ್ಲಿ ಪುರಾಣ ಶ್ರವಣಕ್ಕೆ ಬರುತ್ತಿದ್ದುದೂ ನಿನ್ನೆಯ ದಿನ ತಮ್ಮನ್ನು ಮೈಸೂರು ಅರಮನೆಗೆ ಅಹ್ವಾನಿಸಿದುದೂ ನಾವೇ. ಸ್ಥಿರ ಚಿತ್ತ, ನಿಷ್ಕಾಮಬುದ್ಧಿ, ಸರಳ ವ್ಯಕ್ತಿತ್ವಗಳನ್ನು ಪ್ರತ್ಯಕ್ಷವಾಗಿ ನಿನ್ನೆ ಕಂಡ ಬಳಿಕ ನಮ್ಮ ಮಾರು ವೇಷದಿಂದ ನಮಗೇ ನಾಚಿಗೆಯಾಗಿ ಹೊರಟುಹೋದೆವು" ಎಂದಂದು ಸುಮ್ಮನೆಕುಳಿತರಂತೆ. ಮಲ್ಲಿಗೆಮ್ಮನವರ ತಂದೆಯವರೇ ಮಹಾರಾಜರನ್ನು ಕುರಿತು, ಮಾರು ವೇಷದಲ್ಲಿಯೂ ನಿಜ ಸ್ಥಿತಿಯನ್ನು ನಿನ್ನೆಯೇ ತಿಳಿಸಿ ಬಿಟ್ಟಿದ್ದರೆ ಸಾಮಾನ್ಯ ಪ್ರಜೆಗಳಾದ ನಾವು ಪ್ರಭುಗಳ ರಾಜಭಕ್ತಿಯನ್ನು ನಿನ್ನೆಯೇ ಸಲ್ಲಿಸುತ್ತಿದ್ದೆವು. ಈ ದಿನ ಪ್ರಭುಗಳು ವೃಥಾಶ್ರಮ ತೆಗೆದುಕೊಳ್ಳುವ ಅಗತ್ಯವೇ ಇರುತ್ತಿರಲಿಲ್ಲ ಎಂದರು. ಆಗ ಮಹಾರಾಜರ ಜೊತೆಗಿದ್ದ ಸಂಧಾನಕಾರ ವ್ಯಕ್ತಿಯು ಮಾತನಾಡಿ, "ಮಹಾಪ್ರಭುಗಳಿಗೆ ರಾಜಭಕ್ತಿಯನ್ನು ತಾವು ಯಾವರೀತಿ ಸಲ್ಲಿಸುವ ಅಪೇಕ್ಷೆ ಇದೆ ಎಂಬುದನ್ನು ತಿಳಿಸಿದರೆ ಆ ಬಳಿಕ ಪ್ರಭು ಚಿತ್ತವನ್ನು ಅರಿಕೆ ಮಾಡಿಕೊಳ್ಳುತ್ತೇನೆ" ಎಂದರು. ಮತ್ತೆ ಮಲ್ಲಿಗೆಮ್ಮನವರ ತಂದೆಯವರು, "ಅದನ್ನೂ ಕೇಳಬೇಕೆ ? ಪುರಾಣೇತಿಹಾಸಗಳಲ್ಲೆಲ್ಲಾ ತಾವೂ ಕೇಳಿಲ್ಲವೆ ? ಸಾಮಾನ್ಯ ಬಡಪ್ರಜೆಗಳು ರಾಜಭಕ್ತಿಯನ್ನು ಒಪ್ಪಿಸುವುದೆಂದರೆ ಫಲ ಪುಷ್ಪಗಳನ್ನು ಒಪ್ಪಿಸಿ, ಮಾಲಾ ಸಮರ್ಪಣೆಯೊಡನೆ ವಂದಿಸಿ, ಶಕ್ತಿ ಇದ್ದಷ್ಟು ಕಾಣಿಕೆ ಸಮರ್ಪಣೆ ಮಾಡಿ ಅಥವ ಬೇಡಿ ಬೀಳ್ಕೊಡುವುದು" ಎಂದರು. ಇದನ್ನು ಕೇಳಿದ ಸಂಧಾನಕಾರ ವ್ಯಕ್ತಿಯು ಭಯ ಮಿಶ್ರಿತ ಸಂತೋಷದಿಂದ ತಲೆದೂಗಿ, "ಪ್ರಭುಗಳು ತಮ್ಮಿಂದ ಫಲ ಪುಷ್ಪಮಾಲೆ ಕಾಣಿಕೆ ಇದ್ಯಾವನ್ನೂ ಅಪೇಕ್ಷಿಸುವುದಿಲ್ಲ. ಅವರ ಅಪೇಕ್ಷೆಯನ್ನು ನಡೆಸಿಕೊಡುವುದಾಗಿ ತಾವು ಮಾತುಕೊಟ್ಟರೆ ಅವರ ಅಪೇಕ್ಷೆಯನ್ನು ಅರಿಕೆಮಾಡಿಕೊಳ್ಳುತ್ತೇನೆ" ಎಂದರು. ಆಗ ತಂದೆಯವರು, "ಅಪೇಕ್ಷೆಯು ಸಾಧ್ಯವಾದದ್ದಾದರೆ ಮತ್ತು ನಮ್ಮಿಂದ ಸಾಧ್ಯ

ವಾಗುವುದಾಗಿದ್ದರೆ ಮೊದಲೇ ನಾವು ಅವರ ಪ್ರಜೆಗಳೆ ಅಲ್ಲವೆ ? ನೀವು ಹೇಬೇಕಾದ್ದನ್ನು ನಿಸ್ಸಂಕೋಚವಾಗಿ ಹೇಳಿ" ಎಂದರು. ಆಗ ಸಂಧಾನಕಾರ ವ್ಯಕ್ತಿಯು ಪ್ರಭುಗಳ ಮುಖವನ್ನೇ ನೋಡಿ ಭಯ ಸಂಕೋಚಗಳಿಂದಲೇ ಹೇಳತೊಡಗಿ, "ಅರಮನೆಯಲ್ಲಿ ಕೆಲವು ಕಾಲ ತಮ್ಮಿಬ್ಬರ ಪುರಾಣ ಪ್ರವಚನವಾಗಬೇಕೆಂತಲೂ, ಅನಂತರ ಮಹಾಪ್ರಭುಗಳೊಡನೆ ತಮ್ಮ ಪುತ್ರಿಯವರ ಕಲ್ಯಾಣವಾಗಬೇಕೆಂತಲೂ ಪ್ರಭುಗಳ ಅಪೇಕ್ಷೆ. ಇದರಲ್ಲಿ ಬಲಾತ್ಕಾರವೇನೂ ಇಲ್ಲ. ತಮ್ಮಗಳಿಂದ ಕ್ಷೇತ್ರಪಾವನ ವಂಶವೃದ್ಧಿ ಗಳೆರಡನ್ನೂ ಪ್ರಭುಗಳು ಅಪೇಕ್ಷಿಸಿದ್ದಾರೆ. ತಮ್ಮಗಳ ಸ್ಥಿರಚಿತ್ತ, ಸರಳ ಸ್ವಭಾವಗಳನ್ನು ಕಂಡು ಅವರೇ ಹೇಳಲು ಸಂಕೋಚಪಟ್ಟು ನನ್ನ ಮೂಲಕ ಹೇಳಿಸುತ್ತಿದ್ದಾರೆ. ತಮ್ಮಿಂದ ಸಂತೋಷದಾಯಕವಾದ ಉತ್ತರವನ್ನೇ ಪ್ರಭುಗಳು ನಿರೀಕ್ಷಿಸುತ್ತಿದ್ದಾರೆ" ಎಂದು ಸುಮ್ಮನಾದರು.

ಆಗ ದೊರೆಗಳು : "ಈಗಲೂ ಸೌಂದರ್ಯಕ್ಕಾಗಲೀ, ಯೌವನಕ್ಕಾಗಲಿ, ಕಂಠಮಾಧುರ್ಯಕ್ಕಾಗಲಿ ಸೋತು ನಾವು ಯಾಚಿಸುತ್ತಿಲ್ಲ. ನಿಮ್ಮ ಈ ಅನುಭಾವ ಆಧ್ಯಾತ್ಮವಿಚಾರ ಜನತೆಯ ಧಾರ್ಮಿಕ ಮೌಢ್ಯವನ್ನು ನಿವಾರಿಸಬೇಕೆಂಬ ನಿಮ್ಮ ಶಾಸ್ತ್ರಜ್ಞಾನದ ಅಂತರಂಗದ ವಿಚಾರಗಳನ್ನು ಸ್ವತಃ ಕೇಳಿ ತಿಳಿದ ನಾವು ಈ ಅಪೇಕ್ಷೆಯನ್ನು ಮುಂದಿಡುತ್ತಿದ್ದೇವೆ" ಎಂದು ಸುಮ್ಮನಾದರು.

ಆಗ ಮಲ್ಲಿಗೆಮ್ಮನವರೂ ತಂದೆಯವರೂ ಚಕಿತರಾಗಿ ಅವಕಾಶವನ್ನು ಕೇಳಿ ಒಳಗೆ ಹೋಗಿ ಸಮಾಲೋಚಿಸಿ ಹೊರಗೆ ಬಂದು ತಂದೆಯವರು ಹೇಳಿದರು, "ಪ್ರಭುಗಳು ಯಾವ ಕುಲದವರೇ ಆಗಿರಲಿ ಅವರು ಈಗ ರಾಜರು, ರಾಜರಾದವರು ಎಲ್ಲ ಪ್ರಜೆಗಳ ತೃಪ್ತಿಗಾಗಿ ಎಲ್ಲ ದೇವರುಗಳಲ್ಲಿಯೂ ಭಕ್ತಿಯನ್ನು ತೋರಿಸಬೇಕಾಗುತ್ತದೆ. ಅವರು ಹಾಗೆ ಮಾಡುತ್ತಿದ್ದಾರೆ. ನಾವಾದರೋ ಲಿಂಗಾಯಿತರು. ಪಂಚಾಚಾರ ನಿರತರು. ಅವುಗಳಲ್ಲಿ ಮೊದಲನೆಯದಾದ ಗಣಾಚಾರವೆಂಬುದು ಲಿಂಗಧಾರಿಗಳಪರ ವಿಚಾರದಲ್ಲಿ ಬಹು ಕಟ್ಟುನಿಟ್ಟಾದ ಉಗ್ರ ಆಚರಣೆಯನ್ನು ಹೇಳುತ್ತದೆ. ಭಕ್ತರಾದ ನಾವು ಭವಿಗಳೊಡನೆ ಸಂಪರ್ಕ ಮಾಡುವುದೆಂದರೆ ಅದು ಆಗದ ಮಾತು. ಪುರಾಣ ಪ್ರವಚನವನ್ನು ಬೇಕಾದರೆ ಮಾಡುತ್ತೇವೆ. ಕಲ್ಯಾಣದ ವಿಚಾರ ಮಾತ್ರ ಸಾಧ್ಯವಾಗದ ಮಾತು. ಪ್ರಭುಗಳ ಅಪ್ಪಣೆಯಾದರೆ ಪುರಾಣ ಪ್ರವಚನ ಮಾತ್ರ ಮಾಡುತ್ತೇವೆ. ಈ ನಮ್ಮ ಬಿನ್ನಹವನ್ನು ಪ್ರಭುಗಳಿಗೆ ವಿನಮ್ರ ಮಾತುಗಳಿಂದ ತಿಳಿಸಿರಿ" ಎಂದು ಸಂಧಾನಕಾರರಿಗೆ ಹೇಳಿದರು.

ಈ ವಿಚಾರಗಳನ್ನು ಪ್ರಭುಗಳೊಡನೆ ಸಮಾಲೋಚಿಸಿ ಸಂಧಾನಕಾರರು ಮತ್ತೆ ಹೇಳತೊಡಗಿದರು, "ಪ್ರಭುಗಳು ಪ್ರಜಾರಂಜನೆಗಾಗಿ ಎಲ್ಲ ದೇವರುಗಳಲ್ಲಿಯೂ ಭಕ್ತಿಯನ್ನು ತೋರಿಸುತ್ತಿದ್ದಾರೆಯಾದರೂ, ಅವರ ಅಂತರಂಗದಲ್ಲಿ ಮಾತ್ರ

ಶಿವಭಕ್ತಿಗೆ ಪ್ರಾಧಾನ್ಯ. ಶ್ರೀಕಂಠೇಶ್ವರನೇ ಮುಖ್ಯ ದೈವ. ಇದು ನಿಮ್ಮ ಒಪ್ಪಿಗೆಗಾಗಿ ಹೇಳುವ ಮಾತಲ್ಲ. ಬೇಕಾದರೆ ನೀವು ನಿಧಾನವಾಗಿ ಗಮನಿಸಿ ತೀರ್ಮಾನಕ್ಕೆ ಬರಬಹುದು. ಆದರೂ ಪ್ರಭುಗಳು ಶಿವದೀಕ್ಷೆ ಪಡೆಯಲು ಸಿದ್ಧರಾಗಿದ್ದರೂ ಅವರ ಸಂಬಂಧಿಕರೆಲ್ಲರನ್ನೂ ಒಪ್ಪಿಸುವ ಬಗ್ಗೆ ಪರ್ಯಾಲೋಚಿಸಬೇಕಾಗಿರುವುದರಿಂದ ಒಂದು ವಾರದ ಅವಕಾಶವನ್ನು ಅಪೇಕ್ಷಿಸುತ್ತಿದ್ದಾರೆ" ಎಂದರು.

ಆಗ ಮಲ್ಲಿಗೆಮ್ಮನವರ ತಂದೆಯವರೂ ಇಕ್ಕಟ್ಟಿಗೆ ಸಿಕ್ಕಿದಂತಾಗಿ ಒಳಗೆ ಹೋಗಿ ಸಮಾಲೋಚಿಸಿ ಬಂದು ಆಗಬಹುದೆಂದ ಬಳಿಕ ಮಹಾರಾಜರೂ ಸಂಧಾನಕಾರರೂ ಸಮಾಧಾನಚಿತ್ತದಿಂದ ತೆರಳಿದರು. ಹೀಗೆ ಹೊರಟುಹೋದವರು ಒಂದು ವಾರದ ನಂತರ ಮಹಂತಿನ ಮಠಕ್ಕೆ ಮತ್ತೆ ಪ್ರತ್ಯಕ್ಷರಾದರು. ಮಲ್ಲಿಗೆಮ್ಮನವರೂ ತಂದೆಯವರೂ ಒಂದು ಬಗೆಯ ಕೊರಗಿನಿಂದಲೇ ಹಸನ್ಮುಖಿಗಳಾಗಿ ಸ್ವಾಗತಿಸಿದ ಬಳಿಕ ವಿಚಾರ ವಿನಿಮಯಕ್ಕೆ ಆರಂಭವಾಯಿತು.

ಸಂಧಾನಕಾರರು : "ಪ್ರಭುಗಳು ಸಂಬಂಧಿಕರನ್ನೆಲ್ಲಾ ದೀಕ್ಷೆಗೆ ಒಪ್ಪಿಸಿದ್ದಾರೆ. ಅಲ್ಲದೆ ಸ್ವಯಂ ದೀಕ್ಷಾಬದ್ಧರಾಗಿ ಲಿಂಗವಂತಿಕೆಯನ್ನು ಆಚರಿಸಲು ಒಪ್ಪಿಕೊಂಡಿದ್ದಾರೆ. ಆದುದರಿಂದ ಈಗ ತಾವು ಅವರ ಮನೋಭೀಷ್ಟವನ್ನು ನೆರವೇರಿಸಿದರೆ ತುಂಬಾ ಸಂತೋಷಪಡುತ್ತಾರೆ. ತಮ್ಮ ಅಭಿಪ್ರಾಯಕ್ಕಾಗಿ ಕುತೂಹಲ ಚಿತ್ತರಾಗಿದ್ದಾರೆ" ಎಂದು ಸುಮ್ಮನಾದರು. ನಿರುಪಾಯರಾದರೂ ಕಾಲಸ್ಥಿತಿಯನ್ನು ಸಮಯ ಸಂದರ್ಭಗಳನ್ನೂ ಚನ್ನಾಗಿ ಯೋಚಿಸಿದ್ದ ಪಿತಾ ಪುತ್ರಿಯರು ಮೌನದಿಂದ ಸಮ್ಮತಿ ಸೂಚಿಸಿದರಾದರೂ ಮೊದಲು ಕೆಲಕಾಲ ಅಲ್ಲಿ ತಮ್ಮ ಪುರಾಣ ಪ್ರವಚನ ನಡೆದ ನಂತರವೇ ಮುಂದಿನ ಕಾರ್ಯಕಲಾಪಗಳು ನಡೆಯುವಂತಾಗಲೆಂಬ ಅಭಿಪ್ರಾಯವನ್ನು ಸೂಚಿಸಿದರು. ಮಹಾರಾಜರೂ ಸಂಧಾನಕಾರರೂ ಪರಸ್ಪರ ಮುಖ ನೋಡಿಕೊಂಡು ಅಗತ್ಯವಾಗಿ ಆಗಬಹುದೆಂದು ಸಮ್ಮತಿಯನ್ನೇ ಸೂಚಿಸಿದರು. ಸಂತೃಪ್ತರಾದ ಮಹಾರಾಜರು, "ಯಾವಾಗ ಅರಮನೆಗೆ ಪ್ರಯಾಣ ಇಟ್ಟುಕೊಳ್ಳೋಣ ?" ಎಂದು ಪ್ರಶ್ನಿಸಲಾಗಿ ತಮ್ಮ ಇಚ್ಛೆಗೇ ಬಿಟ್ಟದ್ದೆಂಬ ಉತ್ತರ ದೊರೆಯಿತು. ಆಗ ಮಹಾರಾಜರು ಸಮೀಪದ ಒಂದು ಶುಭದಿನವನ್ನು ಸೂಚಿಸಿ ಆ ದಿನ ಇಂಥ ಸಮಯಕ್ಕೆ ತಾವುಗಳು ಪ್ರಯಾಣಕ್ಕೆ ಸಿದ್ಧರಾಗಿರಬೇಕೆಂದೂ, ಆ ಸಮಯಕ್ಕೆ ನಾವು ಸಾರೋಟಿನಲ್ಲಿ ಬಂದು ಬೆಂಗಳೂರು ಕೋಟೆಯೊಳಗೆ ಇರುತ್ತೇವೆ ಎಂದೂ, ಕೋಟೆಯ ಮುಂಬಿನ ಆಂಜನೇಯ ದೇವಾಲಯದ ಮುಂದೆ ನಮ್ಮ ಸಾರೋಟು ನಿಂತಿರುತ್ತದೆಯೆಂದೂ, ತಮ್ಮಗಳಿಗೆ ಅಲ್ಲಿಗೆ ಬರುವುದಕ್ಕಾಗಿ ಒಂದು ಬಗ್ಗೀ ಗಾಡಿಯನ್ನು ಕಳಿಸುತ್ತೇವೆ ಅದರಲ್ಲಿ ಬಂದು ತಾವು ಸಾರೋಟು ಹತ್ತುವುದರೊಳಗಾಗಿ ನಾವೂ ಒಂದು ಸಾರೋಟು ಹತ್ತಿ ಜೊತೆಯಲ್ಲಿ ಅರಮನೆಗೆ ಪ್ರಯಾಣ ಮಾಡೋಣವೆಂದೂ ಒಪ್ಪಿಸಿ ಅವರುಗಳಿಂದ ಬೀಳ್ಕೊಂಡರು.

ನಂತರ ಅವರು ಮೊದಲೇ ತಿಳಿಸಿದ್ದ ಶುಭದಿನದಂದು ಕೋಟೆಯ ಬಳಿ ಸಾರೋಟು ನಿಲ್ಲಿಸಿ ಒಳಗೆ ಕಾದಿದ್ದು, ಬಗ್ಗೀಗಾಡಿಯನ್ನು ಮಹಂತಿನ ಮಠಕ್ಕೆ ಕಳಿಸಿ, ತಂದೆ ಮಕ್ಕಳಿಬ್ಬರನ್ನೂ ಕರೆಸಿ ನಾಲ್ಕುಕುದುರೆ ಸಾರೋಟು ಗಾಡಿಯಲ್ಲಿ ಅರಮನೆಗೆ ಕರೆದುಕೊಂಡು ಹೋಗಿ ಒಂದು ತಿಂಗಳ ಕಾಲ ಪುರಾಣ, ಪ್ರವಚನವಿಡಿಸಿ, ಸಂಬಂಧಿಕರೆಲ್ಲರ ಮನೋಧರ್ಮವನ್ನು ಶಿವ ದೀಕ್ಷೆಗೆ ಸಿದ್ಧಗೊಳಿಸಿ ಒಂದು ಶುಭಲಗ್ನದಲ್ಲಿ ಸಂಬಂಧಿಕರೆಲ್ಲರೊಡನೆ ಮಹಾರಾಜರು ಲಿಂಗ ದೀಕ್ಷಾಬದ್ಧರಾಗಿ ಶರಣರ ಆಚಾರ ವಿಚಾರಗಳನ್ನು ಅಳವಡಿಸಿಕೊಂಡ ನಂತರ ಮಲ್ಲಿಗೆಮ್ಮನವರೊಡನೆ ಸಾಂಗವಾಗಿ ವಿವಾಹ ಮಹೋತ್ಸವ ಮಾಡಿಕೊಂಡರೆಂದೂ ಅವರಿಗಾಗಿ ಪ್ರತ್ಯೇಕ ನಿವಾಸ ಸ್ಥಾನವನ್ನೇರ್ಪಡಿಸಿದರೆಂದೂ ಇಂದಿಗೂ ಆ ಜಮೀನಿನ ಛತ್ರವು " ಸಣ್ಣ ಮಲ್ಲಿಗೆ ಛತ್ರ " ಎಂತಲೇ ಹೆಸರುವಾಸಿಯಾಗಿದೆಯೆಂದೂ ಹೀಗಾಗಿ ಮುಮ್ಮಡಿಕೃಷ್ಣರಾಜ ಒಡೆಯರ ಕಾಲದಿಂದ ಆ ಮನೆತನದಲ್ಲಿ ಲಿಂಗದ ಕರಡಿಗೆ, ಭಸ್ಮ, ರುದ್ರಾಕ್ಷಿಗಳನ್ನು ಧರಿಸಿ ಲಿಂಗಪೂಜೆಯನ್ನು ಆಚರಿಸುವ ಪದ್ಧತಿ ಬೆಳೆಯಿತೆಂದೂ ತಿಳಿಸಿ ವೃದ್ಧರಾದ ಪಾಷಾಣ ಸ್ವಾಮಿಗಳವರು ವಿರಮಿಸಿದರು.

[ಇದು ಕರ್ಣಾಕರ್ಣಿಕೆಯಾದುದರಿಂದ ಇದಕ್ಕಿಂತ ಹೆಚ್ಚು ವಿವರಗಳನ್ನು, ಅಂಕಿ ಅಂಶಗಳನ್ನೂ ಮತ್ತು ಇನ್ನೂ ಹೆಚ್ಚು ನಿಜಾಂಶಗಳನ್ನೂ ಬಲ್ಲವರು ದಯವಿಟ್ಟು ಪ್ರಕಟಿಸಬೇಕು]

ಮಾತು ಜ್ಯೋತಿರ್ಲಿಂಗ

ಶರಣೆ ಉಮಾದೇವಿ, ಎಂ.ಎ.,ಎಂ.ಇಡಿ.

ದೇವರ ರಾಜ್ಯದಲ್ಲಿ ಕೆಲವೊಮ್ಮೆ ನ್ಯಾಯ ವಿತರಣೆ ನಿಧಾನವಾಗಬಹುದೇ ವಿನಾ ನಿರಾಕರಿಸಲ್ಪಡುವುದಿಲ್ಲ. —**ಮಣಿ ಆಳ್ವೆ**

ಹಣವನ್ನು ಗಳಿಸುವುದರಲ್ಲಿ ಕಷ್ಟವಿದೆ. ನಂತರ ಅದನ್ನು ಕಾಯುವುದರಲ್ಲಿ ಕಷ್ಟವಿದೆ. ಅದು ಕಳೆದುಹೋದರೂ ಕಷ್ಟ. ವೆಚ್ಚವಾದರೂ ಕಷ್ಟ. ಹೀಗೆ ಹಣವು ಎಲ್ಲ ದುಃಖಗಳ ತವರ್ಮನೆಯಾಗಿದೆ. —**ಮಹಾಭಾರತ**

ನೀನು ಸರಿಯಾದ ದಾರಿಯಲ್ಲೇ ಇರಬಹುದು. ಆದರೆ ಜಾಗ್ರತನಾಗಿ ಕೆಲಸ ಮಾಡದಿದ್ದರೆ ಯಾರಾದರೂ ನಿನ್ನನ್ನು ಹಿಂದುಳಿಸಿ, ಮುಂದೆ ಸಾಗುವರು.

—**ಆಂಗ್ಲ ಗಾದೆ**

ಹೆಚ್ಚು ಓದಿದಂತೆಲ್ಲ ನಮ್ಮ ಅಜ್ಞಾನವನ್ನು ಹೆಚ್ಚೆಚ್ಚು ಅರಿಯುತ್ತೇವೆ. -**ಶೆಲ್ಲಿ**

ವಿಚಾರ ಮಾಡದೆ ಮಾತನಾಡುವುದು ಗುರಿಯನ್ನಿಡದೆ ಬಾಣ ಬಿಟ್ಟಂತೆ.

—**ಆಂಗ್ಲ ಗಾದೆ**

ನಾವು ನಿಗ್ರಹಿಸಬೇಕಾದುದು ಮೂರನ್ನು: ನಾಲಿಗೆ, ನಡತೆ ಮತ್ತು ಸಿಟ್ಟು.

—**ಅನುಭವವಾಣಿ**

ನಿಜವಾದ ಪ್ರತಿಭೆ ನದಿಯಂತೆ, ಆಳವಾದಂತೆಲ್ಲ ಕಡಿಮೆ ಶಬ್ದ ಮಾಡುತ್ತ ಗಂಭೀರವಾಗಿ ಹರಿಯುತ್ತದೆ. —**ಅನಾಮಿಕ**

ತುಂಬಿದ ಹೊಟ್ಟೆ ದಡ್ಡ ಮೆದುಳನ್ನು ನಿರ್ಮಿಸುತ್ತದೆ. —**ಫ್ರಾಂಕ್ಲಿನ್**

ಒಬ್ಬ ಮನುಷ್ಯನನ್ನು ದೈವೀಕರಿಸುವವು ಮೂರು ಸಾಧನಗಳು: ಪ್ರಾರ್ಥನೆ, ಚಿಂತನ ಮತ್ತು ಕಷ್ಟಗಳು. —**ಸಿ. ಸಿಮ್ಮನ್ಸ್**

ಸಾವಿನ ಕ್ರೌರ್ಯವನ್ನು ನಾವು ಅರಿಯುವುದು ಕೇವಲ ಅದು ನಮ್ಮ ಅತ್ಯಂತ ಪ್ರೀತಿಪಾತ್ರರ ಮೇಲೆ ಕೈಹಾಕಿದಾಗ. —**ಮೇಡಂ ಡಿ. ಸ್ಟೀಲ್**

ಕಲಾಕೃತಿಗಳು ತೂಗುಹಾಕಲ್ಪಟ್ಟ ಕೋಣೆ ಎಂದರೆ ವಿಚಾರಗಳು ತೂಗುಹಾಕಲ್ಪಟ್ಟ ಕೋಣೆ. —**ಜೋಷು ಆ ರೇನಾಲ್ಡ್ಸ್**

ಒಂದು ಉತ್ಕೃಷ್ಟವಾದ ಗ್ರಂಥಾಲಯವೆಂದರೆ ಮಾನವ ಜನಾಂಗದ ದಿನಚರಿ ಇದ್ದಂತೆ. ಬುದ್ಧಿವಂತರ ಸಲಹಾ ಕೋಣೆಯೆಂದರೆ ಗ್ರಂಥಭಂಡಾರವೇ!

—**ಜಿ. ಡಾಸನ್**

ವಚನಗಳು

ವಿ. ಯಸ್. ಗುಬ್ಬಿ. ಗೋರಟ

ಚಿತ್ತಶುದ್ಧಿ

ಚಿತ್ತಶುದ್ಧಿಯಿಲ್ಲದೆ
ಶಿಷ್ಯವೃತ್ತಿ ನಿಲ್ಲುವುದೆ?
ಆತ್ಮಶುದ್ಧಿಯಿಲ್ಲದೆ,
ಅಧ್ಯಾತ್ಮವಲಿವುದೆ ?
ಶಿವನೊಲುಮೆಯಿಲ್ಲದೆ,
ಮುಕುತಿ ಎಂಬುದೆಲ್ಲಿದೆ?
ಮುಕುತಿಯಿಲ್ಲದ ಆತ್ಮ,
ಮೂಗುತಿಯಿಲ್ಲದ ಹೆಣ್ಣು
ಎರಡು ಒಂದೆ – ಎಂದ ಗುಬ್ಬಿ.

ರೂವಾರಿ

ಕಲ್ಲ ಕಡೆದು ಮೂರ್ತಿ ಮಾಡಿ,
ನಿರ್ಜೀವ ಕಲ್ಲಿಗೆ ರೂಪ ಕೊಟ್ಟು,
ಭಕ್ತಿ-ಭಾವ ಮೈಗೂಡಿಸುವವ - ರೂವಾರಿ.

ಸುಗಂಧ ಕೊರಡ ಕೊರೆದು,
ಶಿಲ್ಪಕಲೆಯ ಚರಗ ಬಿಡಿಸಿ,
ಮನದ ಭ್ರಾಂತಿ ಹರಿಸುವವ - ರೂವಾರಿ.

ಮಾಯೆ ಎಂಬ ಮೋಹ ಬಿಡಿಸಿ,
ಧರ್ಮ-ಶ್ರದ್ಧೆ ಮನದಿ ಬೆಳೆಸಿ,
ಆಧ್ಯಾತ್ಮಭಾವ ಬೆಳೆಸುವವ - ರೂವಾರಿ.

ವ್ಯಾವಹಾರಿಕ ಜ್ಞಾನ

ಶ್ರೀ ಶಕ್ತಿತನಯ

ಜ್ಞಾನ ಎಂದರೆ ತಿಳಿಯುವದು ಅಥವಾ ಅರಿಯುವದು. ಸಾಮಾನ್ಯವಾಗಿ ಜ್ಞಾನದಲ್ಲಿ ಮೂರು ಪ್ರಕಾರವಾಗಿ ವಿಂಗಡಿಸಬಹುದು—ಪುಸ್ತಕ ಜ್ಞಾನ: ಪುಸ್ತಕಗಳನ್ನು ಅಭ್ಯಸಿಸಿ ಪಡೆದುಕೊಂಡಂತಹ ಜ್ಞಾನ; ಮಸ್ತಕ ಜ್ಞಾನ: ಸ್ವಂತ ಮೇಧಾ ಶಕ್ತಿಯಿಂದ ಪಡೆದುಕೊಂಡುದು; ವ್ಯವಹಾರಿಕ ಜ್ಞಾನ: ಸಾಮಾನ್ಯ ಜ್ಞಾನ, ನಿತ್ಯಾನಿತ್ಯ ವಿವೇಕ, ಪೌರಾಪೌರ್ವ ಜ್ಞಾನವೆಂತಲೂ ಪರ್ಯಾಯವಾಗಿ ಕರೆಯಲ್ಪಡುವದು. ಇದು ಜೀವನಾನುಭವದಿಂದ ಬರುವದು. ಜೀವನಾನುಭವದಿಂದ ಬರುವದೆಂದ ಮಾತ್ರಕ್ಕೆ ಆಯುಷ್ಯದ ಕೊನೆಯ ಹಂತದಲ್ಲಿರುವವರಿಗೆಲ್ಲ ವ್ಯವಹಾರಿಕ ಜ್ಞಾನವಿರುವದೆಂತಲ್ಲ. ಅದು ದೇವನ ಕೊಡುಗೆಯೂ ಹೌದು. ಇಂಗ್ಲೀಷಿನ Common Sense ಎಂಬುದರ ಸಮಾನಾರ್ಥದಲ್ಲಿ "ಸಾಮಾನ್ಯ ಜ್ಞಾನ"ವೆಂದು ಅಥವಾ "ವ್ಯವಹಾರಿಕ ಜ್ಞಾನ"ವೆಂದು ಬಳಸಲಾಗಿದೆ. ಮಾನವನಿಗೆ ಪಂಚ ಜ್ಞಾನೇಂದ್ರಿಯಗಳಿವೆ. ಇವುಗಳು ಜ್ಞಾನದ ಐದು ಹೆಬ್ಬಾಗಿಲುಗಳಿದ್ದಂತೆ. ಇವುಗಳಿಂದ ಮಾನವನು ಬಾಹ್ಯಜ್ಞಾನವನ್ನು ಪಡೆದುಕೊಳ್ಳುತ್ತಾನೆ. ಈ ಐದೂ ಇಂದ್ರಿಯಗಳಲ್ಲಿ ಒಂದು ಸರಿಯಾಗಿ ಕಾರ್ಯ ಮಾಡದಿದ್ದಾಗ ಇದು ಹೆಚ್ಚು ಉಪಕಾರಿ. ಉದಾಹರಣೆಗೆ: ಕಿವುಡನಿಗೆ ಮಾತಾಡಿದ್ದು ಕೇಳದಿದ್ದರೂ ಸಾಮಾನ್ಯ ಜ್ಞಾನದಿಂದ ಅರಿಯಬಲ್ಲ.

ಶಿಕ್ಷಣ, ವಿದ್ಯೆ ಮತ್ತು ಬುದ್ಧಿಗಳನ್ನು ಒಂದಕ್ಕೊಂದು ಸಮಾನಾರ್ಥದಲ್ಲಿ ಬಳಸಬಹುದು. ಅವುಗಳನ್ನು ವ್ಯವಹಾರಿಕ ಜ್ಞಾನಕ್ಕೆ ಬದಲಾಗಿ ಉಪಯೋಗಿಸಲಾಗದು. ವ್ಯವಹಾರಿಕ ಜ್ಞಾನವಿಲ್ಲದೆ ಮಹಾ ಪಂಡಿತನಿರಬಹುದು, ಪಾಂಡಿತ್ಯವಿಲ್ಲದ ಸಾಮಾನ್ಯ ಮನುಷ್ಯನು ವ್ಯವಹಾರಜ್ಞಾನ ಚತುರನಿರಬಹುದು. ಹಳ್ಳಿಗಳಲ್ಲಿ ಏನೂ ಕಲಿಯದ ನಿರಕ್ಷರಕುಕ್ಷಿಗಳೂ ಕೂಡಾ ಕಲಿತವರಿಗಿಂತಲೂ ವ್ಯವಹಾರ ನಿಪುಣರಿರುವುದನ್ನು ಪ್ರತ್ಯಕ್ಷವಾಗಿ ಕಾಣುತ್ತೇವೆ. ವ್ಯವಹಾರಿಕ ಜ್ಞಾನದ ಮಹತ್ವವನ್ನು ಕುರಿತು ಹೇಳುತ್ತಾ ಇಂಗರ್ಸಾಲ್ ಹೇಳುತ್ತಾರೆ: "ವ್ಯವಹಾರಿಕ ಜ್ಞಾನವಿಲ್ಲದ ಶಿಕ್ಷಣವನ್ನು ಪಡೆಯುವುದಕ್ಕಿಂತ, ಶಿಕ್ಷಣವಿಲ್ಲದ ವ್ಯವಹಾರಿಕ ಜ್ಞಾನವಿರುವುದೇ ಲೇಸು."

ಶಿಕ್ಷಣದಿಂದ ತಾಂತ್ರಿಕ (Technical) ಜ್ಞಾನ ಪಡೆದುಕೊಳ್ಳಬಹುದು, ಆದರೆ ವ್ಯವಹಾರಿಕ ಜ್ಞಾನವೆಂಬುದು ದೈವೀದತ್ತವಾದುದು. ಕೆಲವೊಮ್ಮೆ ಮಹಾ ಮಹಾ ಜ್ಞಾನಿಗಳು, ಪಂಡಿತರೂ ಕೂಡಾ ವ್ಯವಹಾರಿಕ ಜ್ಞಾನದ ಕೊರತೆಯಿಂದ ತೊಂದರೆಗಳನ್ನನುಭವಿಸುವುದನ್ನೂ ಕಾಣುತ್ತೇವೆ. ಒಂದು ಸಣ್ಣದಾದ ಸಮಸ್ಯೆಯ ಪರಿಹಾರಕ್ಕಾಗಿ ಅಮೂಲ್ಯವಾದ ಶಕ್ತಿ ಮತ್ತು ಸಮಯಗಳನ್ನು ಕಳೆಯುವರಷ್ಟೇ

ಅಲ್ಲದೆ ಯೋಚಿಸಿ ಯೋಚಿಸಿ ತಲೆ ಕೆಡಿಸಿಕೊಳ್ಳುತ್ತಾರೆ. ಅಮೇರಿಕದ ತತ್ವಜ್ಞಾನಿಯಾದ ರಾಲ್ಫ ವಾಲ್ಡೊ ಮತ್ತು ಅವನ ಮಗ ಇಬ್ಬರೂ ಕೂಡಿ ಒಂದು ಕರುವನ್ನು ಮನೆಯ ಒಳಗೆ ಜಗ್ಗುತ್ತಿದ್ದರು. ಆದರೆ ಆ ಹಠಮಾರಿ ಕರು ಒಂದಿಷ್ಟು ಕೂಡಾ ಸ್ಥಾನ ಬಿಟ್ಟು ಅಲುಗಲಿಲ್ಲ. ಇವರ ಸಂಕಟವನ್ನು ಕಂಡು ಮನೆಯ ಕೆಲಸದವಳು ತಕ್ಷಣ ಬಂದು ಕರುವಿನ ಬಾಯಿಯಲ್ಲಿ ಬೆರಳನ್ನು ಇಟ್ಟಳು. ಆಗ ಅದು ಚೀಪ ತೊಡಗಿತು. ನಿಧಾನವಾಗಿ ಅವಳು ಮನೆಯತ್ತ ನಡೆದಳು. ಅವಳನ್ನನುಸರಿಸಿ ಆ ಕರು ಒಳಕ್ಕೆ ಬಂದಿತು. ಸಾಮಾನ್ಯ ಸೇವಕಿಯ ವ್ಯವಹಾರಿಕ ಜ್ಞಾನದಿಂದ ಸಲೀಸಾಗಿ ಸಮಸ್ಯೆ ಪರಿಹಾರವಾಯಿತು.

ಮಹಾ ವಿಜ್ಞಾನಿಯಾದ ನ್ಯೂಟನ್ ಒಮ್ಮೆ ಬೆಂಕಿಗೂಡಿನ (Fire place) ಬಳಿ ಕುಳಿತು ವಿಚಾರಮಗ್ನರಾಗಿದ್ದರು. ಬೆಂಕಿಯ ಝಳ ಹೆಚ್ಚಾಗಿ ಅವರಿಗೆ ತಡೆಯದಾಯಿತು. ಆಗ ಸಿಟ್ಟಿನಿಂದ ಕರೆಗಂಟೆಯ ಸ್ವಿಚ್‌ನ್ನು ಒತ್ತಿ ಸೇವಕನನ್ನು ಕರೆದು, ಬೆಂಕಿಯನ್ನು ಕಡಿಮೆ ಮಾಡಲು ಹೇಳಿದರು. ಆಗ ಸೇವಕ ನುಡಿದ; "ಸರ್, ತಮ್ಮ ಕುರ್ಚಿಯನ್ನು ಸ್ವಲ್ಪ ದೂರ ಜರುಗಿಸಿದ್ದರೆ ಆಗುತ್ತಿರಲಿಲ್ಲವೆ?" "ನನಗೆ ಅದು ಹೊಳೆಯಲೇ ಇಲ್ಲ" ಎಂದರು ನ್ಯೂಟನ್.

ಮಹಾನ್ ಪ್ರತಿಭಾವಂತ ವಿಜ್ಞಾನಿಯಾದ ನ್ಯೂಟನ್‌ಗೆ ಕೂಡಾ ವ್ಯವಹಾರಿಕ ಜ್ಞಾನದ ಕೊರತೆ ಇತ್ತು. "ಸಾಗರದಷ್ಟು ಪಾಂಡಿತ್ಯಕ್ಕಿಂತ ಸಾಸುವೆಯಷ್ಟು ಸಾಮಾನ್ಯ ಜ್ಞಾನ (Commonsense) ಬೆಲೆಯುಳ್ಳದ್ದಾಗಿದೆ."

ಜೀವನದಲ್ಲಿ ಗೆಲುವನ್ನು ಪಡೆದು, ಮುನ್ನಡೆಯಬೇಕಾದರೆ ಪ್ರತಿಯೊಬ್ಬರಿಗೂ ವ್ಯವಹಾರಿಕ ಜ್ಞಾನದ ಅವಶ್ಯಕತೆ ಬಹಳವಿದೆ. ಅವರವರ ನುಡಿ ಮತ್ತು ನಡಾವಳಿಗಳಿಂದ ವ್ಯವಹಾರಿಕ ಜ್ಞಾನವಿದೆಯೋ ಇಲ್ಲವೋ ಎಂಬುದನ್ನು ಗುರ್ತಿಸಬಹುದು. ಬುದ್ಧಿ, ಜ್ಞಾನಗಳೊಂದಿಗೆ ವ್ಯವಹಾರಿಕ ಜ್ಞಾನದ ಅವಶ್ಯಕತೆ ಮಹತ್ತರವಾದುದಾಗಿದೆ.

★

ಅತ್ಯಂತಿಕವಾದವುಗಳು....?

ಅತ್ಯಂತ ಒಳ್ಳೆಯ ದಿನ....? ಇವತ್ತಿನ ದಿನ.
ಅತಿ ಘೋರ ಪಾಪ....? ಭಯ.
ಅತ್ಯುನ್ನತ ಇನಾಮು....? ಕ್ಷಮೆ.
ಅತಿ ಕೀಳು ಮನೋಭಾವನೆ....? ಮತ್ಸರ.
ಅತ್ಯಾವಶ್ಯಕವಾದದ್ದು....? ವ್ಯವಹಾರಿಕ ಜ್ಞಾನ.
ಅತ್ಯುನ್ನತವಾದ ಗುರು....? ಜಿಜ್ಞಾಸುತ್ವ ಹುಟ್ಟಿಸುವವ.
ಧರ್ಮದ ಅತ್ಯುನ್ನತ ಅಂಶ....? ಸಹನೆ.
ಅತ್ಯಂತ ದೊಡ್ಡದಾದ ಕಿಚ್ಚು....? ಹೊಟ್ಟೆಕಿಚ್ಚು.

ಲಿಂಗಾಯತರು ಹಿಂದುಗಳೇ?

ಜ್ಞಾನಚಂದ್ರ ಉದಯಗಿರಿ, ವಿಮಲಖೇಡ

[ಹಿಂದೂ ಧರ್ಮ ಎನ್ನುವುದು ವೈದಿಕ ಧರ್ಮವಲ್ಲದೇ ಬೇರಲ್ಲ. ಹೀಗಿದ್ದಾಗ ಲಿಂಗಾಯತರು (ವೀರಶೈವ) ಹಿಂದೂ ಕಕ್ಷೆಯಲ್ಲಿ ಉಳಿಯುವುದು ಅವಿವೇಕ ರಮಣೀಯ ಎಂದು ಸ್ಪಷ್ಟವಾದ ಅಭಿಪ್ರಾಯ ಲೇಖಕರು ನುಡಿಯುತ್ತಾರೆ.]

ಸರ್ ಜಾನ್ ಮಾರ್ಷಲ್, ಫಾದರ್ ಹೆರಾಸ್ ಮುಂತಾದವರ ಸಂಶೋಧನೆಯಿಂದ ಸಿಂಧೂ ನದಿಯ ಸಂಸ್ಕೃತಿಯು ಶುದ್ಧ ದ್ರವಿಡ ಸಂಸ್ಕೃತಿಯಾಗಿತ್ತೆಂದು, ಅಲ್ಲಿ ದೊರೆತ ಪಶುಪತಿ ಮಹಾದೇವ, ವೃಷಭ, ತಪೋಮಗ್ನಯೋಗಿ, ನಾಗಸಹಿತ ಮುಂತಾದವುಗಳಿಂದ ಆ ಜನರ ಧರ್ಮವು ಅವೈದಿಕ ಮತ್ತು ಶಿವಪ್ರಧಾನವಾಗಿತ್ತೆಂದು ತಿಳಿದುಬರುತ್ತದೆ. ಪಶುಪತಿಯ ಆರಾಧನೆಯೇ ಮುಖ್ಯವಾಗಿದ್ದ ದ್ರಾವಿಡರಲ್ಲಿ ಶೈವ ಮತವೇ ಪ್ರಧಾನವಾಗಿದ್ದದ್ದು ಸ್ಪಷ್ಟವಾಗಿ ಕಂಡುಬರುತ್ತದೆ. ಇವರು ಧರ್ಮ, ಕಲೆ ಹಾಗು ಇನ್ನಿತರ ಕ್ಷೇತ್ರಗಳಲ್ಲಿ ಮುಂದುವರೆದವರಿದ್ದರು ಎಂಬುದಕ್ಕೆ ಹರಪ್ಪ, ಮೊಹೆಂಜೊದಾರೊ ನಗರಗಳು ಇಂದಿಗೂ ಸಾಕ್ಷಿಯಾಗಿ ನಿಂತಿವೆ. ಹೆರಾಸ್ ಎಂಬುವವರು ಅಲ್ಲಿ ದೊರೆತ ಲಿಪಿ ಆಧಾರದ ಮೇಲೆ ಅದು ದ್ರವಿಡ ಭಾಷೆಯ ಲಿಪಿಯಾಗಿತ್ತೆಂದು ತೋರಿಸಿಕೊಟ್ಟಿದ್ದಾರೆ.

ಹರಪ್ಪ ಸಂಸ್ಕೃತಿಗಿಂತ ಪ್ರಾಚೀನ ಸಂಸ್ಕೃತಿಗಳಾದ ನಾಲ, ನಂದಾರ, ಆಮ್ರಿ, ಕುಲ್ಲಿ, ರಾಣಾಘುಂಡೈ ಮುಂತಾದ ಸ್ಥಳಗಳಲ್ಲಿ ಶುದ್ಧ ದ್ರವಿಡ ಸಂಸ್ಕೃತಿ ಇತ್ತೆಂಬುದಕ್ಕೆ ಸಾಕ್ಷಿಗಳು ದೊರೆತಿವೆ. ಇವರಲ್ಲಿ ಕೂಡ ಶೈವಧರ್ಮ ಪ್ರಧಾನವಾಗಿದ್ದು, ಈಗಲೂ ಆ ನಿವೇಶನಗಳಲ್ಲಿ ವೃಷಭಪೂಜೆಯ ಕುರುಹುಗಳು ಸ್ಪಷ್ಟವಾಗಿ ಕಂಡುಬರುತ್ತವೆ.

ಈ ಮೇಲೆ ಕಾಣಿಸಿದ ಸಂಸ್ಕೃತಿ ಪ್ರಕಾರ ಹಿಂದೆ ದ್ರಾವಿಡರ ಉನ್ನತ ಸಂಸ್ಕೃತಿ ಇತ್ತೆಂದು ಇತಿಹಾಸ ಸಂಶೋಧಕರು ನಿರ್ಣಯಿಸಿರುತ್ತಾರೆ. ಸರ್ ಜಾನ್ ಮಾರ್ಷಲ್‌ರವರು ಅಲ್ಲಿ ದೊರೆತ ಶಿವಲಿಂಗಗಳ ಆಧಾರದ ಮೇಲೆ ದ್ರಾವಿಡರ ಶೈವ ಸಂಸ್ಕೃತಿಯು ಎಲ್ಲ ಮತಗಳಿಗಿಂತಲೂ, ಅದು ಲೋಹ ಯುಗಕ್ಕೆ ಹಿಂದಿನದೆಂತಲೂ ಅಭಿಪ್ರಾಯಪಟ್ಟಿದ್ದಾರೆ. ಅಲ್ಲದೆ ಈ ಸಂಸ್ಕೃತಿಯು ಆರ್ಯರು ಭರತಖಂಡಕ್ಕೆ ಬರುವ ಮೊದಲೇ ಬೆಳೆದಿತ್ತೆಂದು ಹೇಳಿದ್ದಾರೆ. ಭರತಖಂಡದಲ್ಲಿ ಹುಟ್ಟಿದ ಶೈವಮತವು

ಒಂದು ಕಡೆ ಮಧ್ಯ ಏಷ್ಯಾದವರೆಗೂ, ಇನ್ನೊಂದು ಕಡೆ ಜಾವಾಬಾಲಿ, ಕಾಂಬೋಡಿಯಾ, ಥಾಯಿದೇಶಗಳವರೆಗೂ ವ್ಯಾಪಿಸಿತ್ತು. ಈಗಲೂ ಆ ಪ್ರದೇಶಗಳಲ್ಲಿ ಪಾಳುಬಿದ್ದ ಶಿವದೇವಾಲಯಗಳು, ಶೈವ ವಿಗ್ರಹಗಳು ದೊರೆಯುತ್ತಿವೆ. ಇದಕ್ಕೆ ಆಧಾರವಾಗಿ 'ಮೊಹೆಂಜೊದಾರೊ ಆಂಡ್ ದಿ ಇಂಡಸ್ ವ್ಯಾಲಿ ಸಿವಿಲಿಜೇಶನ್' ಎಂದ ಐತಿಹಾಸಿಕ ಗ್ರಂಥ ಅವಲೋಕಿಸಬಹುದು. ಪಂಡಿತ ಕಾಶಿನಾಥಶಾಸ್ತ್ರಿಯವರ ಸಂಶೋಧನೆಯಿಂದ ಲಿಂಗಸಂಸ್ಕೃತಿಯು ಆರ್ಯಸಂಸ್ಕೃತಿಗಿಂತಲೂ ಬಹು ಪ್ರಾಚೀನವಾದದ್ದೂ ಪುರಾತನವಾದದ್ದೂ ಕಂಡುಬರುತ್ತದೆ. ಇವರುಗಳು ಜಗತ್ತಿನ ಬಹುತೇಕ ರಾಷ್ಟ್ರಗಳಲ್ಲಿ ಲಿಂಗಗಳು ಇವೆ ಎಂದು, ಜನಗಳು ಬೇರೆ ಬೇರೆ ರಾಷ್ಟ್ರಗಳಲ್ಲಿ ನಾನಾ ರೀತಿಗಳಲ್ಲಿ ಲಿಂಗೋಪಾಸನೆ ಈಗಲೂ ಕೈಗೊಂಡಿದ್ದಾರೆಂದು ಎತ್ತಿ ತೋರಿಸಿದ್ದಾರೆ. ಇಷ್ಟೊಂದು ಪ್ರಾಚೀನತಮವಾದ ದ್ರವಿಡ ಸಂಸ್ಕೃತಿಯ ಶೈವಧರ್ಮವು ಸಂಪೂರ್ಣವಾಗಿ ಉದಾತ್ತ ತತ್ವಗಳಿಂದ ಕೂಡಿದೆ. ಇಲ್ಲಿ ನ್ಯೂನತೆಗಳು ಇಲ್ಲವೇ ಇಲ್ಲ" ಎಂದು ಹೇಳುವುದು ದಾಷ್ಟ್ರ್ಯದ ಮಾತಾದೀತು. ಇದರಲ್ಲಿಯ ಲೋಪದೋಷಗಳನ್ನು ಕಂಡು ಮುಂದೆ ಅನೇಕ ಪ್ರಭೇದಗಳು, ಕವಲುಗಳು ಉಂಟಾದವು. ಇವುಗಳಲ್ಲಿ ಪ್ರಧಾನ ಶಾಖೆಯಾದ ವೀರಶೈವವು ಒಂದಾಗಿದೆ.

ವೀರಶೈವ ಧರ್ಮವು ವೇದಕ್ಕೆ ನೆರೆಹಚ್ಚುವೆ ಎಂದು ಹೇಳಿದರೂ ವೇದ ಪ್ರಾಮಾಣ್ಯವನ್ನು ಅಂಗೀಕರಿಸುವ ಮಾತೇ ಬರುವುದಿಲ್ಲ.

ಆರ್ಯರು ತಮ್ಮ ಹೊಟ್ಟೆಪಾಡಿಗಾಗಿ ಉತ್ತಮ ನಿವೇಶನಗಳನ್ನು ಹುಡುಕುತ್ತ ಹೊರಟಾಗ ಸಕಲ ಕ್ಷೇತ್ರಗಳಲ್ಲಿಯೂ ಪ್ರಗತಿಯನ್ನು ಸಾಧಿಸಿದ, ಅತಿ ಉನ್ನತ ಮಟ್ಟದ ದ್ರಾವಿಡರ ಶೈವ ಸಂಸ್ಕೃತಿಯ ಜಂಬುರಾಷ್ಟ್ರದ ಮೇಲೆ ತಲೆ ಎತ್ತಿ ನಿಂತ ಸುವರ್ಣ ಕಳಶವು ಅವರ ಕಣ್ಣಿಗೆ ಕಂಗೊಳಿಸಿತು. ಆಗ ಅರ್ ಧಾತುವಿನಿಂದ ಉಂಟಾದ ಆರ್ಯರು ಅಂದರೆ ಒಣಗಿದ ಪ್ರದೇಶದವರು, ಏನೂ ಇಲ್ಲದಕ್ಕೆ ಬೊಬ್ಬೆ ಇಡುವವರು, ಅನಾಗರಿಕರು, ಜಂಬು ಪ್ರದೇಶದ ಮೇಲೆ ದಾಳಿಯನ್ನು ನಡೆಸಿ ಹಲವು ದಶಕಗಳವರೆಗೆ ದ್ರಾವಿಡರ ಜೊತೆಯಲ್ಲಿ ಹೋರಾಡಿ ಮೇಲುಗೈ ಪಡೆದು ಉತ್ತರಖಂಡವನ್ನೆಲ್ಲ ವ್ಯಾಪಿಸಿ ದ್ರವಿಡರನ್ನು ದಕ್ಷಿಣಕ್ಕೆ ಓಡಿಸಿದರು. ಅಮಾನುಷವಾಗಿ ಇವರ ಸಂಸ್ಕೃತಿಯನ್ನು ಹಾಳು (ಪಾಳು) ಮಾಡಿದರು. ಪಶು, ದಾನವರು, ದನುಜರು, ದೈತ್ಯರು, ರಾಕ್ಷಸರು, ಅಸುರರು ಮುಂತಾದ ಪರ್ಯಾಯ ನಾಮಗಳನ್ನು ದ್ರವಿಡರಿಗೆ ಕೊಟ್ಟು ಜರಿದರು. ದಕ್ಷಿಣ ದಿಕ್ಕಿಗೆ ರಾಕ್ಷಿ ಎಂದು ನಾಮಕರಣ ಮಾಡಿ, ದ್ರವಿಡರು ರಾಕ್ಷಸರು, ಅನಾಗರಿಕರು ಎಂದು ಅವರನ್ನು ಹೀಯಾಳಿಸಿದರು. ದ್ರವಿಡ ಭಾಷೆಗೆ ಪಿಶಾಚವೆಂದು ಹೇಳಿದರು. ಇವರ ವಿರೋಧವಾಗಿ ದೇಶದ್ರೋಹಿಗಳ ಸಹಾಯದಿಂದ ಅಪಾರ ಸಾಹಿತ್ಯವನ್ನು ಸೃಜಿಸಿದರು. ದಕ್ಷಿಣ ದಿಕ್ಕಿಗೆ ತಲೆ ಮಾಡಿ ಮಲಗಬಾರದು. ಏಕೆಂದರೆ ಆ ಕಡೆಗೆ ರಾಕ್ಷಸವಿರುತ್ತವೆಂಬ ವದಂತಿಯು ಈಗಲೂ ಭಾರತದ ಹಳ್ಳಿಗಳಲ್ಲಿ ಅಜ್ಜಿಯರು ತಮ್ಮ ಮೊಮ್ಮಕ್ಕಳಿಗೆ

ಹೇಳುತ್ತಿರುವುದನ್ನು ಕಾಣಬಹುದು. ಅಲ್ಲದೆ 'ಲಿಂಗವು' ಜನನೇಂದ್ರಿಯದ ಚಿನ್ಹೆಯಾಗಿದೆ ಎಂಬ ಅಪಾರ್ಥವನ್ನು ಹಚ್ಚಿ ದ್ರವಿಡರ ಶೈವ ಧರ್ಮವು ಅನಾಗರಿಕವಾದುದೆಂದು ಪ್ರಚಾರ ಕೈಗೊಂಡರು. ಶೈವರು ಯಾರೂ ಜನನೇಂದ್ರಿಯದ ಅಶ್ಲೀಲ ಭಾವದಿಂದ ಲಿಂಗವನ್ನು ಪೂಜಿಸುವುದಿಲ್ಲ. ಲಿಂಗವನ್ನು ಆರಾಧಿಸುವವರ ಭಾವನೆಗಳಲ್ಲಾಗಲಿ, ಆರಾಧಿಸುವ ವಿಧಾನಗಳಲ್ಲಾಗಲಿ ಈ ಅಶ್ಲೀಲ ಕಲ್ಪನೆಗೆ ಅವಕಾಶವಿಲ್ಲ. ದ್ರಾವಿಡರನ್ನು ಹೀಯಾಳಿಸುವುದಕ್ಕಾಗಿ ಆರ್ಯರು ಹೀಗೆ ಅಂದಿದ್ದಾರೆ. ಶೈವ ಸಾಮ್ರಾಟನಾದ ಹಿರಣ್ಯ ಕಶ್ಯಪನನ್ನು ಕಪಟನಾಟಕದ ಸೋಗಿನಲ್ಲಿ ನಾರಸಿಂಹನಾಗಿ ಕೊಂದು ಅನಂತರ ಶೈವ ಶಾರ್ದೂಲನಾದ ಶರಭನಿಂದ ಹತನಾದನು. ಇದು ಶೈವರ ಸರ್ವನಾಶದ ಉದಾಹರಣೆಯಲ್ಲವೆ? ಗಾಂಧಿಯು 'ರಘುಪತಿ ರಾಘವ'ನೆಂದು ಹಾಡಿ ಹೊಲೆಯರಿಗೆ 'ಹರಿಜನ' ಎಂದು ನಾಮಕರಣ ಮಾಡಿದ್ದು ವೈಷ್ಣವ ಪ್ರಚಾರವಲ್ಲವೆ? ಇಲ್ಲಿ 'ಹರಿ-ಹರ'ರಲ್ಲಿ ಜಗಳ ಇದ್ದದ್ದು ಮಹಾತ್ಮನಾದ ಗಾಂಧಿಗೆ ಬೇರೆ ಯಾರಾದರು ಹೇಳಬೇಕಾಗಿತ್ತೆ? ಸೇವಾನಿವೃತ ರಾಷ್ಟ್ರಪತಿಯಾದ ರಾಧಾಕೃಷ್ಣನ್ನರು ತಮ್ಮ ಇಂಗ್ಲಿಷ್ ನಿಘಂಟಿನಲ್ಲಿ ಲಿಂಗ ಎಂದರೆ 'ಶಿಶ್ನ' ಎಂಬ ಅರ್ಥ ಬರೆದದ್ದು ವೈದಿಕ ಸಮರ್ಥನೆಯಲ್ಲವೆ? ಸಾಹಿತ್ಯಕಾರ ಶ್ರೀ ಶಿವರಾಮ ಕಾರಂತರು 'ಸಿರಿಗನ್ನಡ ಅರ್ಥಕೋಶ'ದಲ್ಲಿ ವೈದಿಕ ಸಂಸ್ಕೃತಿಯ ಪ್ರಭಾವ ರೀತ್ಯ ಪ್ರತಿ ಪದಕ್ಕೆ ಅರ್ಥ ಹಚ್ಚಿದ್ದು, ವೈದಿಕರ ಮೇಲುಗೈ ತೋರಿಸಿದಂತಾಗುವುದಿಲ್ಲವೆ? ಸಮಸ್ತಶಾಸ್ತ್ರಗಳನ್ನೂ ಒಂದೆಡೆಗಿಟ್ಟು ತನ್ನದೇ ಆದ ಸಿದ್ಧಾಂತವನ್ನೂ ಬೇರಾವ ಶಾಸ್ತ್ರದ ಸಹಾಯವನ್ನೂ ಪ್ರತೀಕ್ಷಿಸದೆ (ಪ್ರತಿ ಈಕ್ಷಿಸದೆ) ಸಮರ್ಥಿಸಬಲ್ಲ ಶಾಸ್ತ್ರಭಂಡಾರವನ್ನು "ಆಗಮ"ಗಳೆಂದು ಪರಮಾತ್ಮ ಅಪ್ಪಣೆ ಕೊಡಿಸಿದ್ದಾನೆ. ಪರಮೇಶ್ವರನ ಮುಖದಿಂದ ತನ್ನ ಸಹಚಾರಿಣಿಯಾದ ಗಿರಿಜೆಗಾಗಿ ಹೇಳಲ್ಪಟ್ಟ ಪರಮ ಪಾವನವಾದ ಶಾಸ್ತ್ರಕ್ಕೆ "ಆಗಮ"ವೆಂದು ಶಾರದಾತಿಲಕದಲ್ಲಿ ಹೇಳಿದೆ. ಹೀಗಿದ್ದರೂ 'ವೇದೋಽಖಿಲೋ ಧರ್ಮ ಮೂಲಂ' (ಮನು 11.೬) ಎಲ್ಲ ಧರ್ಮಗಳ ಮೂಲ ವೇದವೇ. ವೇದ ಅಪೌರುಷೇಯವಾಣಿ. ವೇದಗಳನ್ನು ಅಧ್ಯಯನ ಮಾಡುವುದು ಮತ್ತು ಅಧ್ಯಯನ ಮಾಡಿದ ವೇದಗಳನ್ನು ಲೋಕದಲ್ಲಿ ಪ್ರಚಾರ ಮಾಡುವ ವಿಷಯದಲ್ಲಿ ಮಾನವನೆಂದೂ ಪ್ರಮಾದಶೀಲನಾಗಿರಬಾರದು. ಇದೇ ಜೀವನದ ಪರಮ ತಪಸ್ಸು. ಇದೇ ಲೋಕ ಕಲ್ಯಾಣದ ಮಾರ್ಗ, ಇದೇ ಪರಮ ಕರ್ತವ್ಯ, ಇದೇ ಬ್ರಹ್ಮವಿದ್ಯೆ, ಇದೇ ಪರಮ ಸತ್ಯ. ಆದ್ದರಿಂದ ವೇದಾಧ್ಯಯನದ ವಿಷಯದಲ್ಲಿ ಯಾರೂ ಪ್ರಮಾದಶೀಲರಾಗಿರಬಾರದು—ಎಂಬ ಪ್ರಚಾರ ನುಡಿಗಳು ಕೇಳಿಸಿ ಕೇಳಿಸಿ ಅವರು ಎಲ್ಲಿಗೆ ಬಂದಿದ್ದಾರೆಂಬುದು ವಿಚಾರವಂತರು ವಿಚಾರಿಸಬೇಕು.

ಲಿಂಗವು ಜನನೇಂದ್ರಿಯದ ಚಿನ್ಹೆಯಲ್ಲ ಎಂದು ಡಾ. ಆನಂದಕುಮಾರ, ಮೂರ್, ಇಲಿಯಟ್ ಮೊದಲಾದವರು ತಳ್ಳಿಹಾಕಿದ್ದಾರೆ. ಲಿಂಗ ಬರಿ ಕುರುಹಲ್ಲ. ಅದು 'ಈರೇಳು ಭುವನಗಳನೊಳಕೊಂಡ ಮಹಾಲಿಂಗದ' ಕುರುಹು, ಲಿಂಗ

ವೆಂಬುದು ಪರಶಕ್ತಿಯುತ ಪರಶಿವನ ನಿಜದೇಹ. ಲಿಂಗವೆಂಬುದು ಪರಶಿವನ ಘನತೇಜ, ಲಿಂಗವೆಂಬುದು ಪರಶಿವನ ನಿರತಿಶಯಾನಂದ ಸುಖ, ಲಿಂಗವೆಂಬುವದು ಪರಶಿವನ ಪರಮ:ಜ್ಞಾನ, ಲಿಂಗವೆಂಬುವದು ಷಡಧ್ವಮಯ ಜಗಜ್ಜನ್ಮ ಭೂಮಿ ಉರಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರ ಲಿಂಗದೊಳಿದ ತಿಳಿಯಬಲ್ಲವನೆ ಬಲ್ಲವನು" ಎಂದು ಶರಣರಾದ ವಚನಕಾರರು ಲಿಂಗವನ್ನು ನಿರಂಜನದ ಕುರುಹು, ಅರುಹಿನ ಕಳೆ, ಮಹಾಜ್ಞಾನದ ಬೆಳಕು, ಹೃದಯದಲ್ಲಿ ಶೀತಸ್ಥವಾಗಿರುವ ಚಿದ್ಬೆಳಗೆಂದೂ ಅಮೂರ್ತ ಸ್ವರೂಪವೆಂದೂ ಲಿಂಗವು ಅಜ್ಞಾನವನ್ನು ಹೋಗಲಾಡಿಸಿ ಆತ್ಮವನ್ನು ಬೆಳಗುವ ಚಿಜ್ಯೋತಿ, ನಿಷ್ಕಲವಾದ ಶಿವನ ರೂಪು, ಪರಬ್ರಹ್ಮಸ್ವರೂಪದ ಚಿನ್ಹೆ ಎಂದು ತಮ್ಮ ಅನುಭಾವ ಉಣಿಸಿದ್ದಾರೆ.

ಈ ಪ್ರಕಾರ ಶೈವವು ತನ್ನದೆಯಾದ ಶಕ್ತಿ ವಿಶಿಷ್ಟವಾದ ಸಿದ್ಧಾಂತದ ಹೊನಲನ್ನು ಹರಿಸುತ್ತ, ಮಹಾ ತೊರೆಯಾಗಿ ಇಲ್ಲಿಯತನಕ ರಭಸದಿಂದ ಭೋರ್ಗರೆಯುತ್ತ ಹರಿಯುತ್ತ ಬಂದಿದೆ. ಈಗ ಅದರಲ್ಲಿ ಹರಿತ ಕಡಿಮೆಯಾಗಿದೆ. ಇದರಿಂದ ಸಿದ್ಧವಾಗುವುದೇನೆಂದರೆ ಶೈವರು ಆರ್ಯರಿಗಿಂತ ಹಿಂದಿನವರೆಂಬುದು ಖಚಿತಪಡುತ್ತದೆ.

ಆರ್ಯರು ಭರತ ಭೂಮಿಯಲ್ಲಿ ಪಸರಿಸಿದಾಗ ಅವರು ವ್ಯಾಪಕವಾಗಿ ತಮ್ಮ ಸಂಸ್ಕೃತಿಯನ್ನು ನಾನಾ ರೀತಿಯಿಂದ ದ್ರಾವಿಡರ ಮೇಲೆ, ಶೈವರ ಮೇಲೆ ಹೇರಲು ಅವಿರಳ ಪ್ರಯತ್ನ ಮಾಡಿದರು. ವೈದಿಕ ಸಂಸ್ಕೃತ ಸಾಹಿತ್ಯವು ಬರಬರುತ್ತ ವಿಪರಿಣಾಮಹೊಂದಿ ಒಂದು ತಾರ್ಕಿಕ, ವ್ಯವಸ್ಥಿತ ಸ್ವರೂಪವನ್ನು ಪಡೆಯುವ ಹೊತ್ತಿಗೆ ವೇದೋಕ್ತವಾದ ಧರ್ಮಸ್ವರೂಪವು ಜನತೆಗೆ ದುರ್ಭೋಧವಾಗತೊಡಗಿತು. ಆನಂತರ ಅವರು ದ್ರಾವಿಡರೊಂದಿಗೆ ಬಾಂಧ್ಯವ್ಯ, ರಕ್ತಸಂಬಂಧ, ಗೆಳೆತನ ಪ್ರಾರಂಭಿಸಲು, ಬೆಳೆಸಲು, ಅವರನ್ನು ತಮ್ಮವರಂತೆ ಮಾಡಿಕೊಳ್ಳಲು, ಐಕ್ಯಮತ್ಯವನ್ನುಂಟುಮಾಡಲು, ಶೈವರು ಮತ್ತು ವೈದಿಕರಲ್ಲಿ ಇನ್ನಷ್ಟು ನಿಕಟ ಸಂಬಂಧ ಬೆಳೆಸಲು ಶಿವನನ್ನು ಬ್ರಹ್ಮ, ವಿಷ್ಣುವಿನ ಶ್ರೇಣಿಯಲ್ಲಿ ಸೇರಿಸಿದರು. ವೇದವು ಪರಮಾತ್ಮ (ನಿಶ್ವಾಸ) ರೂಪವಾಗಿದೆ, ಆಗಮಗಳು ವಾಣಿ ರೂಪಗಳಾಗಿವೆ. ವೇದಗಳಂತೆ ಆಗಮಗಳೂ ಅಪೌರುಷೇಯಗಳೆಂದು ಪರಿಗಣಿಸತೊಡಗಿದರು. ಭಾರತ ಸಂಸ್ಕೃತಿಗೆ ಆಧಾರವಾದ ವಾಙ್ಮಯವು 'ನಿಗಮಾಗಮ'ಗಳೆಂದು ಹೇಳತೊಡಗಿದರು. ವೇದ ವಾಙ್ಮಯದಲ್ಲಿ ಪ್ರಕಟವಾಗದಿರುವ ಅನಂತ ವಿಷಯಗಳು ಆಗಮಗಳಲ್ಲಿವೆ ಎಂದು ತೋರಿಸತೊಡಗಿದರು. 'ಆಸಮಂತಾತ್ ಗಮಯಂತೀತ್ಯಾಗಮಃ' "ಸರ್ವತ್ರ ವ್ಯಾಪ್ತನಾದ ಪರಮಾತ್ಮನ ವಿಚಾರವನ್ನು ಅನುಷ್ಠಾನ ಯೋಗ್ಯವಾದ ವಿಚಾರ ಧಾರೆಯೆಂದು ತಿಳಿಹೇಳುವುದು ಆಗಮವು" ಎಂದರು.

"ಗಂಡಭೇರುಂಡ ಪಕ್ಷಿಯಂತೆ ಒಂದೇ ದೇಹದಲ್ಲಿ ತೋರಿಬರುವ ಎರಡು ಮುಖಗಳಂತೆ ನಿಗಮಾಗಮಗಳು ಪರಮಾತ್ಮನ ಮುಖದಿಂದ ಲೋಕ ಕಲ್ಯಾಣಕ್ಕಾಗಿ ಹೊರಬಂದ ಎರಡು ವಾಙ್ಮಯಗಳಾಗಿವೆ. ಭಾರತೀಯ ಸನಾತನ ಧರ್ಮಕ್ಕೆ ಈ ನಿಗಮಾಗಮಗಳೇ ಮೂಲಾಧಾರವಾಗಿರುವವು. ಇವೆರಡೂ ಅಧಿಕಾರ ಭೇದದಿಂದ ಅನುಷ್ಠಾನಯೋಗ್ಯವಾಗಿದ್ದು ಮಾನವರ ಪುರುಷಾರ್ಥಸಾಧನೆಗೆ ಹೇತುಭೂತವಾಗಿವೆ. ಆದರೂ ವೇದದಿಂದ ತಿಳಿಯಲಾರದ ಅನಂತ ವಿಷಯಗಳನ್ನು ಆಗಮಗಳಿಂದ ಸುಲಭವಾಗಿ ತಿಳಿಯಬಹುದಾಗಿದೆ, ಎಂದರು.

"ಒಂದೇ ಮಹಾನದಿಯ ನೀರು ಅಣೆಕಟ್ಟಿನಿಂದ ಹೊರಬರುವಾಗ ಎರಡು ಕಾಲುವೆಗಳಲ್ಲಿ ಬೇರೆ ಬೇರೆ ಮುಖವಾಗಿ ಹರಿದು ಬಂದು ಆಯಾಯ ಭಾಗದ ಜನತೆಯ ತೃಷೆಯನ್ನಡಗಿಸಿ ಆನಂದವನ್ನುಂಟುಮಾಡುತ್ತದೆ" ಎಂದರು.

'ವೇದಸಾರಃ ಶಿವಾಗಮಃ' ಎಂಬ ಆಧಾರದಿಂದ, 'ಹಾಲಿನ ಸ್ಥಿರಾಂಶವು ತುಪ್ಪ' ಎಂಬುವಂತೆ 'ವೇದದ ಸಾರವು ಶಿವಾಗಮವು' ಎಂಬ ಉಕ್ತಿಯು ವೇದ ಆಗಮಗಳ ಸಾಮರಸ್ಯ ಕಲ್ಪನೆಗೆ ಸಮರ್ಥಕವಾಗಿದೆ ಎಂದರು.

ಏನೋ ಮಾಡಿ ಆರ್ಯರು ತಮ್ಮ ಸಂಸ್ಕೃತಿಯನ್ನು ಹಬ್ಬಿಸುವುದರಲ್ಲಿ ಮೇಲುಗೈ ತೋರಿಸಿದರು. ತಮ್ಮದೇ ದೃಷ್ಟಿಕೋನಗಳಿಂದ ಇತರರನ್ನು ಹಳಿದರು. ಶೈವಸಂಸ್ಕೃತಿಯ ಉತ್ತಮ ಗುಣಾಂಶಗಳನ್ನು ಹೀರಿಕೊಂಡು ಅಪಾರ ಸಾಹಿತ್ಯವನ್ನು ನಿರ್ಮಿಸಿ 'ಇವು ನಮ್ಮದೇಯಾದವುಗಳು' ಎಂದರು. ಸಾಹಿತ್ಯದ ಪ್ರಭಾವದಿಂದಲೂ, ಬಲಾತ್ಕಾರದಿಂದಲೂ ತಮ್ಮ ತತ್ವಗಳನ್ನು ದರ್ಶನಗಳನ್ನೂ ಹಬ್ಬಿಸಿದರು. ಇದರಿಂದ ಯಜ್ಞಯಾಗಗಳು ಮನೆ ಮನೆಗಳಲ್ಲಿ ನಡೆದು ಹಿಂಸೆ ಪರಾಕಾಷ್ಠೆಯನ್ನು ಮುಟ್ಟಿತು.

ವರ್ಣಾಶ್ರಮ ಪದ್ಧತಿ ಜಾರಿಗೆ ತರುವುದರಿಂದ ಮಾನವ ಮಾನವರಲ್ಲಿ ಮೇಲು ಕೀಳು ಎಂಬ ಭಾವನೆ ಬೆಳೆದು ಜನಗಳಲ್ಲಿ ಆರ್ಯರ ಬಗ್ಗೆ, ಅವರ ಯಜ್ಞಯಾಗಗಳ ಬಗ್ಗೆ, ಅವರ ದರ್ಶನಗಳ ಬಗ್ಗೆ, ಅವರ ವರ್ಣಾಶ್ರಮಗಳ ಬಗ್ಗೆ ಜಿಗುಪ್ಸೆ ಉಂಟಾಗಿ ಬರುಬರುತ್ತ ಒಲಿತು, ವಿರೋಧಾಭಾಸಗಳು ದಳ್ಳುರಿಯಂತೆ ಎದ್ದವು. ಇದಕ್ಕೆ ಉದಾ: ವೀರಭದ್ರನು ಯಜ್ಞಗಳ ವಿರೋಧವಾಗಿ ಕ್ರಾಂತಿಯನ್ನು ಹಬ್ಬಿಸಿ, ದಕ್ಷನ ಯಜ್ಞವನ್ನು ತುಳಿದು ನಾಶಮಾಡಿದ್ದು ಇತಿಹಾಸದಲ್ಲಿ ಅಜರಾಮರವಾಗಿದೆ. ಇಲ್ಲಿಯವರೆಗೂ ದಕ್ಷಿಣ ಭಾರತ ಶೈವ, ವೀರಶೈವ ಪ್ರಧಾನ ಜಾತ್ರೆಗಳಲ್ಲಿ ಅಗ್ನಿ ತುಳಿಯುವುದು ವೀರಭದ್ರನ ಕ್ರಾಂತಿಯ ಕುರುಹಾಗಿ ಮುಂದುವರಿದದ್ದು ಎಲ್ಲರಿಗೆ ಗೊತ್ತು.

ಮಹಾವೀರ – ಬುದ್ಧರು ವೈದಿಕರ ವಿರೋಧವಾಗಿ ಕ್ರಾಂತಿಯನ್ನು ಹಬ್ಬಿಸಿ ಪ್ರತಿಭಟಿಸಿದ್ದು ಲೋಕವಿದಿತವಾಗಿದೆ. ಅನಂತರ ಬುದ್ಧನಿಗೆ ದಶ ಅವತಾರಗಳಲ್ಲಿ ಸ್ಥಾನ ಕೊಟ್ಟಿದ್ದು ಆರ್ಯರ ಕುಟಿಲ ಚಾಣಾಕ್ಷತನ ಎತ್ತಿ ತೋರಿಸುತ್ತದೆ.

ಕಲ್ಯಾಣದ ಶಿವಶರಣರು, ಯಜ್ಞಯಾಗಗಳ ವಿರೋಧವಾಗಿ, ವರ್ಣಾಶ್ರಮದ ವಿರೋಧವಾಗಿ, ವೇದಕ್ಕೆ ವರೆಹಚ್ಚಿ, ಆಗಮದ ಮೂಗ ಕೊಯ್ದು, ತರ್ಕದ ಬೆನ್ನಬಾರವನ್ನೆತ್ತಿ, 'ಹಾರುವ ಮೊದಲು ಮಾಡಿ ಅಂತ್ಯಜನ ಕಡೆಯ ಮಾಡಿ ಎಲ್ಲರೂ ಒಂದೇ' ಎಂಬ ಅಮರ ಜಯಘೋಷದೊಂದಿಗೆ ಮಹಾಕ್ರಾಂತಿಯನ್ನುಂಟುಮಾಡಿದರು. ತಮ್ಮ ದರ್ಶನ – ಸಿದ್ಧಾಂತಗಳ ಸಾಹಿತ್ಯವನ್ನು ಉಳಿಸಲು ಬೆನ್ನಿಗೆ ಕಟ್ಟಿಕೊಂಡು, ಎರಿಬಂದ ವೈದಿಕರ ವಿರೋಧವಾಗಿ ಕೈಯಲ್ಲಿ ಖಡ್ಗ ಹಿಡಿದು ಸತ್ಯಕ್ಕಾಗಿ ಹೋರಾಡಿ ಲಿಂಗೈಕ್ಯರಾದ ಶರಣರ ಕ್ರಾಂತಿ ಯಾರಿಗೆ ತಾನೆ ಗೊತ್ತಿಲ್ಲ? ಇನ್ನು ಎಷ್ಟೋ ಜನರು ಎಷ್ಟೋ ಬಗೆಯಿಂದ ವಿರೋಧಿಸಿ ಅವರ ಹುಳುಕನ್ನು ಹೊರಗೆಡಹಿದ್ದು ಯಾರುತಾನೆ ಬಲ್ಲರು! ಯಾರು ಎಷ್ಟೇ ವಿರೋಧಿಸಿದರೂ ನ್ಯೂನತೆಗಳನ್ನು ಎತ್ತಿ ತೋರಿಸಿದರೂ, ಅವುಗಳನ್ನು ಸರಿಪಡಿಸಿಕೊಳ್ಳುತ್ತ ವೇದದಲ್ಲಿ ಜೋಡಿಸುತ್ತ, ಅದೆಲ್ಲವೂ ಮೊದಲೇ ನಮ್ಮ ವೇದದಲ್ಲಿ ಇತ್ತೆಂದು ಹೇಳುತ್ತ ಊಸರುವಳ್ಳಿಯಂತೆ ವಿರೋಧವಾದಾಗ ಬಣ್ಣ ಬದಲಾಯಿಸುತ್ತ, ಆಮೇಲೆ ಮೊದಲಿನ ಸ್ಥಿತಿಯಲ್ಲಿರುತ್ತ ಮುಂದುವರಿಯುತ್ತ ಬಂದದ್ದು ಆರ್ಯರ ಕುಟಿಲ ಪೂರ್ಣ ವೈಶಿಷ್ಟ್ಯವಾಗಿದೆ. ಇವರು ತನ್ನದೇ ಆದ ಚಕ್ರವ್ಯೂಹ ರಚಿಸಿ ಜನಗಳನ್ನು ಅದರೊಳಗೆ ನುಗ್ಗಿಸಿ ಹೊರಗೆ ಬರಲಾರದ ಹಾಗೆ ಜೇಡನಂತೆ ಬಲೆ ಬೀಸಿ ನಿಂತಿರುವುದನ್ನು ನಾವಿಂದು ನೋಡುತ್ತೇವೆ.

ಜೈನರ ಕ್ರಾಂತಿಯಿಂದ ವೈದಿಕರ ಧರ್ಮವೃಕ್ಷವು ಅಲುಗಾಡ ತೊಡಗಿತ್ತು; ಬೌದ್ಧರ ಅತಿ ಕ್ರಾಂತಿಯಿಂದ ಅದು ಮುರಿದು ಬಿದ್ದಿತು. ಶಂಕರಾಚಾರ್ಯರು ಧರ್ಮದ ಹೆಸರಿನಿಂದ ಧರ್ಮರಕ್ಷಕ ಸೈನ್ಯವನ್ನು ಸ್ಥಾಪಿಸಿ ಪರೋಕ್ಷವಾಗಿ ಬೌದ್ಧರ ಕಗ್ಗೊಲೆಯನ್ನು ನಡೆಸಿ, ಪ್ರತ್ಯಕ್ಷವಾಗಿ ಅವರ ತತ್ವಗಳನ್ನೇ ಮಾರ್ಪಡಿಸಿಕೊಂಡು ಉಪದೇಶ ನೀಡಿ ಭಾರತದಿಂದ ಅವರನ್ನೋಡಿಸಿದ್ದು ಬೌದ್ಧ ಧರ್ಮದ ಇತಿಹಾಸದಲ್ಲಿ ನಾವಿಂದು ನೋಡಬಹುದು.

ವಿಶ್ವಗುರು ಬಸವಣ್ಣನವರು ಕಲ್ಯಾಣರಾಜ್ಯದ ಕನಸನ್ನು ನನಸಾಗಿ ಮಾಡಲು ಶಿವಾನುಭವವನ್ನೇ ತಳಪಾಯವಾಗಿಟ್ಟುಕೊಂಡು ಕಲ್ಯಾಣದಲ್ಲಿ ಸತ್ಕ್ರಾಂತಿಯನ್ನು ಸರ್ವತೋಮುಖವಾಗಿ ವ್ಯಾಪಕವಾಗಿ ಹರಡಿಸುತ್ತಿರುವಾಗ ವೈದಿಕರು ಅಲ್ಲಸಲ್ಲದ, ಒಳಗೆ ನಿಲ್ಲದ ಮಾತುಗಳನ್ನು ಆಡದೆ ಇರಲಿಲ್ಲ. ಕಂಚಿನ ಕಿವಿಯ ಬಿಜ್ಜಳನಿಗೆ ಚಾಡಿ ಹೇಳಿ ಕಲ್ಯಾಣದಲ್ಲಿ ಶಿವಶರಣರನ್ನು ಅವಮಾನವಾಗಿ, ಸೈನ್ಯದ ಬಲದಿಂದ, ಕೊಲೆ ಮಾಡಿಸಿದ್ದು, ಮತ್ತು ಅವರ ಸಾಹಿತ್ಯವನ್ನು ಸುಡಲು ಯತ್ನಿಸಿದ್ದು ಸುಸ್ಪಷ್ಟ ಸಂಗತಿ.

ಈ ವಿರೋಧಾಭಾಸಗಳು ಒಳಗಿಂದಲ್ಲದೆ ಹೊರಗಿನಿಂದಲೂ ಹೆಚ್ಚಾದವು; ಹೊರಗಿನಿಂದ ದಾಳಿಗಳು ಪ್ರಾರಂಭವಾದವು. ದಾಳಿಗಳ ವಿರೋಧವಾಗಿ ಜನರನ್ನು ಎತ್ತಿಕಟ್ಟಲು ತಮ್ಮ ರಕ್ಷಣೆ ಮಾಡಿಕೊಳ್ಳಲು ಪರನಿಂದೆಗಳನ್ನು ಬಿಡಬೇಕು. ವೈಶ್ಯ, ಶೂದ್ರರೂ ಕೂಡ ಆಪತ್ಕಾಲದಲ್ಲಿ ಶಸ್ತ್ರಗ್ರಹಣ ಮಾಡಬಹುದೆಂದು ಪ್ರೋತ್ಸಾಹಿಸ ತೊಡಗಿದರು. ಇದರ ಸಂದರ್ಭ ಮಸ್ಕರಿ ಭಾಷ್ಯ, ಗೌತಮ VII 25ದಲ್ಲಿ ನೋಡಬಹುದು. ಆಪತ್ಕಾಲದಲ್ಲಿ ತನ್ನ ದೇಹವನ್ನು ಮೊದಲು ರಕ್ಷಿಸಿಕೊಂಡು ತರುವಾಯ ಧರ್ಮವನ್ನು ಆಚರಿಸಬೇಕೆಂದು ಹೇಳತೊಡಗಿದರು. ಇದೇ ಕಾಲದಲ್ಲಿ "ಹಿಂದು" ಪದದ ಬಳಕೆ ಪ್ರಾರಂಭವಾಯಿತು. ಸಿಂಧು ನದಿಯ ಪೂರ್ವಭಾಗದಲ್ಲಿ ಬಂದು ಬಿಡಾರ ಬಿಟ್ಟ ಆರ್ಯರು, ಹಿಂದೂಗಳೆಂದು ಮ್ಲೇಚ್ಛ (ಪರ್ಷಿಯನ್ನ)ರಿಂದ ಅನಿಸಿಕೊಳ್ಳುತ್ತಿದ್ದರು. ಹಿಂದು ಎಂದರೆ ಹಿಂದು ಸ್ಥಾನದಲ್ಲಿದ್ದವರೆಲ್ಲರೂ ಎಂಬ ವಿಶಾಲಾರ್ಥವು ಈಗ ಇದ್ದರೂ ಇದರ ಮೂಲದಲ್ಲಿ ಇಳಿದು ನೋಡಿದಾಗ, ಹಿಂದು ಎಂದರೆ ಆರ್ಯರು, ವೈದಿಕರೇ ವಿನಾ ಮತ್ತಾರಲ್ಲ. ದ್ರವಿಡರಂತೂ ಅಲ್ಲವೇ ಅಲ್ಲ; ವೀರಶೈವರಂತು ಸ್ಪಷ್ಟವಾಗಿ ಅಲ್ಲ. ಆದುದರಿಂದ ವೀರಶೈವವು ಹಿಂದೆ ಕೂಡ ಹಿಂದು ಕಕ್ಷೆಯೊಳಗೆ ಇದ್ದಿಲ್ಲ, ಮುಂದೆಯೂ ಕೂಡ ಇರುವ ಪ್ರಶ್ನೆ ಏಳುವುದಿಲ್ಲ. ಅದು ಯಾವಾಗಲೂ ತನ್ನದೇ ಆದ ಸಿದ್ಧಾಂತದ ಮೇಲೆ ವಿಶಿಷ್ಟ ಸಂಸ್ಕೃತಿಯನ್ನೊಳಗೊಂಡ, ಸತ್ಯ ಸಹಜವಾದ ಬಟ್ಟೆ ಹಿಡಿದು, ಕಲ್ಯಾಣದೆಡೆಗೆ ಸಾಗುತ್ತ ಸರ್ವಸ್ವತಂತ್ರವಾಗಿ, ಶಿವಾನುಭವವನ್ನೇ ಆಧಾರವಾಗಿಟ್ಟುಕೊಂಡು ಮುಂದುವರಿಯುತ್ತ ಬಂದಿದೆ. ಮುಂದೆಯೂ ಕೂಡ ಸರ್ವಸ್ವತಂತ್ರವಾಗಿ ಮುನ್ನಡೆಯುವುದರಲ್ಲಿ ಸಂಶಯವೇ ಇಲ್ಲ. ಹೀಗೆ ಸರ್ವಸ್ವತಂತ್ರವಾಗಿ ಜೈನ, ಬೌದ್ಧ, ಸಿಖ್‌ರಂತೆ ಹಿಂದಿನಿಂದಲೂ ಇದೆ, ಮುಂದೆಯೂ ಇರುವುದು.

ಶಿವಶರಣರು ಪ್ರಗತಿಪರರು; ಸಾಂಪ್ರದಾಯಿಕ ಧರ್ಮ, ತತ್ವ, ಸಮಾಜಗಳಿಗಿಂತಲೂ ಮುಂದುವರೆದವರು. ಅತಿ ಉನ್ನತ ಶಿಖರಕ್ಕೇರಿದವರು. ವೇದ ಧರ್ಮದಲ್ಲಿಲ್ಲದ, ಜೈನ, ಬೌದ್ಧ, ಸಿಖ್ ಮತಗಳಲ್ಲಿಲ್ಲದ ಷಟಸ್ಥಳ ಮಾರ್ಗವಾದ, ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಆರು ಸ್ಥಲಗಳನ್ನೂ ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತವನ್ನೂ ಜ್ಞಾನ, ಕ್ರಿಯೆ, ಯೋಗಗಳ ಸಮುಚ್ಚಯವನ್ನೂ ಒಳಗೊಂಡ ಧರ್ಮ ಉಳ್ಳವರು. ಬ್ರಾಹ್ಮಣ ಮೊದಲಾಗಿ ಅಂತ್ಯಜ ಕಡೆಯಾಗಿ ಎಲ್ಲರಿಗೂ ಸಮಾನ ಅಧಿಕಾರವನ್ನು ತಂದುಕೊಟ್ಟುದು ಬಸವಧರ್ಮ. ಸ್ತ್ರೀಪುರುಷರೆಂಬ ಭೇದಭಾವವನ್ನು ತಾಳದೆ ಸಮಾನ ಸಂಸ್ಕಾರವನ್ನು ಇದು ತಂದು ಕೊಟ್ಟಿತು. ಹೀಗೆ ಧರ್ಮಕ್ಷೇತ್ರದಲ್ಲಿ ಪ್ರಜಾಪ್ರಭುತ್ವಕ್ಕೆ ನಾಂದಿಯನ್ನು ಹಾಡಿತು. ಬಸವಾದಿ ಪ್ರಮಥರು ವರ್ಣಪ್ರೇರಿತ ಸಮಾಜದಲ್ಲಿ ಕೋಲಾಹಲವನ್ನೆಬ್ಬಿಸಿ ಪ್ರಜಾಧರ್ಮವನ್ನು ಸ್ಥಾಪಿಸಿದವರು. ಈಗ ಇವುಗಳೆಲ್ಲವನ್ನು ಹಿಂದೂ ಎಂದು ಕರೆದುಕೊಂಡು, ಕಣ್ಣುಮುಚ್ಚಿ ಕೈಬಿಡುವರೇ? ಶರಣರು ಶಿವಾನುಭವಪ್ರಧಾನ ಮಾರ್ಗದ

ಮೇಲೆ ಹೊರಟವರು. ಶೃತಿಪ್ರಧಾನ ಧರ್ಮಗಳಲ್ಲಿ ಇವರಿಗೆ ನಂಬಿಕೆ ಇಲ್ಲ. ಇವರು ವರ್ಣಬದ್ಧ ಸಮಾಜವನ್ನು ಖಂಡಿಸಿ ವರ್ಣಾತೀತ, ಜಾತ್ಯತೀತ ಸಮಾಜವನ್ನು ಕಟ್ಟಿದರು; ಅದರ ಪ್ರಚಾರ-ಪ್ರಸಾರಗಳಿಗಾಗಿ ಹೋರಾಡಿದರು. ಈ ವಿಚಾರಗಳು ವೇದದಲ್ಲಿಲ್ಲ; ಉಪನಿಷತ್ತುಗಳಲ್ಲಿಲ್ಲ; ಗೀತೆಯಲ್ಲಿಲ್ಲ; ಶ್ರೀಮದ್ರಾಮಾಯಣದಲ್ಲಿಲ್ಲ; ಮಹಾಭಾರತದಲ್ಲಿಲ್ಲ. ನಾವಿಂದು ಹಿಂದು ಧರ್ಮದ ಕಕ್ಷೆಯೊಳಗಿರಬೇಕಾದರೆ, ಈ ಮೇಲಿನ ತತ್ವಗಳನ್ನು ಉಳಿಸಿ ಬೆಳೆಸಿಕೊಂಡು ಬಂದ ಶಿವಶರಣರನ್ನು ಈ ತತ್ವಗಳ ಪ್ರಸಾರ ಕ್ರಾಂತಿಗಾಗಿಯೇ ತಮ್ಮ ಜೀವನದುದ್ದಕ್ಕೂ ಹೋರಾಡಿದ ಮಹಾನುಭಾವಿಗಳನ್ನು ಇಂದಿನ ವೀರಶೈವರು ಮರೆಯಬೇಕಾಗುತ್ತದೆ. ದಿವ್ಯ ಸಂದೇಶಗಳನ್ನು, ತತ್ವಗಳನ್ನು ಶಿವಶರಣರು ತಾವು ಸ್ವತಃ ಆಚರಿಸಿ ಸಮಾಜವನ್ನು ರೂಪಿಸಿ, ಭಾರತಕ್ಕಷ್ಟೆ ಅಲ್ಲ ಇಡೀ ಲೋಕಕ್ಕೇ ನೀಡಿದ್ದಾರೆ. ನಾವು ಅವರ ತತ್ವಗಳನ್ನು ಅಧ್ಯಯನ ಮಾಡಿ, ಅರಿತು ಆಚರಣೆಯಲ್ಲಿ ತಂದು ಅವರಂತಾಗಿ ಉಚಿತ ಸಂಶೋಧನ ಮಾರ್ಗವಿಡಿದು ಮುಂದುವರೆಯಬೇಕಾಗಿದೆ.

ಹಿಂದು ಧರ್ಮದ ಕಕ್ಷೆಯೊಳಗೆ ಇದ್ದು ಇಂತಹ ಅಮೂಲ್ಯ ತತ್ವಗಳನ್ನು, ದಿವ್ಯ ಸಂದೇಶಗಳನ್ನು ಕೈಗೊಳ್ಳುವುದು ಸಾಧ್ಯವಿಲ್ಲ. ಏಕೆಂದರೆ ಹಿಂದು ಎಂದರೆ ಮತ್ತೆ ವರ್ಣಾಶ್ರಮ ಪದ್ಧತಿಗೆ ಒಳಗಾಗಬೇಕಾಗುವದು. ಹಿಂದು ಧರ್ಮದ ಕಕ್ಷೆಯೊಳಗೆ ಪ್ರವೇಶಿಸಬೇಕೆನ್ನುವವರು ಗೌರಿಶಂಕರ ಶಿಖರದ ಮೇಲೆ ಹತ್ತಿ ಈಗ ನಿಂತಿದ್ದು, ಅದರ ಅಡಿಯಲ್ಲಿರುವ ಆಳವಾದ ಅಂಧಕಾರಮಯ ಕಂದಕದೊಳಕ್ಕೆ ತಿಳಿದೂ ತಿಳಿದೂ ಧುಮುಕಿದಂತಾಗುವುದಿಲ್ಲವೆ? ಹಿಂದು ಧರ್ಮದಲ್ಲಿ ಜನಿವಾರಧಾರಿಗಳಲ್ಲದ ವೀರಶೈವರಿಗೆ ಶೂದ್ರರ ಸ್ಥಾನವೇ ವಿನಾ ಬೇರೆ ಸ್ಥಾನ ಉಂಟೆ? ಹೀಗಿರುವಾಗ ಯಾವುದೋ ಒಂದು ಅಂಧ ಅಭಿಮಾನಕ್ಕೆ ಬಲಿಯಾಗಿ ಶರಣ ಧರ್ಮವನ್ನು ಹಿಂದೂ ಕಕ್ಷೆಯಲ್ಲಿ ಸೇರಿಸುವುದು ಉಚಿತವಾಗದೆಂದು ನನ್ನ ಅಭಿಪ್ರಾಯ.

(ಇಲ್ಲಿ ಬಂದಿರುವ ಲೇಖಕರ ವಿಚಾರಗಳ ಬಗ್ಗೆ ಓದುಗರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಸಂಪೂರ್ಣ ಅವಕಾಶವಿದೆ.)

—ಸಂಪಾದಕರು

ಪ್ರತಿಭೆ ಬೆಳೆಯುವುದು ಏಕಾಂತದಲ್ಲಿ, ವ್ಯಕ್ತಿತ್ವ ಬೆಳೆಯುವುದು ಲೋಕದ ಎಡರುತೊಡರುಗಳೆಂಬ ಬಿರುಗಾಳಿಯ ಮಧ್ಯದಲ್ಲಿ.

—ಗಯಟೆ

ಪ್ರತಿಯೊಂದು ಕೃತಿಯ ಕೊನೆಯಲ್ಲೂ ಕಲಾವಿದ ತಾಳುವ ಅತೃಪ್ತಿಯು ಇನ್ನೊಂದು ಕಲಾರತ್ನವನ್ನು ನಿರ್ಮಿಸಲು ಸಹಾಯಕವಾಗುತ್ತದೆ.

—ಅಯರ್‌ಬಾಚ್

ವಿಚಿತ್ರ ಆದರೂ ಸತ್ಯ

ಸಂಗ್ರಹ : **ಗುರುಪಾದ ಸೂಳಗೊಂಡ**

ಅಂಚೆ ಚೀಟಿ

ಆಂಧ್ರ ಪ್ರದೇಶದ ಮಹಬೂಬ ನಗರದ ನಿವಾಸಿಯೊಬ್ಬನು ಅಮೇರಿಕಕ್ಕೆ ಒಂದು ಪತ್ರ (ಲಕೋಟೆ) ಕಳಿಸಬೇಕಾಗಿತ್ತು. ಪೋಸ್ಟ್ ಆಫೀಸಿಗೆ ಹೋಗಿ ಅದನ್ನು ತೂಕ ಮಾಡಿಸಲಾಗಿ ೧೧-೪೦ ರೂ.ಗಳ ಅಂಚೆ ಚೀಟಿ ಅಂಟಿಸಬೇಕೆಂದು ಹೇಳಿದರು. ಹೆಚ್ಚಿನ ಬೆಲೆಯ ಅಂಚೆ ಚೀಟಿಗಳು ಮುಗಿದಿದ್ದ ಕಾರಣ ಒಂದೊಂದು ರೂಪಾಯಿಯ ೧೧ ಚೀಟಿಗಳನ್ನು ಅಂಟಿಸಿದನು. ಅಂಚೆ ಕಾರ್ಕೂನನು ಅಂಚೆ ಚೀಟಿಗಳನ್ನು ಲಗತ್ತಿಸಿದ ಲಕೋಟೆಯನ್ನು ತೂಕ ಮಾಡಿದಾಗ ಅಷ್ಟೂ ಚೀಟಿಗಳ ಮತ್ತು ಅವನ್ನು ಅಂಟಿಸಲು ಉಪಯೋಗಿಸಿದ ಪೇಸ್ಟಿನ ತೂಕ ಹೆಚ್ಚಾಗಿ ಮತ್ತೆ ೨-೫೦ ರೂ.ಗಳ ಚೀಟಿ ಅಂಟಿಸಲು ಹೇಳಿದನು.

ಜೀವನ ನಿರ್ವಹಣೆ

ಅಮೇರಿಕದಲ್ಲಿ ರೇ ವೆಲೈನ್ ಎಂಬವನು ಜೀವನ ನಿರ್ವಹಣೆಗಾಗಿ ಒಂದು ಹೊಸ ದಾರಿಯನ್ನು ಕಂಡುಹಿಡಿದ. ತನ್ನ ತಲೆಯನ್ನು ನುಣ್ಣಗೆ ಬೋಳಿಸಿಕೊಂಡು ಅದರ ಮೇಲೆ ಪ್ರಚಾರಕ್ಕಾಗಿ ಜಾಹಿರಾತುಗಳನ್ನು ಬರೆದುಕೊಂಡು ಊರೆಲ್ಲ ಸುತ್ತುತ್ತಿದ್ದ.

ಕಲೆಯ ಹುಚ್ಚು

ಇಂಗ್ಲೆಂಡಿನ ಕಾಗ್ಗಿನ್ ಹಾಲ್‌ನಲ್ಲಿ ಜಾನ್ ಕಾರ್ಟರ ಎಂಬವನಿಗೆ ಕುತ್ತಿಗೆಯಿಂದ ಕೆಳಭಾಗದ ಅವಯವಗಳೆಲ್ಲ ಅರ್ಧಾಂಗವಾಯು (Paralysis) ನಿಂದ ನಿಷ್ಕ್ರಿಯವಾಗಿದ್ದವು. ಅವನು ಒಬ್ಬ ಪ್ರತಿಭಾವಂತನಾದ ಯಶಸ್ವಿ ಚಿತ್ರಕಲೆಗಾರನಾಗಿದ್ದ. ಕಲೆಯ ಹುಚ್ಚಿನಿಂದ ತನ್ನ ಬಾಯಿಯಲ್ಲಿ ಕುಂಚನ್ನು ಹಿಡಿದು ಚಿತ್ರ ಬರೆಯುತ್ತಿದ್ದ.

ಉದ್ದ ಮೀಸೆ

ಉತ್ತರ ಪ್ರದೇಶದ ಪ್ರತಾಪಗಢದಲ್ಲಿ ಮಸೂರಿ ಯಾದಿನನೆಂಬ ೭೦ ವರ್ಷ ವಯಸ್ಸಿನ ವೃದ್ಧನಿದ್ದಾನೆ. ಅವನ ಮೀಸೆಯ ಉದ್ದ ೮.೬ ಅಡಿ. ಅದನ್ನು ಮೃದು ಮತ್ತು ಹೊಳಪಾಗಿ ಇರಿಸಲು ಅವನು ವರ್ಷಕ್ಕೆ ೩೦೦ ರೂ.ಗಳನ್ನು ಸುಗಂಧ ತೈಲಗಳಿಗಾಗಿ ಖರ್ಚು ಮಾಡುತ್ತಾನೆ.

ಜಗತ್ತಿನಲ್ಲೇ ಆಳವಾದ ಸರೋವರ

ರಷ್ಯಾದ ಬೈಕಲ್ ಎಂಬ ಸರೋವರ ಜಗತ್ತಿನಲ್ಲೇ ಅತ್ಯಂತ ಆಳವಾದ ಸರೋವರ. ಅದರ ಆಳ ೧,೭೪೧ ಮೀಟರುಗಳು.

ಶಾಲೆಗಳಿಗಾಗಿ "ಕಲ್ಯಾಣ ಕಿರಣ"

ಕರ್ನಾಟಕ ರಾಜ್ಯದ ವಿದ್ಯಾ ಇಲಾಖೆಯ ನಿರ್ದೇಶಕರು, (ಪಠ್ಯಪುಸ್ತಕ ಸಮಿತಿ), ಚಾಮರಾಜಪೇಟೆ, ಬೆಂಗಳೂರು, ತಮ್ಮ ಪತ್ರ No. TBC-1/78-79 ದಿನಾಂಕ 18-5-79 ಮೂಲಕ ರಾಜ್ಯದ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ ಸಾಮಾಜಿಕ, ಆಧ್ಯಾತ್ಮಿಕ ಮಾಸಪತ್ರಿಕೆ "ಕಲ್ಯಾಣ ಕಿರಣ"ವನ್ನು ತರಿಸಿಕೊಳ್ಳಲು ಶಿಫಾರಸು ಮಾಡಿದ್ದಾರೆ. ಈ ಅವಕಾಶವನ್ನು ಉಪಯೋಗಿಸಿಕೊಂಡು ಎಲ್ಲಾ ಶಿಕ್ಷಣ ಸಂಸ್ಥೆಗಳೂ ಮತ್ತು ಸರಕಾರಿ ಶಾಲೆಗಳೂ ತಮ್ಮ ವಾಚನಾಲಯಗಳಿಗಾಗಿ ಕಲ್ಯಾಣ ಕಿರಣ ಪತ್ರಿಕೆಯನ್ನು ತರಿಸಿಕೊಳ್ಳಬೇಕಾಗಿ ವಿನಂತಿಸಿಕೊಳ್ಳುತ್ತೇವೆ. ವಾರ್ಷಿಕ ಚಂದಾ ಹನ್ನೆರಡು ರೂಪಾಯಿ ಇರುವದು. ಪ್ರತಿ ತಿಂಗಳೂ ಒಂದನೆ ತಾರೀಖಿಗೆ ಬೆಂಗಳೂರಿನಿಂದ ಹೊರಡುವ 64 ಪುಟಗಳ ಈ ಮಾಸ ಪತ್ರಿಕೆ **ಪೂಜ್ಯ ಮಾತೆ ಮಹಾದೇವಿಯರ** ಸಂಪಾದಕತ್ವದಲ್ಲಿ ಹೊರಡುತ್ತಿದೆ. ವಿಳಾಸ: ಕಲ್ಯಾಣ ಕಿರಣ ಕಾರ್ಯಾಲಯ, **'ಬಸವ ಮಂಟಪ'** ನಂ. 24, ಕಾರ್ಡ್ ರೋಡ್, ಎರಡನೆ ಬ್ಲಾಕ್, ರಾಜಾಜಿನಗರ, ಬೆಂಗಳೂರು-10.

—ವ್ಯವಸ್ಥಾಪಕರು

ಗ್ರಂಥಾಲಯಗಳಿಗೆ "ಕಲ್ಯಾಣ ಕಿರಣ"

ಕರ್ನಾಟಕ ರಾಜ್ಯದ ಮಾನ್ಯ ಮುಖ್ಯ ಗ್ರಂಥಪಾಲಕರು ತಮ್ಮ ಪತ್ರ No. TA 2-3-NPS-55/11746/78-79 ದಿನಾಂಕ 21-2-1979ರ ಮೂಲಕ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲಾ-ನಗರ ಕೇಂದ್ರ ಗ್ರಂಥಾಲಯಗಳಿಗೂ, ಆಧ್ಯಾತ್ಮಿಕ ಪತ್ರಿಕೆ "ಕಲ್ಯಾಣ ಕಿರಣ"ವನ್ನು ತರಿಸಿಕೊಳ್ಳಲು ಶಿಫಾರಸು ಮಾಡಿದ್ದಾರೆ. ಈ ಅವಕಾಶವನ್ನು ಉಪಯೋಗಿಸಿಕೊಂಡು, ಎಲ್ಲಾ ನಗರ-ಜಿಲ್ಲಾ ಕೇಂದ್ರ ಗ್ರಂಥಾಲಯಗಳೂ ಕಲ್ಯಾಣ ಕಿರಣಕ್ಕೆ ಚಂದಾದಾರರಾಗಬೇಕೆಂದು ವಿನಂತಿಸಿಕೊಳ್ಳುತ್ತೇವೆ. ವಾರ್ಷಿಕ ಚಂದಾ ಹನ್ನೆರಡು ರೂಪಾಯಿ ಇದ್ದು, ಪ್ರತಿ ತಿಂಗಳ ಒಂದನೇ ತಾರೀಖು ಬೆಂಗಳೂರಿನಿಂದ ಹೊರಡುವ, ಅರವತ್ನಾಲ್ಕು ಪುಟಗಳ ಈ ಮಾಸಿಕ ಆಧ್ಯಾತ್ಮ-ಸಾಮಾಜಿಕ ವಿಷಯಗಳಿಗೆ ಮೀಸಲಾಗಿದ್ದು, ಪೂಜ್ಯ ಮಾತೆ ಮಹಾದೇವಿಯವರ ಸಂಪಾದಕತ್ವದಲ್ಲಿ ಪ್ರಕಟಗೊಳ್ಳುತ್ತಿದೆ. ಪತ್ರಿಕೆಯ ವಿಳಾಸ: ಕಲ್ಯಾಣ ಕಿರಣ ಕಾರ್ಯಾಲಯ, **'ಬಸವ ಮಂಟಪ'** ನಂ. 24, ಕಾರ್ಡ್ ರಸ್ತೆ, ಎರಡನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10.

—ವ್ಯವಸ್ಥಾಪಕರು

ಕಲ್ಯಾಣ ಕಿರಣ

ಬಸವರಾಜ ಎಸ್. ಹೊಸಮನಿ, ಬಿ.ಪಿ.,

ಓ ನೆಚ್ಚಿನ ಕಲ್ಯಾಣ ಕಿರಣ
ತಿಂಗಳಿಗೊಮ್ಮೆ ನಿನ್ನಾಗಮನ,
ಅಲ್ಲಿವರೆಗೂ ನಾವು ಕಾಯಬೇಕೇನು
ಇನ್ನೂ ಬೇಗ ಬರಬಾರದೇ ನೀನು ? ॥ ೧ ॥

ತುಂಬಿರುವೆ ಸಕಲ ಪುಟಗಳಲ್ಲಿವನು
ಸಾಹಿತ್ಯಮಯ ಮಧುರ ಸಿಹಿಜೇನು,
ಸವಿದಷ್ಟೂ ಸವಿಬೇಕೆನಿಸುತಿದೆ ಇನ್ನೂ
ಅರಿವಿಲ್ಲವಾಯ್ತು ಮುಗಿದುದು ಪುಟವೆಲ್ಲ. ॥ ೨ ॥

ವಿವಿಧ ಪ್ರೌಢಮಯ ಲೇಖನಗಳು
ನಿನ್ನ ಸರ್ವಜೀವಾಳದಲಿ ತುಂಬಿಹವು,
ವರ್ಣಮಯ ಮನಸೆಳೆವ ಮುಖಪುಟವ
ಹೊತ್ತು ತಂದು ಶೋಭಿಸುವ ಭಾಗ್ಯ ನಿನದಾಯ್ತು ॥ ೩ ॥

'ಸಂಪ್ರದಾಯಕ್ಕಿಂತ ಸತ್ಯಶ್ರೇಷ್ಠ
ಸತ್ಯಕ್ಕಿಂತ ಕಲ್ಯಾಣ ಶ್ರೇಷ್ಠ'ವೆಂದು
ತೊಡೆಯುತಿರುವೆ ನೀ ಭ್ರಷ್ಟ ಮೂಢರನು,
ತುಂಬಿರುವೆ ನಿನ್ನಲ್ಲಿ ನೀತಿ ನಿಷ್ಠೆ( )ನು ॥ ೪ ॥

ನಿನ್ನಿಂದ ನಮಗಾಯ್ತು ಬಸವಗೀತೆಯು
ವಚನ ಸುಧೆಯಲ್ಲಿ ಮೀಯುವ ಭಾಗ್ಯ ನಮಗಾಯಿತು
ತಂದಿಹೆ ನೀನೆಮಗೆ ಆಧ್ಯಾತ್ಮ ಕಿರಣ
'ಬಸವಪ್ರಿಯ ದೇವನಲಿ' ಬೆಳಗು ಕಲ್ಯಾಣ ಕಿರಣ. ॥ ೫ ॥

ವೈಜ್ಞಾನಿಕ ಸಂಶೋಧನೆಗಳು

ಹೃದಯಾಘಾತ ಹೆಣ್ಣುಮಕ್ಕಳಲ್ಲಿ ಕಡಿಮೆ

ಹೃದಯಾಘಾತ (Heart attack) ದಿಂದ ಸ್ತ್ರೀಯರಿಗಿಂತ ಪುರುಷರು ಹೆಚ್ಚಾಗಿ ಮರಣಕ್ಕೀಡಾಗುತ್ತಾರೆ ಎಂಬುದನ್ನು ಮತ್ತು ಅದಕ್ಕೆ ಕಾರಣವನ್ನೂ ಕೂಡಾ ಅಮೇರಿಕಾದ ಫ್ಲಾರಿಡಾದಲ್ಲಿರುವ ಗೇನ್ಸವಿಲ್‌ನಲ್ಲಿಯ ಮೆಡಿಕಲ್ ಸೆಂಟರ್‌ನಲ್ಲಿ ಸಂಶೋಧನೆಯಿಂದ ಕಂಡ.ಹಿಡಿಯಲಾಗಿದೆ. ಸಂಶೋಧನೆಯ ಪರಿಣಾಮಗಳನ್ನು New England Journal of Medicineನಲ್ಲಿ ಪ್ರಕಟಿಸಲಾಗಿದೆ.

ಸಂಶೋಧನೆಯಲ್ಲಿ ತೊಡಗಿದ ಡಾಕ್ಟರರು ೩೦ ಜನ ಆರೋಗ್ಯವಂತ ಪುರುಷರ ಮತ್ತು ೧೯ ಜನ ಸ್ತ್ರೀಯರ ಉಸಿರಾಟ ಕ್ರಮವನ್ನು ಮಲಗಿದಾಗ ಪ್ರಾಯೋಗಿಕ ದೃಷ್ಟಿಯಿಂದ ನಿರೀಕ್ಷಿಸಿ ನೋಡಲಾಗ ಅದರಲ್ಲಿ ೨೦ ಜನ ಪುರುಷರ ಉಸಿರಾಟ ಒಟ್ಟು ೨೬೪ ಸಲ ಅಸಂಬದ್ಧವಾಗಿ ಅಕ್ರಮವಾಗಿತ್ತು ಮತ್ತು ರಕ್ತದಲ್ಲಿ ಇರಬೇಕಾದ ಆಮ್ಲಜನಕದ ಪ್ರಮಾಣ ಇರಬೇಕಾದಷ್ಟು ಇರದೆ ಕಡಿಮೆಯಾಗಿತ್ತು. ಈ ೨೦ ಜನರಲ್ಲಿ ೧೦ ಜನರಿಗೆ ೧೦ ಸೆಕೆಂಡುಗಳಿಗಿಂತ ಹೆಚ್ಚಾಗಿ ಉಸಿರಾಟವೇ ನಿಂತಿತ್ತು ಅಂದರೆ ಉಸಿರುಗಟ್ಟಿತ್ತು (apnoea). ರಕ್ತದಲ್ಲಿ ಆಮ್ಲಜನಕ ಕಡಿಮೆ ಪ್ರಮಾಣವಿರುವುದರಿಂದ ಅದು ಬೆಳಗಿನ ಜಾವದಲ್ಲಿ ಹೃದಯಾಘಾತ ಸಂಭವಿಸಲು ಕಾರಣವಾಗುತ್ತದೆ. (ಅಂಕಿ ಅಂಶಗಳ ಪ್ರಕಾರ ಹೃದಯಾಘಾತದಿಂದ ಸಂಭವಿಸುವ ಸಾವುಗಳು ಹೆಚ್ಚಾಗಿ ಬೆಳಗಿನ ವೇಳೆಯಲ್ಲಿ ಸಂಭವಿಸುತ್ತವೆ.) ಮಲಗಿದ ವೇಳೆಯಲ್ಲಿ ಅಕ್ರಮವಾದ ಉಸಿರಾಟ ಬೇರೆ ರೋಗಗಳಿಗೂ ಕಾರಣವಾಗುತ್ತದೆ. ಸ್ತ್ರೀಯರ ಉಸಿರಾಟ ಪುರುಷರಿಗಿಂತ ಕ್ರಮವಾಗಿ ಇರುವುದರಿಂದ ಅವರಲ್ಲಿ ಹೃದಯಾಘಾತಗಳು ವಿರಳ.

ಅಂತರಗಂಗೆ ನೀರನ್ನು ಶುದ್ಧೀಕರಿಸುತ್ತದೆ

ನೀರಿನಲ್ಲಿ ಹೆಚ್ಚಾಗಿ ಬೆಳೆಯುವ ಅಂತರಗಂಗೆಯು ಅನುಪಯುಕ್ತವೆಂದು; ಜಲಯಾನದ ದಾರಿಯಲ್ಲಿ ಮತ್ತು ಸರೋವರದ ನೀರಿನಲ್ಲಿ ಹಬ್ಬಿಕೊಂಡು ರೋಗ ರುಜಿನಗಳಿಗೆ ಕಾರಣವಾಗಿ, ಸೋಂಕುರೋಗ ಹರಡಿಸುತ್ತದೆಂದು, ಅಲ್ಲದೆ ತೊಂದರೆದಾಯಕವೆಂದು ತಿಳಿಯಲಾಗಿದೆ. ಆದರೆ ಮಲೇಶಿಯಾದಲ್ಲಿ ನಡೆದ ಇತ್ತೀಚಿನ ಸಂಶೋಧನೆಯಿಂದ ಅದು ನೀರನ್ನು ಶುದ್ಧೀಕರಣಗೊಳಿಸುತ್ತದೆ ಎಂದು ಕಂಡು ಹಿಡಿಯಲಾಗಿದೆ. ಫ್ಯಾಕ್ಟರಿಗಳಿಂದ ಹೊರಹಾಕಲ್ಪಟ್ಟ ಅಶುದ್ಧವಾದ ನೀರಿನಲ್ಲಿ ಹೆಚ್ಚಾದ ಮತ್ತು ನಿರುಪಯುಕ್ತ ಕಬ್ಬಿಣ, ತವರ ಮತ್ತು ತಾಮ್ರದ ಅಂಶಗಳಿರುವವು, ಅಂತರಗಂಗೆಯು ನೀರಿನಲ್ಲಿ ಕರಗಿದ ಉಪಯುಕ್ತ ವಸ್ತುಗಳನ್ನು ಹೀರಿಕೊಳ್ಳುತ್ತದೆ. ಅದರ ಅಂಗಾಂಗಗಳ ರಚನೆಗೆ ಅವೆಲ್ಲ ಉಪಯುಕ್ತವಾಗಿವೆ. ಹೀಗೆ ನೀರಿನಲ್ಲಿರುವ ಹೆಚ್ಚಾದ ನಿರುಪಯುಕ್ತ ವಸ್ತುಗಳನ್ನು ಹೀರಿಕೊಂಡು ನೀರನ್ನು ಶುದ್ಧೀಕರಣ ಮಾಡುತ್ತದೆ.

ವಿಶ್ವವಿಭೂತಿ ಬಸವಣ್ಣನವರು-4

ಜಗದ್ಗುರು ಮಾತೆ ಮಹಾದೇವಿ

ಬಸವಣ್ಣನು ಬಾಲ್ಯ ಕಳೆದು ಯೌವ್ವನ ಬಲಿಯುವ ಅವಧಿಯನ್ನು ಕೂಡಲಸಂಗಮದ ವಿದ್ಯಾಲಯದಲ್ಲಿ ಕಳೆದನು. ಭಕ್ತಿಯೋಗದ ಜೀವಾಳವಾದ ಶರಣಾಗತಿ, ಜ್ಞಾನಯೋಗದ ಪ್ರಬಲಾಸ್ತ್ರವಾದ ಆತ್ಮಚಿಂತನೆ, ಕರ್ಮಯೋಗದ ಸಾರವಾದ ಕಾಯಕ ನಿಷ್ಠೆ—ಈ ಮೂರೂ ಮುಪ್ಪುರಿಗೊಂಡು ಅವನಲ್ಲಿ ನೆಲೆಸಿದ್ದು, ಈ ಎಲ್ಲ ಯೋಗಗಳ ಸಾಧನೆಯಲ್ಲಿಯೂ ತೊಡಗಿದ. ಇಪ್ಪತ್ತೆರಡು ವರ್ಷಗಳ ತರುಣನಾಗುವಷ್ಟರಲ್ಲಿ ಅಪಾರ ಬುದ್ಧಿಮತ್ತತೆ, ಪ್ರೌಢತ್ವ ಅಳವಟ್ಟಿದ್ದವು. ಅಂದಿನ ಸಮಾಜ ವ್ಯವಸ್ಥೆ, ರೂಢಿಗೊಂಡಿದ್ದ ನಂಬುಗೆ, ಆಚರಣೆಯಲ್ಲಿದ್ದ ಶುಷ್ಕತೆ, ಪೂಜೆಯಲ್ಲಿದ್ದ ಯಾಂತ್ರಿಕತೆ, ಧರ್ಮದ ಹೆಸರಿನಲ್ಲಿ ಅವ್ಯಾಹತವಾಗಿ ಸಾಗಿದ್ದ ಶೋಷಣೆ, ತೀವ್ರ ಜಿಗುಪ್ಸೆಯನ್ನುಂಟುಮಾಡುವುದರೊಡನೆ ಮನದಲ್ಲಿ ಆಂದೋಲನವನ್ನುಂಟು ಮಾಡಿದ್ದವು. ಉಪನಿಷತ್ತಿನ ತಿರುಳಿನಿಂದ ಪರಿಪ್ಲುತವಾದ ವೈದಿಕ ಧರ್ಮದ ಜ್ಞಾನಕಾಂಡ ಮನಸ್ಸನ್ನು ಸೆಳೆದಿದ್ದರೆ, ಅಲ್ಲಿಯ ಕರ್ಮಕಾಂಡ, ಯಜ್ಞ-ಯಾಗ, ಅಶ್ವ-ಅಜಗಳ ಹನನ, ಇಂದ್ರ, ಚಂದ್ರ, ಶನಿ ಮುಂತಾದ ಕ್ಷುದ್ರ ದೇವತೆಗಳ ಆರಾಧನೆ, ಆಡಂಬರ–ವೈಭವಗಳ ಪೂಜೆ ಮನಸ್ಸನ್ನು ಕಲಕಿದ್ದವು. ಶೈವಧರ್ಮದ ಭಕ್ತಿ, ೬೩ ಪುರಾತನರ ಭಕ್ತಿಮಾರ್ಗ ಮನಸ್ಸನ್ನು ಸೂರೆ ಮಾಡಿದ್ದರೆ ಅದುವೇ ಮೂಢತ್ವ, ಆವೇಶದ, ಅತಿರೇಕದ ಭಕ್ತಿಯಾಗಿ ಪರಿವರ್ತಿತಗೊಂಡಿದ್ದು ಆತಂಕವನ್ನುಂಟುಮಾಡಿತ್ತು. ಜೈನ ಧರ್ಮದ ಅಹಿಂಸಾ ತತ್ತ್ವ ಅತ್ಯಂತ ಸಂಪ್ರೀತಗೊಳಿಸಿದ್ದರೆ, ಕಷ್ಟಕರ ಜಡಾಚರಣೆ, ಕಟ್ಟುನಿಟ್ಟುಗಳು ಧರ್ಮದತ್ತ ಆಕರ್ಷಣೆ ಮೂಡದಂತೆ ಮಾಡಿದ್ದವು. ಮಾನವತಾವಾದಿ ಬುದ್ಧನ ಜಾತ್ಯತೀತ ಧೋರಣೆ, ಮಾನವತಾವಾದ ಮನಸ್ಸನ್ನು ಅಪಹರಿಸಿದ್ದರೆ ಕಾಯಕದಲ್ಲಿ ಶ್ರದ್ಧೆ ಇಲ್ಲದೆ ಭಿಕ್ಷೆಯನ್ನೇ ವೃತ್ತಿಯನ್ನಾಗಿ ಮಾಡಿಕೊಂಡ 'ಭಿಕ್ಕುಧರ್ಮ', 'ಸನ್ಯಾಸಧರ್ಮ' ಖೇದವನ್ನುಂಟುಮಾಡಿದ್ದವು. ಆದ್ದರಿಂದ ದುಂಬಿಯು ವಿವಿಧ ಹೂವುಗಳಿಂದ ಮಕರಂದವನ್ನು ಸಂಗ್ರಹಿಸಿ, ಜೇನುತುಪ್ಪವನ್ನು ಜಗತ್ತಿಗೆ ನೀಡುವಂತೆ ವಿವಿಧ ಮತಧರ್ಮಗಳಲ್ಲಿದ್ದ ಒಳ್ಳಿತನ್ನು ಆರಿಸಿಕೊಂಡು ನೂತನ ಜೀವನ ವಿಧಾನ, ತತ್ತ್ವಜ್ಞಾನ, ಧರ್ಮಾಚರಣೆಯನ್ನು ರೂಪುಗೊಳಿಸುವ ಆಕಾಂಕ್ಷೆ ಬಸವಣ್ಣನವರಲ್ಲಿ ತುಂಬಿದ್ದಿತು. ಶೈವ ಧರ್ಮದ ಭಕ್ತಿ–ಉಪಾಸನೆ, ಉಪನಿಷತ್ತಿನ ಜ್ಞಾನ, ಜೈನಧರ್ಮದ ಅಹಿಂಸೆ, ಬೌದ್ಧ ಧರ್ಮದ ಮಾನವತಾವಾದ ಈ ಎಲ್ಲಕ್ಕಿಂತ ಮಿಗಿಲಾಗಿ ಜೀವನ

ವನ್ನು ಭ್ರಾಂತಿಯಿಂದು ಅಲ್ಲಗಳೆಯದೆ ಅದನ್ನು ದೈವೀಕರಿಸುವ ದೃಷ್ಟಿಕೋನ, ನಾಡು-ಸಮಾಜಗಳ ಬೆನ್ನೆಲುಬಾದ ದುಡಿಮೆಗೆ ಪ್ರಾಶಸ್ತ್ಯ—ಈ ಎಲ್ಲವುಗಳ ಸಂಗಮ ವನ್ನು ರೂಪುಗೊಳಿಸುವ ಆಕಾಂಕ್ಷೆ ಬಸವಣ್ಣನವರಲ್ಲಿತ್ತು.

ಸುಮಾರು ಇಪ್ಪತ್ತೆರಡನೆಯ ವಯಸ್ಸಿಗೆ ಲೌಕಿಕ ಶಿಕ್ಷಣ ಮುಗಿಯುವ ಹಂತ ಬರುವಷ್ಟರಲ್ಲಿ ಬಸವಣ್ಣನವರ ಬುದ್ಧಿ ಪ್ರೌಢಿಮೆ ತುಂಬ ಬಲಿತಿತ್ತು.

ಬಲದೇವರಸರ ಪರಿಚಯ

ಕೂಡಲಸಂಗಮ ಕ್ಷೇತ್ರದ ಜಾತ್ರಾ ಮಹೋತ್ಸವವು ಸಮೀಪಿಸುವುದರೊಡನೆ, ಗುರುಕುಲದ ವಿದ್ಯಾರ್ಥಿ ವೃಂದದ ಘಟಿಕೋತ್ಸವ ಸಮಾರಂಭವೂ ಆಗಮಿಸಿತ್ತು. ಬಹುದಿವಸಗಳಿಂದ ತಮ್ಮ ಮನೆದೇವರಾದ ಸಂಗಮೇಶ್ವರನನ್ನು ದರ್ಶಿಸಲಾಗದಿದ್ದ ಚಾಲುಕ್ಯ ರಾಜ್ಯದ ಪ್ರಧಾನಾಮಾತ್ಯರಾದ ಬಲದೇವರಸರು ಆ ವರ್ಷ ಮುಖ್ಯ ಅತಿಥಿಗಳಾಗಿ ಬರುವವರಿದ್ದರು. ಬಸವಣ್ಣನವರ ವಿದ್ಯಾಭ್ಯಾಸವು ಪ್ರಮುಖ ಘಟ್ಟ ಮುಟ್ಟಿದ್ದರಿಂದ ಅವರ ಜೀವನ ಕವಲುದಾರಿಯು ಆದಿಯಲ್ಲಿತ್ತು. ಇಂಥ ಪ್ರಸಂಗ ದಲ್ಲಿ ಕುಲಪತಿಗಳಾದ ಜಾತವೇದ ಮುನಿಗಳು ತಮ್ಮ ಗುರುಕುಲದ ವಟುಗಳ ವ್ಯಾಖ್ಯಾನಗಳನ್ನು ಅಂದಿನ ಸಭೆಯಲ್ಲಿ ಏರ್ಪಡಿಸಿದ್ದರು. ನೆಂಟರಿಷ್ಟರು ಬಂದಾಗ ಸಾಮಾನ್ಯ ಲೌಕಿಕ ಶ್ರೀಮಂತನು ತನ್ನ ಮನೆಯ ಸಂಪತ್ತನ್ನು ಪ್ರದರ್ಶನಗೈವಂತೆ, ತನ್ನ ಮಕ್ಕಳನ್ನು ಎಲ್ಲರಿಗೆ ತೋರಿಸಿ ಆನಂದಪಡುವಂತೆ ಸದ್ಗುರುವು ಮುಮುಕ್ಷು ಗಳನ್ನು, ಜ್ಞಾನಿಗಳಾದ ವಟುಗಳನ್ನು ತೋರಿಸಿ ಆನಂದ ಹೊಂದಬೇಕಷ್ಟೆ. ಕುಲಪತಿ ಗಳಾದ ಜಾತವೇದ ಮುನಿಗಳು ತಮ್ಮ ಜ್ಞಾನ ಭಾಂಡಾರದ ಅಪೂರ್ವ ರತ್ನವಾದ ಬಸವಣ್ಣನವರ ಉಪನ್ಯಾಸವನ್ನು ಇಡಿಸುವುದರ ಮೂಲಕ ಅವರ ಪ್ರತಿಭೆಯ ಪರಿಚಯಮಾಡಿಕೊಟ್ಟರು.

ತನ್ನ ಮುಂದಿನ ಬಾಳಿನ ರೂಪುರೇಷೆಗಳನ್ನು ಕುರಿತು ಬಸವಣ್ಣನು ಪ್ರತಿ ಪಾದಿಸುತ್ತ ಹೇಳಿದ: "ಛಿದ್ರವಿಚ್ಛಿದ್ರಗೊಂಡು ವಿಕಾರವಾಗಿರುವ ಸಮಾಜವನ್ನು ಹೇಗೆ ಸಂಘಟಿಸಬೇಕು, ಸುಧಾರಿಸಬೇಕು ಎಂಬುದೇ ತಿಳಿಯುತ್ತಿಲ್ಲ. ಒಂದು ತೆಂಗಿನ ಗಿಡದ ನೆರಳು ಬಿದ್ದಾಗ ಅದರ ಗೊಂಚಲಿನಲ್ಲಿರುವ ಎಳೆನೀರು, ಕಾಯಿಗಳ ನೆರಳೂ ನೆಲದ ಮೇಲ ಮೂಡಿರುವದು. ಆ ನೆರಳಿನ ಮೇಲೆ ನಿಂತು ಎಳೆನೀರನ್ನು ಕಿತ್ತಂತೆ, ಕುಡಿದಂತೆ ನಟನೆ ಮಾಡಿದರೆ ನಿಜಕ್ಕೂ ಕುಡಿದಂತಾಗುವುದೆ ? ತೃಷೆಯು ಹಿಂಗುವುದೆ ? ಅದು ಕೇವಲ ನೆರಳು ಮಾತ್ರ. ನಿಜವಾದ ತೆಂಗಿನ ಗಿಡದ ಬದಿಯಲ್ಲೇ ನೆರಳು ಇದ್ದರೂ, ಮೂಲವು ಸತ್ಯವಾದರೆ ನೆರಳು ತೋರಿಕೆ. ಅದೇ ರೀತಿ ಧರ್ಮವಂತಿಕೆಯ ಆಚರಣೆ ಎಂಬ ನಂಬಿಗೆ ಹೊಂದಿ, ಮೂಢನಂಬಿಕೆಗಳಲ್ಲಿ ತಲ್ಲೀನರಾದರೆ, ಬರೀ ನಟನೆ, ಬಳಲಿಕೆಗಳೇ ವಿನಾ ವಾಸ್ತವ ಫಲ, ಸಂತೃಪ್ತಿ ಇಲ್ಲ.

ಇದು ನೆರಳಿನಲ್ಲಿರುವ ತೆಂಗಿನ ಗೊಂಚಲುಗಳನ್ನು ತಿಂದಂತೆ ನಟನೆ ಮಾಡಿ ತೃಪ್ತರಾದೆ ವೆಂಬ ಭ್ರಾಂತಿಯಂತೆ.

ಆಳೆಯುತ್ತ ಅಳೆಯುತ್ತ ಬಳಲುವರಲ್ಲದೇ ಕೊಳಗ ಬಳಲುವುದೆ ?
ನಡೆಯುತ್ತ ನಡೆಯುತ್ತ ಬಳಲುವರಲ್ಲದೇ ಬಟ್ಟೆ ಬಳಲುವುದೆ ?
ಶ್ರಮವ ಮಾಡುತ್ತ ಮಾಡುತ್ತ ಬಳಲುವರಲ್ಲದೇ ಕೋಲು ಬಳಲುವುದೆ ?
ನಿಜವನರಿಯದ ಭಕ್ತ ಬಳಲುವನಲ್ಲದೇ ಲಿಂಗ ಬಳಲುವುದೆ ?

"ಅರ್ಥರಹಿತ ಆಚರಣೆಗಳಲ್ಲಿ ಮುಂದುವರಿಯುತ್ತ ಸಾಗಿದಾಗ ಸಾಗಿದ ಶ್ರಮ ವಲ್ಲದೇ ಬೇರಾವ ಫಲವಿಲ್ಲ. ನೀರಕಂಡಲ್ಲಿ ಮುಳುಗಿ ಮರವ ಕಂಡಲ್ಲಿ ಸುತ್ತಿ ಧನ್ಯ ರಾದೆವೆಂಬ ಜನ ದೇವನ ಸ್ವರೂಪವನ್ನೇನು ಬಲ್ಲರು ?

"ಸ್ಪೃಶ್ಯಾಸ್ಪೃಶ್ಯತೆಯ ಕಲ್ಪನೆ ಒಂದು ರಂಗದಲ್ಲಿ ಮಾತ್ರವಲ್ಲದೇ ವಿವಿಧ ರಂಗಗಳಲ್ಲಿ ವಿವಿಧ ರೂಪಗಳಲ್ಲಿ ಅಡಗಿದೆ. ಮಾನವ ಮಾನವರಲ್ಲಿ ಸ್ಪೃಶ್ಯಾಸ್ಪೃಶ್ಯ ಭೇದವೆಣಿಸುವುದು ಮಾತ್ರವಲ್ಲ, ನೆಲನೆಲದಲ್ಲಿ, ಜಲಜಲದಲ್ಲಿ, ಹೂವುಗಳಲ್ಲಿ, ಭಾಷೆಗಳಲ್ಲಿ, ದಿಕ್ಕುಗಳಲ್ಲಿ, ಅಂಗಾಂಗಗಳಲ್ಲಿ, ಕಾಲದಲ್ಲಿ ಹೀಗೆ ವಿವಿಧ ರೀತಿಯಲ್ಲಿ ಇದೆ. ನಿರ್ವಿಕಾರವಾಗಿ ಹರಿಯುವ ಕಾಲಪ್ರವಾಹದಲ್ಲಿ ಒಳ್ಳಿತು, ಕೆಟ್ಟುದು, ರಾಹು-ಗುಳಿಕ ಇತ್ಯಾದಿ ಭೇದಗಳನ್ನು ಸೃಷ್ಟಿಸಿ ಭಯಭೀತರಾಗುವರು. ಸೃಷ್ಟಿಯಲ್ಲಿ ದೊರೆಯುವ ನೀರಿನಲ್ಲಿ ಭೇದವನ್ನೆಣಿಸಿ 'ಕಾಶಿಯ ಗಂಗೆ ಅತ್ಯಂತ ಶ್ರೇಷ್ಠ ಅಲ್ಲಿ ಮಿಂದರೆ ಸರ್ವಪಾಪ ನಿವೃತ್ತಿ' ಎಂದು ನಂಬುವರು. ದೇವನನ್ನು ಅರ್ಥವಾಗುವ ಮಾತೃಭಾಷೆಯಲ್ಲಿ ಕರೆದರೆ ಸಾಲದು; ಸಂಸ್ಕೃತದಲ್ಲಿಯೇ ಕರೆಯಬೇಕೆಂಬುದು ಭ್ರಮೆ. ಭಾಷೆಗಳೆಲ್ಲ ಮಾನವ ಬುದ್ಧಿಯಿಂದ ನಿರ್ಮಿತವಾದ ಸಾಧನೆಗಳು. ಭಾವವು ಹೃದಯದ ಭಾಷೆ, ಅದುವೇ ಸರ್ವಶ್ರೇಷ್ಠ. ಭಾವಸಂಪತ್ತಿಲ್ಲದ ಶಬ್ದ ಜಾಲದಿಂದ ಪ್ರಯೋಜನವೇನು? ಶ್ರೀಸಾಮಾನ್ಯನೂ ದೇವನನ್ನು ಒಲಿಸಿಕೊಳ್ಳಬಹುದಾದ ಸಹಜ ಮತ್ತು ಸರಳ ದಾರಿಯೊಂದು ನಿರ್ಮಾಣವಾಗಬೇಕಾಗಿದೆ. ಅಂತಹ ಶಿವ ಪಥದ ನಿರ್ಮಾಣಮಾಡುವ ಹೊಂಗನಸನ್ನು ಕಾಣುತ್ತಿರುವೆ ನಾನು. ಜೀವಾತ್ಮರೆಂಬ ಯಾತ್ರಿ ಕರು ದೇವಗುರಿ-ಎಡೆಗೆ ಅವ್ಯಾಹತವಾಗಿ ಸಾಗುತ್ತಿರುವರು. ಎಲ್ಲರೂ ಪಥಿಕರು, ದೇವನಿಗೆ ಶರಣಾದ ಶರಣರು-ಇವರಿಗೆ ಜಾತಿ ಮತ್ತು ಪಂಥಗಳ ಗೊಂದಲವಿಲ್ಲ. ಇಂಥದೊಂದು ಆದರ್ಶವಾದ ಸಮಾಜದ ರಚನೆ ಪೂರ್ತಿಯಾದಾಗ ನನ್ನ ಬಾಳು ಸಾರ್ಥಕ". ಬಸವಣ್ಣನು ನಿರರ್ಗಳವಾಗಿ ತನ್ನ ಅನಿಸಿಕೆ, ಆದರ್ಶಗಳನ್ನು ತೋಡಿ ಕೊಂಡಾಗ ಸಭೆಯು ಮೌನವಾಗಿ ಕೇಳಿತು. ಜಾತವೇದ ಮುನಿಗಳು ಆಶ್ಚರ್ಯ-ಅಭಿಮಾನಗಳಿಂದ ಸಂಭ್ರಾಂತರಾದರು ಇಡೀ ಸಭೆಯ ಕುತೂಹಲ ಸೆಳೆದ ಬಸವಣ್ಣ ನವರು, ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಬಲದೇವರಸರ ದೃಷ್ಟಿವಲಯದ ಪ್ರಮುಖ ಆಕರ್ಷಣೆಯಾದರು. ಎಲ್ಲರೂ ಆ ತರುಣ ವಟುವಿನ ಪ್ರತಿಭೆ-ಪಾಂಡಿತ್ಯ, ಚಿಂತನಶೀಲತೆಗಳ ಬಗ್ಗೆ ಅಚ್ಚರಿ ವ್ಯಕ್ತಪಡಿಸುತ್ತ ಚದುರಿದರು.

ವಿವಾಹದ ಪ್ರಸ್ತಾಪ

ರಾತ್ರಿಯಿಡೀ ಬಲದೇವರಸರ ಚಿತ್ತತಾವರೆಯಲ್ಲಿ ಬಸವ ನೆನಪಿನ ಝೇಂಕಾರ. ಯಾರಿವನು ? ಎಂಥ ಪ್ರತಿಭಾವಂತ ! ಎಂಬ ಉದ್ಗಾರ. ನಸುಕಿನಲ್ಲೇ ಎದ್ದು ಮಿಂದು ಮಡಿಯುಟ್ಟು ಗುರುದರ್ಶನಕ್ಕೆ ಬಲದೇವರಸರು ಆಗಮಿಸಿದಾಗ ಕೇಳಿದ ಮೊದಲ ಪ್ರಶ್ನೆ :

"ತೇಜಸ್ವಿಯಾದ ಪ್ರತಿಭಾನ್ವಿತನಾದ ಆ ತರುಣವಟುವು ಯಾರು ಗುರುಗಳೆ?" ಬಲದೇವರು ಮಂದಹಾಸಭರಿತರಾಗಿ ನಕ್ಕರು. "ಅವನೇ, ಬಲದೇವರಸರ ಸ್ವಂತ ಸಹೋದರಿ ಮಾದಲಾಂಬಿಕೆಯ ಮಗ " ಬಲದೇವರಸರ ಆಶ್ಚರ್ಯಕ್ಕೆ ಪಾರವಿಲ್ಲದಾಯಿತು. "ಓಹೋ, ಅವನೇ ನನ್ನ ಸೋದರಿಯ ಮಗ ಬಸವರಸ, ಉದ್ಧಟನಾಗಿ ತಾಯಿತಂದೆಯರ ಮಾತನ್ನು ಧಿಕ್ಕರಿಸಿ ಹೋದ ಬಾಲಕ. ಎಂಥ ಅದ್ಭುತ ಶಿವಲೀಲೆ !"

"ಅವನು ಉದ್ಧಟನಲ್ಲ ಬಲದೇವರಸರೇ ! ದಿಟ್ಟ ಹೃದಯದ ಕ್ರಾಂತಿಪುರುಷ. ದೈವಾನುಗ್ರಹದ ಸಾಕಾರ ರೂಪು ತನ್ನ ವಿವೇಕ ಶಕ್ತಿಯ ಒರೆಗೆ ಸರಿಕಾಣದುದನ್ನು ನಿರ್ಭಯವಾಗಿ ವಿರೋಧಿಸುವ ವಿಚಾರವಾದಿ "

"ಎಂಥಾ ಪ್ರತಿಭಾಶಾಲಿ ನನ್ನ ಸೋದರಳಿಯ ! ಗುರುದೇವಾ, ನನ್ನದೊಂದು ಸಣ್ಣ ಬಿನ್ನಹ. ಕಣ್ಣಾಲಿಯೋಪಾದಿ ಜೋಪಾನ ಮಾಡಿರುವ, ನನ್ನ ಅಚ್ಚುಮೆಚ್ಚಿನ ಕುವರಿ ಗಂಗಾಂಬಿಕೆಯನ್ನು ಬಸವರಸರಿಗೆ ಕೊಟ್ಟು ವಿವಾಹ ಮಾಡಿ, ನನ್ನ ಅಪಾರ ಸಂಪತ್ತಿಗೆ ಒಡೆಯನನ್ನಾಗಿ ಮಾಡುವ ಇಚ್ಛೆ ಉದಿಸಿದೆ ತಾವು ಅನುಮೋದಿಸಿ, ಆಶೀರ್ವದಿಸಿರಿ." ಗುರುಗಳು ಗಂಭೀರವದನರಾದರು. ಬಲದೇವರಸರು ಗಾಬರಿಗೊಂಡು ನುಡಿದರು, "ನನ್ನ ಅಪೇಕ್ಷೆ ತಪ್ಪಾಗಿದ್ದರೆ ಮನ್ನಿಸಿರಿ."

"ಹಾಗೇನಿಲ್ಲ ಆಮಾತ್ಯರೆ! ಬಸವಣ್ಣನು ಅತ್ಯಂತ ಅಂತರ್ಮುಖ ಸ್ವಭಾವದವ. ಸಂಸಾರ ಜೀವನವನ್ನು ಪ್ರವೇಶಿಸುವ ಬಗ್ಗೆ ಕನಸಿನಲ್ಲಿಯೂ ಚಿಂತಿಸದವನು. ಅನೇಕ ಆದರ್ಶಗಳನ್ನು ತಲೆ-ಹೃದಯಗಳಲ್ಲಿ ತುಂಬಿಕೊಂಡವನು. ಇಂಥವನ ಮುಂದೆ ಮದುವೆಯ ವಿಚಾರ ಪ್ರಸ್ತಾಪಿಸುವುದು ಹೇಗೆ ?"

"ತುಂಬಾ ವಿನಯಶಾಲಿಯಾದ ಅವನು ತಮ್ಮ ಮಾತುಗಳನ್ನು ಖಂಡಿತಾ ಮೀರಲಾರನು. ತಾವು ಪ್ರಸ್ತಾಪಿಸಿರಿ...." ಜಾತವೇದ ಮುನಿಗಳು ತಮ್ಮಲ್ಲಿಯೇ ಚಿಂತಿಸಿ, ಏನನ್ನೋ ನಿರ್ಧರಿಸಿಕೊಂಡು ಬಸವಣ್ಣನಿಗೆ ಹೇಳಿಕಳಿಸಿದರು.

ಜಾತ್ರೆಯ ಗದ್ದಲದಿಂದ ದೂರ ಸರಿದು, ಕೃಷ್ಣೆ-ಮಲಾಪಹಾರಿಯರ ಸಂಗಮದಲ್ಲಿ ಮಿಂದು ದೂರದ ನಡುಗಡ್ಡೆಯ ಮೇಲೆ ಧ್ಯಾನಾಸಕ್ತನಾಗಿ ಮೈಮರೆತಿದ್ದ ಬಸವಣ್ಣನಿಗೆ ಗುರುಗಳಿಂದ ಕರೆ ಬಂದಾಗ ಎಚ್ಚರವಾಗಿ, ಬಹಿರ್ಮುಖನಾದ. ಅವಸರದಿಂದ ಗುರುಗಳ ಬಳಿಗೆ ಬಂದು ನಮಸ್ಕರಿಸುವಾಗ ಬಲದೇವರಸರನ್ನು ಕಂಡು ವಂದಿಸಿದ.

"ಬಸವರಸರೇ, ತಾವು ಬಹಳ ಪ್ರತಿಭಾನ್ವಿತ ಧೀಮಂತ್ರಿಗಳು...."

"ಇದೆಲ್ಲ ತಮ್ಮ ಅಭಿಮಾನವಷ್ಟೆ "

"ನಿನ್ನೆ ನಿಮ್ಮ ಮಾತು ಅತ್ಯಂತ ಪರಿಣಾಮಕಾರಿಯಾಗಿತ್ತು. ವಕ್ತೃತ್ವ ನಿರರ್ಗಳವಾಗಿ, ಹೃದಯವೇದ್ಯವಾಗಿತ್ತು."

"ಆದರೆ, ಪ್ರಧಾನಿಗಳೇ ಮಾತಿನಲ್ಲಿ ಇಂಪಾಗಿ ನುಡಿಯುವುದು ಸುಲಭ. ಹೇಳಿದಂಥ ಸಮಾಜ ರಚನೆ ಕಷ್ಟಸಾಧ್ಯ. ವೈಚಾರಿಕ ಸಮಾಜ ರಚನೆಯ ಉದ್ದೇಶ ಕೇಳಿ ಸಂತಸಪಡುವವರೇ ನಿರ್ಮಾಣ ಮಾಡಲು ಸಿದ್ಧರಾಗರು. ನನ್ನ ಕನಸು ನನಸಾಗುವದೆಂದೋ ?" ವಿಷಾದದಿಂದ ನುಡಿದ.

ತತ್ತ್ವಜ್ಞಾನ. ಸಮಾಜ ರಚನೆಯ ಜಾಡಿನಲ್ಲಿ ಸಾಗಬಹುದಾಗಿದ್ದ ವಿಚಾರ ಸರಣಿಯ ದಾರಿ ತಪ್ಪಿಸಲು ಗುರುಗಳು ನುಡಿದರು :

"ಬಸವರಸ, ಇವರು ಕೇವಲ ಚಾಲುಕ್ಯ ರಾಜ್ಯದ ಪ್ರಧಾನಿಗಳಾದ ಬಲದೇವರಸರಷ್ಟೇ ಅಲ್ಲ ; ನಿನ್ನ ತಾಯಿಯ ಸ್ವಂತ ಸಹೋದರರು. ನಿನ್ನ ಸೋದರ ಮಾವನವರು "

"ಕ್ಷಮಿಸಿ ಗುರುಗಳೇ, ಚಾಲುಕ್ಯ ರಾಜ್ಯದ ಪ್ರಧಾನಾಮಾತ್ಯರಾದ ಬಲದೇವರಸರಿಗೆ ತಲೆಬಾಗಿ ವಂದಿಸುವೆ. ಇದಕ್ಕಿಂತ ಹೆಚ್ಚಿನ ರಕ್ತಸಂಬಂಧದ ಪ್ರಸ್ತಾಪ ಬೇಡ. ಪರಮಾತ್ಮನಿಗೆ ಶರಣಾದ ಬಳಿಕ, ಗುರುವೇ ತಾಯಿ-ತಂದೆ, ಗುರುಬಂಧುಗಳೇ ನಿಜ ಸಹೋದರರು. ನಂಟು ಭಕ್ತಿ ನಾಯಕ ನರಕ ..."

ಗುರುಗಳು ಏಕಾಂತದಲ್ಲಿ ವಿವಾಹ ವಿಷಯ ಪ್ರಸ್ತಾಪಿಸಿದಾಗ ಬಸವಣ್ಣ ಹೌಹಾರಿ, "ಇದೇಕೆ ಗುರುಗಳೇ, ನಾನೇನಾದರೂ ತಪ್ಪು ಮಾಡಿದೆನೇ ? ನಿಮ್ಮ ಸನ್ನಿಧಿಯಿಂದ ದೂರ ಮಾಡಿ ಹೊರಗೆ ಕಳಿಸುವ ಕಾಠೋರ್ಯ ಏಕೆ ?"

"ಬಸವಣ್ಣಾ : ನಿನ್ನಂಥ ಶಿಷ್ಯನನ್ನು ಹೊರಗಟ್ಟುವ ಭಾವನೆ ನನಗಿಲ್ಲ. ಬಲದೇವರಸರಂಥ ಉನ್ನತ ಸ್ಥಾನದಲ್ಲಿರುವವರನ್ನು ಆಶ್ರಯಿಸಿ, ಗಂಗಾಂಬಿಕೆಯನ್ನು ವರಿಸಿ, ಉನ್ನತ ಪದವಿಗೆ ನೀನೇರು "

"ನನಗಾವ ಪದವಿ ಬೇಡ; ಬ್ರಹ್ಮಪದವಿ, ವಿಷ್ಣುಪದವಿ, ರುದ್ರಪದವಿಗಳಾವೂ ಬೇಡ. ನಿಮ್ಮಂಥ ಜ್ಞಾನಿಗಳ ಸೇವೆಯೇ ಸಾಕು "

"ನನ್ನ ವ್ಯಕ್ತಿಗತ ಸೇವೆ ಮಾಡುವವರು ಅನೇಕರಿದ್ದಾರೆ. ಸಮಾಜ-ಧರ್ಮಗಳಿಗಾಗಿ ದುಡಿಯುವವರು ಅತ್ಯಂತ ದುರ್ಲಭ. ನಿನಗಾಗಿ ಅಲ್ಲವಾದರೂ, ಲೋಕಕ್ಕಾಗಿಯಾದರೂ ಉನ್ನತ ಪದವಿಗೆ ನೀನೇರಬೇಕು." ಬಸವಣ್ಣನು ದಿಗ್ಭ್ರಾಂತನಾಗಿ ಮೌನ ತಾಳಿದ. ಅಕ್ಕನನ್ನು ಕೇಳಿದಾಗ ಆಕೆಯೂ ವಿವಾಹದ ವಿಚಾರ ಪ್ರೋತ್ಸಾಹಿಸಿದಳು. ತನ್ನ ವಿಚಾರದಲ್ಲಿ ತಾನೇ ಒಂಟಿಯಾದಾಗ ದುಃಖ ಉಮ್ಮಳಿಸಿತು. ಸಂಗಮೇಶ್ವರ ದೇವಾಲಯಕ್ಕೆ ಹೋಗಿ ತನ್ನ ಅಳಲನ್ನು ತೋಡಿಕೊಂಡು

ವಿಷಯವೆಂಬ ಹಸುರ ತಂದು ಎನ್ನ ಮುಂದೆ ಪಸರಿಸಿದೆಯಯ್ಯ,
ಪಶುವೇನು ಬಲ್ಲುದೋ ? ಹಸುರೆಂದೆಳಸುವದು.
ವಿಷಯ ರಹಿತನ ಮಾಡಿ ಭಕ್ತಿರಸವ ದಣಿಯ ಮೇಯಿಸಿ
ಸುಬುದ್ಧಿ ಎಂಬ ಉದಕವ ಎರೆದು
ನೋಡಿ ಸಲಹಯ್ಯ ಕೂಡಲ ಸಂಗಮದೇವಾ !

ಪರಮಾತ್ಮ, ಈಗ ನನ್ನ ಪರವಾಗಿ ಮಾತನಾಡುವವರು ಯಾರೂ ಇಲ್ಲ. ನೀನೇ ಮಾರ್ಗ ತೋರು. ಯಾವ ಆಮಿಷಗಳಿಗೂ ಮನ ಸೋಲದಂತೆ ಅನುಗ್ರಹಿಸು," ಎಂದು ಪರಿತಪಿಸುವಾಗಲೇ ಬೆಳಕೊಂದು ಆಕಾರ ತಾಳಿ ಎದುರು ನಿಂತಿತು. ಸಂಗಮೇಶ್ವರನು ಸಗುಣರೂಪಧಾರಿಯಾಗಿ ನುಡಿದ:

"ಎಲೆ ಮಗನೆ ಬಸವಣ್ಣ, ನಿನ್ನುಂ ಮಹೀತಳದೊಳ್ ಮೆರೆಪೆವು. ನೀಂ ಬಿಜ್ಜಳರಾಯನಿಪ್ಪ ಮಂಗಳವಾಡಕ್ಕೆ ಹೋಗು." ಈ ವಾಣಿಯನ್ನು ಕೇಳುತ್ತಿದ್ದಂತೆಯೇ ಬೆಚ್ಚಿ ಬೆಂಡಾದ ಬಸವಣ್ಣ, ಅತ್ಯಂತ ದುಃಖತಪ್ತನಾಗಿ ನುಡಿದ :

"ದೇವಾ ಎಂಥಾ ಕ್ರೂರಿ ನೀನು ! ನಾನು ಮಾಡಿದ ತಪ್ಪೇನು ? ಬೆಳದಿಂಗಳಲ್ಲಿ ಶಾಖವಿರುವದುಂಟೇ ? ಅಮೃತದಲ್ಲಿ ವಿಷವಿರುವದೆ ? ಆಶ್ರಯಿಸಿದವರನ್ನು ಹೊರತಳ್ಳುವದು ಅದಾವ ನ್ಯಾಯ ? ಅನ್ನವ ಕೇಳುವ ಮಗುವಿಗೆ ಹೆತ್ತ ತಾಯಿ ಎಂದೂ ವಿಷ ಕೊಡಳು. ಮಹಾದಾನಿಯಾದ ನೀನು ಇಂತು ವಿಷ ಉಂಟಿಸಬಹುದೆ ? ಇದು ನಿನ್ನ ನಿಷ್ಕಳಂಕ ಪ್ರೇಮಕ್ಕೆ ಸಲ್ಲದ ಕ್ರೌರ್ಯ." ಹುಸಿಮುನಿಸಿನಿಂದ ಬಿನ್ನವಿಸಿಕೊಳ್ಳುವಾಗಲೇ ಮತ್ತೆ ಸಂಗಮೇಶ್ವರನ ಆಜ್ಞೆಯಾಯಿತು. "ಬಸವಣ್ಣ ನನ್ನ ಮೇಲೆ ನಿನಗೆಷ್ಟು ಭಕ್ತಿಯೋ ಅದಕ್ಕಿಂತ ಮಿಗಿಲಾದ ಮಮತೆ ನನಗಿದೆ. ನಿನ್ನನ್ನಗಲಿ ನಾನಿರುವೆನೆ ? ನಿನ್ನ ಬೆನ್ನ ಹಿಂದಿನ ಬಲವಾಗಿ ನಾನಿರುವೆ. ನನ್ನ ಸಂಕಲ್ಪವನ್ನು ನಿನ್ನ ಮುಖಾಂತರ ನಾನು ಈಡೇರಿಸಿಕೊಳ್ಳುವೆ. ನನಗಾಗಿ ನೀನು ಸಾಧನವಾಗಬೇಕು. ನಾಳೆ ಬೆಳಿಗ್ಗೆ ಸ್ನಾನ ಮಾಡಿ ಶುಚಿರ್ಭೂತನಾಗಿ ಬಾ. ನಿನಗೆ ನೇರವಾಗಿ ಅನುಗ್ರಹಿಸುವೆ. ನಾನೇ ನಿನಗೆ ಗುರುವು. ಮಹಾಮಣಿಹ ಹೊತ್ತು ಹೊರಡು. ವೈವಾಹಿಕ ಜೀವನವನ್ನು ಸ್ವೀಕರಿಸಿಯೂ ಆಧ್ಯಾತ್ಮಿಕ ಸಿದ್ಧಿಯನ್ನು ಪಡೆಯಲು ಬರುವುದೆಂಬ 'ಜೀವನ ಉದಾತ್ತೀಕರಣ ಸಿದ್ಧಾಂತ' ಜಗಕ್ಕೆ ಬೋಧಿಸು. ನಾನು ನಿರವಯವನಾದರೆ ನೀನು ನನ್ನ ಸಾವಯವ ಪ್ರತಿನಿಧಿ. ನಡೆ ಮಗನೆ, ನನ್ನ ಅನುಗ್ರಹ ನಿನ್ನ ಮೇಲೆ ಸದಾ ಇದೆ."

ಉಕ್ಕುವ ಹಾಲಿಗೆ ತಣ್ಣೀರು ಬಿದ್ದಂತಾಗಿ, ಮನಸ್ಸು ಉದ್ವಿಗ್ನತೆಯಿಂದ ದೂರವಾಯಿತು. ತನ್ನಲ್ಲಿಯೇ ತಾನು ದೃಢ ನಿರ್ಧಾರ ಕೈಗೊಂಡು ಬಸವಣ್ಣನು ನಮಸ್ಕರಿಸಿ ಅಲ್ಲಿಂದ ಎದ್ದು ಹೊರನಡೆದನು.

(ಸಶೇಷ)

ಬಾಳಬುತ್ತಿ :
ಸಮುದಾಯ ಬಲ

ಜಗದ್ಗುರು ಮಾತೆ ಮಹಾದೇವಿ

ಬಹೂನಾಮಲ್ಪ ಸಾರಾಣಾಂ ಸಂಹತಿಃ ಕಾರ್ಯಸಾಧಿಕಾ ।
ತೃಣೈರ್ಗುಣತ್ವ ಮಾಪನ್ನೈರ್ಬಧ್ಯಂತೇ ಮತ್ತದಂತಿನಃ ॥

—ಭೋಜಪ್ರಬಂಧ

ಹುಲ್ಲಿನ ಎಸಳುಗಳಿಗಾಗಲೀ, ತೆಂಗಿನ ನಾರಿಗಾಗಲೀ ಯಾವುದೇ ಶಕ್ತಿಯಿಲ್ಲ. ಆನೆಯಾಗಲೀ ಹಸುವಾಗಲೀ ಹುಲ್ಲನ್ನು ತಿನ್ನಬಲ್ಲುದು. ಅದೇ ಹುಲ್ಲಿನ ಎಸಳುಗಳೆಲ್ಲ ಸೇರಿ, ಹಗ್ಗವಾದಾಗ ಅತ್ಯಂತ ಶಕ್ತಿಯುತವಾದ ಆನೆಯನ್ನೂ ಬಂಧಿಸಬಲ್ಲವು. ಒಗ್ಗಟ್ಟಿನಲ್ಲಿ ಅಂಥ ಬಲವಿದೆ. ಅನೇಕ ಪಕ್ಷಿಗಳೆಲ್ಲ ಸೇರಿ ಒಮ್ಮೆಗೇ ಬಲೆಯನ್ನು ಹಾರಿಸಿದ ಪ್ರಸಂಗವನ್ನು ಪಂಚತಂತ್ರದ ಕಥೆಗಳಲ್ಲಿ ನೋಡುತ್ತೇವೆ. ಕಾಡಿಗೆ ಮೇಯಲು ಹೋಗಿ ಮುಸ್ಸಂಜೆಯಲ್ಲಿ ವಾಪಸಾಗುವಾಗ ದನದ ಹಿಂಡಿನಿಂದ ತಪ್ಪಿಸಿಕೊಂಡು ಹಿಂದುಳಿದ ಹಸುವಿಗಾಗಿ ಹುಲಿ ಅರಸುತ್ತಿರುತ್ತದೆ. ನಿರಾಯುಧಧಾರಿಗಳಾದ ಹಸುವಿನಂತಹ ಅಹಿಂಸಾತ್ಮಕ ಪ್ರಾಣಿಗಳು ಸಹ ಹಿಂಡಿನಲ್ಲಿ ಸಂಚರಿಸುವಾಗ ಅಪಾರ ಒಗ್ಗಟ್ಟಿನಿಂದ ಕ್ರೂರ ಪ್ರಾಣಿಗಳನ್ನು ಎದುರಿಸುತ್ತವೆ. ಒಂದು ವರ್ತುಳಾಕಾರದಲ್ಲಿ ಹಸುಗಳೆಲ್ಲ ನಿಂತು, ಕೊಂಬುಗಳನ್ನು ಹೊರಮುಖ ಮಾಡಿಕೊಂಡು ಹೋರಾಡಿದರೆ ಹುಲಿಯು ಅಂಜಿಗಡಗಡ ನಡುಗುತ್ತದೆ. ಜೇನ್ನೊಣಗಳು ರಾಣಿಜೇನಿನ ನೇತೃತ್ವದಲ್ಲಿ ಒಗ್ಗೂಡಿ ಮಕರಂದವನ್ನು ಸಂಗ್ರಹಿಸಿ, ಜೇನುತುಪ್ಪವನ್ನು ಲೋಕಕ್ಕೆ ನೀಡುತ್ತವೆ ಇದು ಒಗ್ಗಟ್ಟಿನ ಪ್ರತಿಫಲ.

ಒಂದು ಹೆಣ್ಣಾನೆಗೆ ಹೆರಿಗೆಯಾಗುವ ಕಾಲದಲ್ಲಿ ಸಮಸ್ತ ಗಜವರ್ಗವು ಆ ನೋವು ತಿನ್ನುವ ಹೆಣ್ಣಾನೆಯ ಸುತ್ತ ಕೋಟೆಕಟ್ಟಿ ಅಬಲೆಯಾದ ತಾಯಿಯನ್ನು ನಿಸ್ಸಹಾಯಕವಾದ ಕಂದನನ್ನು ರಕ್ಷಿಸುತ್ತವೆ. ಒಮ್ಮೆ ಒಂದು ಪ್ರಸಂಗ ಜರುಗಿತು. ನಾವು ಪೂಜೆ-ಪ್ರಸಾದ ಮಾಡಿದ್ದ ಜಾಗದಲ್ಲಿ ಅಕಸ್ಮಾತ್ತಾಗಿ ಚಪಾತಿಯ ಚೂರೊಂದು ಬಿದ್ದಿತ್ತು. ಯಾರೂ ಅದನ್ನು ಗಮನಿಸಿಲ್ಲ. ಕೆಲವು ಸಮಯದ ಬಳಿಕ ನಾನಲ್ಲಿ ಬಂದು ಕುಳಿತು ಏನೋ ಬರೆಯಲು ಆರಂಭಿಸಿದೆ. ಒಂದು ಇರುವೆ ಬಂದು ಸುಮಾರು ಐವತ್ತು ಪೈಸೆ ನಾಣ್ಯದಗಲದ ಚಪಾತಿ ಚೂರನ್ನು ನೋಡಿ, ನಿರಾಶವಾಗಿ ಹೊರಟು ಹೋಯಿತು. ಸ್ವಲ್ಪ ಹೊತ್ತಿನಲ್ಲಿ ಹತ್ತಾರು ಇರುವೆಗಳು ಬಂದವು. ಕುತೂಹಲ

ದಿಂದ ಗಮನಿಸುತ್ತಿದ್ದೆ ನಾನು. ಬಂದವು ಶಿಸ್ತಿನ ಸಿಪಾಯಿಗಳಂತೆ. ಚಪಾತಿಯ ಚೂರಿನ ಸುತ್ತಲೂ ನಿಂತವು. ಎತ್ತಿಕೊಂಡು ಮೆಲ್ಲನೆ ಹೊರಟೇಬಿಟ್ಟವು. ದೇವ ಸೃಷ್ಟಿಯ ಇನ್ನೊಂದು ಪವಾಡವನ್ನು ಕಂಡಂತೆನಿಸಿ ಸುಮ್ಮನೇ ನೋಡತೊಡಗಿದೆ. ಒಂದು ಇರುವೆ ಮುಂದೆ ಹೋಗಿ ದಾರಿಯನ್ನು ಗಮನಿಸಿ ಮರಳಿ ಬರುತ್ತಿತ್ತು. ದಾರಿ ನಿರಾತಂಕವಾಗಿದೆ ಎಂದು ತಿಳಿದಾದ ಬಳಿಕ ವಾಪಸ್ಸು ಬಂದು ಕಾರ್ಮಿಕ ಇರುವೆಗಳಿಗೆ ಮುಂದೆ ಸಾಗಲು ಸೂಚನೆ ಕೊಡುತ್ತಿತ್ತು. ಅಂತೂ ಹಾಗೂ ಹೀಗೂ ಮಾಡಿ ಇರುವೆಗಳು ಆ ಚಪಾತಿ ಚೂರನ್ನು ಸಾಗಿಸಿಯೇ ಬಿಟ್ಟವು. ಮಾನವರಂತೆ ಕಚ್ಚಾಡಲಿಲ್ಲ. ತಮ್ಮ ಗುರಿ ಮುಟ್ಟುವ ತನಕ ಒಂದೇ ಸಂಯಮ, ಸಹನೆ, ಸಹಕಾರಗಳಿಂದ ಸಾಗಿದವು.

ಮೊದಲು ನೋಡಿದ ಇರುವೆ ತನಗಾಗುವಷ್ಟನ್ನು ತಿಂದುಬಿಟ್ಟಿದ್ದರಾಗಿತ್ತು. ಅದು ಸ್ವಾರ್ಥಿಯಾಗಲಿಲ್ಲ. ಆ ಸಂಪತ್ತು ಇತರರಿಗೂ ಸಿಗಲೆಂದು ಆಶಿಸಿ, ತನ್ನ ಒಡನಾಡಿಗಳನ್ನು ಕರೆತಂದು, ಚಪಾತಿಯನ್ನು ಹೊತ್ತೊಯ್ಯುವ ಯೋಜನೆ ಮಾಡಿತು. ಹಾಗೆ ಮಾನವನು ತನಗೆ ದೊರೆತ ಧನ, ವಿದ್ಯೆ, ಬುದ್ಧಿ, ಸಂಪತ್ತು ಇತರರಿಗೂ ಸಿಗಲೆಂದು ಏಕೆ ಪ್ರಯತ್ನಿಸಬಾರದು. ತನ್ನ ದೇಹಕ್ಕೆ ತೀರಾ ಭಾರವಾದ ಚಪಾತಿಯನ್ನು ಎಲ್ಲವೂ ಕೂಡಿ ಎತ್ತಿದಂತೆ, ಒಗ್ಗಟ್ಟಿನಿಂದ ಶ್ರಮಿಸಿದರೆ ಭಾರತೀಯರು ಏಕೆ ಸಂಪದಭಿವೃದ್ಧಿ, ದಾರಿದ್ರ್ಯ ನಿವಾರಣೆ ಸಾಧಿಸಲಾರರು ? ಎಲ್ಲರೂ ಏಕಪ್ರಕಾರದ ಸಹನೆ - ತ್ಯಾಗಗಳಿಂದ ದುಡಿದರೆ ಧರ್ಮ ಸಂರಕ್ಷಣೆ, ಸಮಾಜ ಸಂಘಟನೆ ಏಕೆ ಸಾಧ್ಯವಿಲ್ಲ. ಇಂಥವೆಲ್ಲ ವ್ಯಕ್ತಿಗತ ಪ್ರಯತ್ನದ ಅಳವಿಗೆ ಅಸಾಧ್ಯವಿದ್ದರೂ, ಸಾಮೂಹಿಕ ಪ್ರಯತ್ನಕ್ಕೆ ಅಸಾಧ್ಯವಲ್ಲ. ಅದನ್ನೆ ಬಸವಣ್ಣನವರು "ಭಕ್ತಿಪಕ್ಷ" ಕಟ್ಟಿ ಸಾಧಿಸಲು ಹೇಳುವರು:

> ಕಾಗೆ ಒಂದಗುಳ ಕಂಡರೆ ಕೂಗಿ ಕರೆಯದೆ ತನ್ನ ಕುಲವನೆಲ್ಲವನು.
> ಕೋಳಿ ಒಂದು ಗುಟುಕು ಕಂಡರೆ ಕೂಗಿ ಕರೆಯದೆ ತನ್ನ ಬಳಗವೆಲ್ಲವನು
> ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ ಆ ಕಾಗೆ ಕೋಳಿಗಳಿಗಿಂತ
> ಕರಕಷ್ಟ ಕಾಣಾ ಕೂಡಲಸಂಗಮದೇವಾ ।

ಕೆಲವು ಪ್ರಾಣಿಗಳಲ್ಲಿರುವ "ಬಳಗಪ್ರಜ್ಞೆ" ಮಾನವರು ಗಳಿಸಿಕೊಂಡರೆ ಅವರು ಒಕ್ಕೂಟ ರಚನೆ ಮಾಡಿಕೊಂಡು ಅಸಾಧ್ಯವಾದುದನ್ನು ಸಾಧಿಸಲು, ಅಭೇದ್ಯವಾದುದನ್ನು ಭೇದಿಸಲು ಬರುತ್ತದೆ.

★ ★ ★

ಸಾವಿರಾರು ಅಪಮಾನಗಳ ಗಾಯಗಳನ್ನು ಸ್ನೇಹಪೂರ್ಣವಾದ ಕಾಣಿಕೆಯೊಂದು ಮಾಯಿಸುವುದು.

—ಚಿಂಗ್ ಚೋ

ಕಲ್ಯಾಣ ಕಿರಣ

ಮಾಸಪತ್ರಿಕೆ

ಸಂಸ್ಕೃತಿ, ಸಾಹಿತ್ಯ, ನೀತಿ, ಆಧ್ಯಾತ್ಮ ಮೌಲ್ಯಗಳ ಪ್ರಸಾರಕ್ಕೆಮೀಸಲಾದ ಪತ್ರಿಕೆ

ಪ್ರಧಾನ ಸಂಪಾದಕರು :

ಪೂಜ್ಯ ಶ್ರೀ

ಜಗದ್ಗುರು ಮಾತೆ ಮಹಾದೇವಿ

* * *

ಪ್ರಕಾಶಕರು :

ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದ ಪರವಾಗಿ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಪ್ರಕಾಶನಪಡಿಸುವುದು.

ಕೇಂದ್ರ ಕಾರ್ಯಾಲಯ :

ಕಲ್ಯಾಣ ಕಿರಣ ಮಾಸಪತ್ರಿಕೆ

ಬಸವ ಮಂಟಪ, ನಂ. ೨೪, ಎರಡನೇ ವಿಭಾಗ, ಕಾರ್ಡ್‌ರೋಡ್, ರಾಜಾಜಿನಗರ

ಬೆಂಗಳೂರು–೫೬೦೦೧೦

ಕಲೆ :

ಬಿ. ಪಿ. ಕೃಷ್ಣಯ್ಯ

ಮುದ್ರಣ : ಸೂಪರ್ ಪ್ರಿಂಟರ್ಸ್

ಬೆಂಗಳೂರು–೫೬೦೦೫೩

ಚಂದಾ ವಿವರ :

ಬಿಡಿ ಸಂಚಿಕೆ :	ರೂ.	೧-೦೦
ವಾರ್ಷಿಕ :	ರೂ.	೧೨-೦೦
ದ್ವೈವಾರ್ಷಿಕ :	ರೂ.	೨೩-೦೦
ಆಜೀವ ಸದಸ್ಯತ್ವ :	ರೂ.	೧೫೧-೦೦
ಪೋಷಕರು	ರೂ.	೫೦೧-೦೦
ಮಹಾಪೋಷಕರು :	ರೂ.	೧೦೦೧-೦೦

* ಪತ್ರಿಕೆಯು ಪ್ರತಿ ತಿಂಗಳ ದಿನಾಂಕ ಒಂದರಂದು ಪ್ರಕಟವಾಗುವುದು.

* ಲೇಖಕರು ಲೇಖನಗಳನ್ನು ೧೦ನೇ ದಿನಾಂಕದೊಳಗೆ ಕಳಿಸಬೇಕು.

* ಪತ್ರಿಕೆಯ ಉದ್ದೇಶವಾದ ಧಾರ್ಮಿಕ, ಸಾಂಸ್ಕೃತಿಕ, ಎಲ್ಲಾ ಬಗೆಯ ತಾತ್ವಿಕ ವಿಚಾರಗಳ ಲೇಖನ, ಕಥೆ, ಕವನಗಳಿಗೆ ಸ್ವಾಗತವಿದೆ.

* ಲೇಖನಗಳನ್ನು ಕಾಗದದ ಒಂದು ಮಗ್ಗುಲಿಗೆ ಸ್ಪಷ್ಟವಾಗಿ ಬರೆದಿರಬೇಕು.

* ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಫುಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಅಥವಾ ಸಾಧಾರ ಲೇಖನಗಳಾದರೆ ಅದನ್ನು ಸ್ಪಷ್ಟವಾಗಿ ತಿಳಿಸಿ, ಮೂಲ ಲೇಖಕರ ಮತ್ತು ಪ್ರಕಾಶರ ಹೆಸರನ್ನು ಕಾಣಿಸಬೇಕು.

* ಅಸ್ವೀಕೃತ ಲೇಖನ ಬೇಕಾಗಿದ್ದಲ್ಲಿ ಮರಳಿಸಲು ಬೇಕಾದ ಅಂಚೆವೆಚ್ಚಕ್ಕೆ ಅವಶ್ಯಕವಿರುವ ಸ್ಟಾಂಪುಗಳನ್ನೂ ಕಳಿಸಬೇಕು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.

* ಚಂದಾ ಹಣ ಕೊಡದೆ ಇದ್ದವರು ಪ್ರತಿಕೆಯು ತಲುಪಿದ ತಕ್ಷಣ ಕಳಿಸಬೇಕು.


* ಹೊಸ ಚಂದಾದಾರರು ೧೨-೦೦ (ಹನ್ನೆರಡು ರೂಪಾಯಿ) ಎಂ. ಓ. ಮಾಡಬೇಕು. (ವಿ.ಪಿ.ಇಲ್ಲ).

* ಚಂದಾದಾರರು ಪತ್ರ ವ್ಯವಹಾರಗಳಲ್ಲಿ ವಿಳಾಸದ ಮೊದಲಲ್ಲಿ ಬರೆದ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

* ವಿಳಾಸ ಬದಲಾವಣೆಗಳನ್ನು ತಿಳಿಸಬೇಕು. ಚಂದಾದಾರರಾದ ತಿಂಗಳಿಂದ ಮರುವರ್ಷದ ಆ ತಿಂಗಳವರೆಗೆ ಪತ್ರಿಕೆಗಳನ್ನು ಕಳಿಸಲಾಗುವುದು.

ಜುಲೈ : ೧೯೭೯ ಸಂಪುಟ : ೫
ಬಸವ ಶಕೆ : ೮೭೩ ಸಂಚಿಕೆ : ೩.

Licence to post without pre-payment No. WPP-25



Correspond to :

Phone : Basava Mantap : 82335 Phone : Basava Gangotri : 3 4

Basava Mantapa

No. 24, Chord Road, 2nd Block
Rajajinagar, Bangalore-560010

Cover Printed by : Bhaskar Printers, B-53